# ಅಧ್ಯಾಯ – ೯

# ಆಡಳಿತ ಮತ್ತು ರಾಜಸ್ವ

ಮೂಲತಃ ಜನತೆಗೆ ಹಾಗೂ ಅವರ ಆಸ್ತಿಪಾಸ್ತಿಗಳಿಗೆ ರಕ್ಷಣೆ ನೀಡುವ ಮತ್ತು ಈ ಉದ್ದೇಶಕ್ಕಾಗಿ ಕಂದಾಯ ವಸೂಲಿ ಮಾಡುವ ಎರಡು ಪ್ರಮುಖ ಉದ್ದೇಶಗಳನ್ನು ಹೊಂದಿದ್ದ ಸಾಮಾನ್ಯ ಆಡಳಿತ ವ್ಯವಸ್ಥೆಯು ಪ್ರಸ್ತುತ ತನ್ನ ವ್ಯಾಪ್ತಿಯಲ್ಲಿ ರಕ್ಷಣಾ ವಿಭಾಗಗಳಾದ ಪೋಲಿಸು ಹಾಗೂ ಜೈಲುಗಳು; ಕಂದಾಯ ಗಳಿಸುವ ವಿಭಾಗಗಳಾದ ಭೂಕಂದಾಯ, ಅಬ್ಕಾರಿ, ನೋಂದಣಿ ಮತ್ತು ಸ್ಟಾಂಪ್ ವಿಭಾಗಗಳನ್ನು ಹೊಂದಿರುತ್ತದೆ. ರಸ್ತೆ ನಿರ್ಮಾಣ ಮತ್ತು ನಿರ್ವಹಣೆ, ಸೇತುವೆ ಹಾಗೂ ಸರ್ಕಾರಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆಗಳು ಸರ್ಕಾರದ ಜವಾಬ್ದಾರಿಯಾಗಿದ್ದು, ಇವು ಲೋಕೋಪಯೋಗಿ ಇಲಾಖೆಯ ಮುಖಾಂತರ ನಡೆಯಬೇಕಾಗಿದ್ದಿತು. ಈ ಇಲಾಖೆಯೂ ಆಡಳಿತದ ಇನ್ನೊಂದು ಪ್ರಮುಖ ಇಲಾಖೆಯಾಗಿದೆ.

ಕ್ರಮೇಣ ಜನರಲ್ಲಿ ಹೆಚ್ಚಿದ ವಿದ್ಯಾಭ್ಯಾಸದ ಫಲವಾಗಿ ರಾಜಕೀಯ ಜಾಗೃತಿ ಉಂಟಾಗಿ, ಸರ್ಕಾರದ ವತಿಯಿಂದ ನಡೆಯಬೇಕಾದ 'ರಾಷ್ಟ್ರ ನಿರ್ಮಾಣ' ಕಾರ್ಯಕ್ರಮಗಳಾದ ವಿದ್ಯೆ, ಆರೋಗ್ಯ, ಕೃಷಿ ಮತ್ತು ಸಹಕಾರ ಇಲಾಖೆಗಳ ಅಭಿವೃದ್ಧಿಗಾಗಿ ಬೇಡಿಕೆ ಬಂದಿತು. ಹಾಗಾಗಿ ಕಳೆದ ಶತಮಾನದ ಎರಡು ಹಾಗೂ ಮೂರನೆಯ ದಶಕದಲ್ಲಿ ಈ ಇಲಾಖೆಗಳ ಅಭಿವೃದ್ಧಿಗೆ ಒತ್ತು ನೀಡಲಾಯಿತು. ಸ್ವಾತಂತ್ರ್ಯಾನಂತರ, ಸಾಮಾಜಿಕ ಬದ್ಧತೆ ಹೊಂದಿದ ಆರ್ಥಿಕ ಸ್ಥಿತಿಯನ್ನು ಒಳಗೊಂಡ 'ಕಲ್ಯಾಣರಾಜ್ಯ' ದ ನಿರ್ಮಾಣದತ್ತ ಸಕಲ ಪ್ರಯತ್ನಗಳನ್ನು ಮಾಡಲಾಯಿತು.

ಮಂಡ್ಯ ಜಿಲ್ಲೆಯು ೧೯೩೯ಕ್ಕೆ ಪೂರ್ವದಲ್ಲಿ ಮೈಸೂರು ಜಿಲ್ಲೆಯ ಭಾಗವಾಗಿದ್ದಿತು. ವಿಶ್ವೇಶ್ವರಯ್ಯ ನಾಲೆಯು ನಿರ್ಮಾಣವಾಗಿ ನೀರಾವರಿ ಕಾರ್ಯ ಅಭಿವೃದ್ಧಿ ಹೊಂದಲು ಪ್ರಾರಂಭವಾದಾಗ ಜಿಲ್ಲಾಧಿಕಾರಿ ಹಾಗೂ ಅವರ ಸಿಬ್ಬಂದಿಯ ಜವಾಬ್ದಾರಿ ಅಧಿಕವಾಯಿತು. ಮೈಸೂರು ಜಿಲ್ಲೆಯು ಮಂಡ್ಯವನ್ನು ಒಳಗೊಂಡ ಅತೀ ದೊಡ್ಡ ಜಿಲ್ಲೆಯಾಗಿದ್ದುದರಿಂದ, ಇಡೀ ಪ್ರಾಂತದ ಪರಿಣಾಮಕಾರಿ ಆಡಳಿತ ಕಷ್ಟಸಾಧ್ಯವಾಯಿತು. ಆಡಳಿತಗಾರರು ತಪಾಸಣೆ ನಡೆಸಬೇಕಾದ ಇಲಾಖೆಗಳ ಸಂಖ್ಯೆ ಬಹಳ ಹೆಚ್ಚಾಗಿದ್ದುದೇ ಇದಕ್ಕೆ ಕಾರಣವಾಗಿದ್ದಿತು. ಸುಗಮ ಆಡಳಿತಕ್ಕಾಗಿ

ಜಿಲ್ಲೆಯ ವಿಭಜನೆಯ ಅನಿವಾರ್ಯತೆಯನ್ನು ಮನಗಂಡ ಸರ್ಕಾರವು ಜುಲೈ ೧, ೧೯೩೯ ರಂದು ಜಿಲ್ಲೆಯನ್ನು ವಿಭಜಿಸಿ, 'ಮಂಡ್ಯ' ಜಿಲ್ಲೆಯ ನಿರ್ಮಾಣಕ್ಕೆ ಅಧಿಸೂಚನೆ ಹೊರಡಿಸಿತು.

ಇತರೆ ಆರು ಜಿಲ್ಲೆಗಳಾದ ಮೈಸೂರು, ಚಿಕ್ಕಮಗಳೂರು, ಹಾಸನ, ಕೊಡಗು, ದಕ್ಷಿಣ ಕನ್ನಡ ಮತ್ತು ಚಾಮರಾಜನಗರ ಜಿಲ್ಲೆಗಳ ಜೊತೆಗೆ ಮಂಡ್ಯ ಜಿಲ್ಲೆಯೂ ಮೈಸೂರು ವಿಭಾಗಕ್ಕೆ ಒಳಪಡುತ್ತದೆ. ಆಡಳಿತದ ಅನುಕೂಲಕ್ಕಾಗಿ ಜಿಲ್ಲೆಯನ್ನು ಎರಡು ಕಂದಾಯ ಉಪ-ವಿಭಾಗಗಳಾಗಿ ವಿಂಗಡಿಸಿ, ಮಂಡ್ಯ ಹಾಗೂ ಪಾಂಡವಪುರಗಳನ್ನು ಅವುಗಳ ಕೇಂದ್ರ ಸ್ಥಾನಗಳನ್ನಾಗಿ ಮಾಡಲಾಗಿದೆ. ಮಂಡ್ಯ ಉಪ-ವಿಭಾಗದಡಿ ಮಂಡ್ಯ, ಮಳವಳ್ಳಿ ಹಾಗೂ ಮದ್ದೂರು ತಾಲೂಕುಗಳು ಸೇರಿದರೆ, ಪಾಂಡವಪುರ ಉಪವಿಭಾಗದಡಿ ಪಾಂಡವಪುರ, ಕೃಷ್ಣರಾಜಪೇಟೆ, ನಾಗಮಂಗಲ ಮತ್ತು ಶ್ರೀರಂಗಪಟ್ಟಣಗಳು ಸೇರ್ಪಡೆಯಾಗಿರುತ್ತವೆ. ಈ ಮೇಲೆ ತಿಳಿಸಲಾಗಿರುವ ತಾಲೂಕುಗಳನ್ನು ಹಲವಾರು ಹೋಬಳಿಗಳನ್ನಾಗಿಯೂ, ಹೋಬಳಿಗಳನ್ನು ಹಳ್ಳಿಗಳನ್ನಾಗಿಯೂ ವಿಂಗಡಿಸಲಾಗಿದೆ. ಮುಂದೆ ಮಂಡ್ಯ ಜಿಲ್ಲೆಯ ಆಡಳಿತ ವ್ಯವಸ್ಥೆಯ ಐತಿಹಾಸಿಕ ಹಿನ್ನೋಟವನ್ನೂ, ಕಾಲಕಾಲಕ್ಕೆ ಈ ವ್ಯವಸ್ಥೆಯಲ್ಲಿ ಉಂಟಾದ ಬದಲಾವಣೆಗಳನ್ನೂ ಸಾಮಾನ್ಯ ಆಡಳಿತದ ಕ್ರಮವನ್ನೂ ವಿಭಾಗಾಧಿಕಾರಿಗಳ ಮಟ್ಟದಿಂದ ಗ್ರಾಮ ಪಂಚಾಯಿತಿಯವರೆಗೆ ಸ್ಥೂಲವಾಗಿ ಚರ್ಚಿಸಲಾಗಿದೆ.

**ವಿಭಾಗಾಧಿಕಾರಿ**

ಮಂಡ್ಯ ಜಿಲ್ಲೆಯನ್ನೊಳಗೊಂಡ ಮೈಸೂರು ವಿಭಾಗವು ವಿಭಾಗಾಧಿಕಾರಿಯ ಆಡಳಿತದಲ್ಲಿದೆ. ರಾಜ್ಯ ಪುನರ್ವಿಂಗಡಣೆ ಕಾಯಿದೆ, ೧೯೫೬ರಂತೆ, ಮೈಸೂರು ಅಡಾಪ್ಟೇಷನ್ ಆಫ್ ಲಾಸ್ ಆರ್ಡರ್ ಅಡಿ ವಿಭಾಗಾಧಿಕಾರಿಗಳ ಹುದ್ದೆಗಳನ್ನು ಸೃಷ್ಟಿಸಲಾಯಿತು. ೧೯೬೪ರ ಕರ್ನಾಟಕ ಭೂಕಂದಾಯ ಕಾಯ್ದೆಯನ್ವಯ ರಾಜ್ಯ ಸರ್ಕಾರ ವಿಭಾಗಾಧಿಕಾರಿಗಳನ್ನು ನೇಮಿಸುತ್ತದೆ. ಇವರು ರಾಜ್ಯ ಸರ್ಕಾರದ ಆದೇಶದಡಿ ವಿಭಾಗದ ಮುಖ್ಯ ಕಂದಾಯ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಾರೆ. ತಮ್ಮ ವಿಭಾಗದ ವ್ಯಾಪ್ತಿಯಲ್ಲಿನ ಎಲ್ಲಾ ಅಧೀನ ಕಂದಾಯ ಅಧಿಕಾರಿಗಳ ಅಧೀಕ್ಷಣೆ ನಡೆಸುತ್ತಾರೆ. ಕರ್ನಾಟಕ ಭೂಕಂದಾಯ ಕಾಯ್ದೆಯನ್ವಯ ತಮಗೆ ಪ್ರದತ್ತವಾಗಿರುವ ಅಧಿಕಾರದಡಿ ಇವರು ಕಾರ್ಯನಿರ್ವಹಿಸುತ್ತಾರೆ. ಕಂದಾಯ, ಸ್ವಯಮಾಡಳಿತ, ಕಾನೂನು ಸುವ್ಯವಸ್ಥೆ ಹಾಗೂ ಅಭಿವೃದ್ಧಿ ಚಟುವಟಿಕೆಗಳ ಮೇಲ್ವಿಚಾರಣೆ ಇವರದೇ ಆಗಿರುತ್ತದೆ.

**ಅಧಿಕಾರಗಳು :** ತಮ್ಮ ವಿಭಾಗದ ವ್ಯಾಪ್ತಿಗೊಳಪಡುವ ಪೋಲಿಸ್ ಇಲಾಖೆಯ ಮೇಲೆ ವಿಭಾಗಾಧಿಕಾರಿಯವರು ಕಾನೂನು ಹಾಗೂ ಸುವ್ಯವಸ್ಥೆಯನ್ನು ಕಾಪಾಡುವ ಅಧಿಕಾರ ಹೊಂದಿರುತ್ತಾರೆ. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು ಹಾಗೂ ಎಲ್ಲಾ ಇಲಾಖೆಗಳ ಮುಖ್ಯಸ್ಥರೊಂದಿಗೆ ಇವರು ನೇರವಾಗಿ ವ್ಯವಹರಿಸುವ ಅಧಿಕಾರವನ್ನೂ ಹೊಂದಿರುತ್ತಾರೆ. ಜಿಲ್ಲೆಯ ನ್ಯಾಯಾಂಗಾಧಿಕಾರಿಗಳನ್ನು ಹೊರತುಪಡಿಸಿ, ತಮ್ಮ ವಿಭಾಗಕ್ಕೆ ಒಳಪಡುವ ಎಲ್ಲಾ ಅಧಿಕಾರಿಗಳ ಗುಪ್ತವರದಿಗಳನ್ನು ಕಳುಹಿಸುವ ಹಾಗೂ ಇಲಾಖಾಧಿಕಾರಿಗಳಿಗೆ ಕೊಡಮಾಡಲ್ಪಟ್ಟಿರುವ ಹಣದ ಖರ್ಚಿನ ವಿಷಯದಲ್ಲಿಯೂ ಇವರು ತಮ್ಮ ಅಧಿಕಾರವನ್ನು ಚಲಾಯಿಸಬಹುದಾಗಿದೆ.

**ಕರ್ತವ್ಯಗಳು :** ಸರ್ಕಾರದ ನಿಯಮಗಳನ್ನು ತಮ್ಮ ವಿಭಾಗದಲ್ಲಿ ಜಾರಿ ಮಾಡುವಲ್ಲಿ ವಿಭಾಗಾಧಿಕಾರಿಯವರು ಅತ್ಯುನ್ನತ ನಿರ್ವಹಣಾಧಿಕಾರಿಯಾಗಿರುತ್ತಾರೆ. ಕಂದಾಯಾಡಳಿತ, ಕಾನೂನು ಹಾಗೂ ಸುವ್ಯವಸ್ಥೆ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ಜಾರಿಯಲ್ಲಿ ಇವರು ನೇರವಾಗಿ ಹೊಣೆಗಾರರಾಗಿರುತ್ತಾರೆ. ತಮ್ಮ ಅಧಿಕಾರ ವ್ಯಾಪ್ತಿಗೊಳಪಡುವ ಎಲ್ಲಾ ಇಲಾಖೆಗಳ ಪರಿವೀಕ್ಷಣೆ ನಡೆಸುತ್ತಾರೆ. ಇತರೆ ಇಲಾಖೆಗಳ ಅಧಿಕಾರಿಗಳೊಡನೆ ನೇರ ಸಂಪರ್ಕ ಹೊಂದಿ ಅವುಗಳ ಕಾರ್ಯಕ್ಷಮತೆಯನ್ನು ನೋಡಿಕೊಳ್ಳುತ್ತಾರೆ. ತಮ್ಮ ಇಲಾಖೆಯಡಿ ಕಾರ್ಯನಿರ್ವಹಿಸುವ ಸ್ಥಳೀಯ ಸಂಸ್ಥೆಗಳು ಹಾಗೂ ಗ್ರಾಮಪಂಚಾಯಿತಿ ಸಂಘಟನೆ ಹಾಗೂ ಪರಿವೀಕ್ಷಣೆ ನಡೆಸುವ ಸರಕಾರದ ಅತ್ಯುನ್ನತ ಅಧಿಕಾರಿಯಾಗಿರುತ್ತಾರೆ.

ಸಮುದಾಯ ಅಭಿವೃದ್ಧಿ, ರಾಷ್ಟ್ರೀಯ ವಿಸ್ತರಣಾ ಯೋಜನೆ ಹಾಗೂ ಇತರೆ ಯೋಜನೆಗಳಿಗೆ ಸಂಬಂಧಿಸಿದಂತೆ ವಿಭಾಗಾಧಿಕಾರಿಗಳೂ ಸಹ ಅಭಿವೃದ್ಧಿ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಾರೆ. ಈ ಹುದ್ದೆಗೆ ದತ್ತವಾದ ಅಧಿಕಾರದಲ್ಲಿ ಅವರು ಜಿಲ್ಲಾಧಿಕಾರಿಗಳಿಗೆ, ಯೋಜನಾಧಿಕಾರಿಗಳಿಗೆ, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಸಮುದಾಯ ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿರುವ ಎಲ್ಲಾ ಅಡೆತಡೆಗಳನ್ನು ನಿವಾರಿಸುವಲ್ಲಿ ಸಲಹೆಗಳನ್ನು ನೀಡಿ, ಅವುಗಳ ಪರಿವೀಕ್ಷಣೆ ಹಾಗೂ ಅಧೀಕ್ಷಣೆ ನಡೆಸಿ ಕಾಲಕಾಲಕ್ಕೆ ಸೂಚನೆಗಳನ್ನು ನೀಡುವುದು ಇವರ ಪ್ರಮುಖ ಕಾರ್ಯಗಳಲ್ಲಿ ಒಂದಾಗಿರುತ್ತದೆ. ವರ್ಷಕ್ಕೊಮ್ಮೆ ತಮ್ಮ ವ್ಯಾಪ್ತಿಯ ಜಿಲ್ಲಾಧಿಕಾರಿಯ ಎಲ್ಲಾ ಕಚೇರಿಗಳ, ಪ್ರತೀ ಜಿಲ್ಲೆಯ ಉಪವಿಭಾಗಾಧಿಕಾರಿಯ ಒಂದು ಕಚೇರಿಯ, ಪ್ರತೀ ಜಿಲ್ಲೆಯ ಒಂದು ತಾಲೂಕು ಕಚೇರಿಯ ಅಮೂಲಾಗ್ರ ತನಿಖೆಯನ್ನು ಇವರು ಮಾಡಬೇಕಾಗಿರುತ್ತದೆ. ಈ ರೀತಿ ತನಿಖೆ ಮಾಡಲ್ಪಟ್ಟ ಕಚೇರಿಗಳ ಯೋಜನಾ ಕಾರ್ಯಕ್ರಮಗಳ ಪ್ರಗತಿಯನ್ನೂ ಪರಿಶೀಲಿಸಬೇಕಾಗುತ್ತದೆ. ಅಲ್ಲದೆ ಅವುಗಳ ಅನುಷ್ಠಾನದಲ್ಲಿ ಕಾಣಬರುವ ಅಡೆತಡೆಗಳ ನಿವಾರಣೆಗಾಗಿ ಕ್ರಮ ಕೈಗೊಳ್ಳಬೇಕಾಗುತ್ತದೆ.

ಸರ್ಕಾರದ ಇತ್ತೀಚಿನ ನೀತಿಯಂತೆ, ಎಲ್ಲಾ ಇಲಾಖೆಗಳ ವಿಭಾಗೀಯ ಮಟ್ಟದ ಹುದ್ದೆಗಳನ್ನು ರದ್ದು ಮಾಡುವುದಾಗಿದ್ದು, ಅದರಂತೆ ವಿಭಾಗಾಧಿಕಾರಿಗಳ ಹುದ್ದೆಯನ್ನು ಸರ್ಕಾರವು ರದ್ದು ಮಾಡಲು ನಿರ್ಧರಿಸಿದೆ.

**ಜಿಲ್ಲಾಧಿಕಾರಿ**

ಮಂಡ್ಯ ಜಿಲ್ಲೆಯಲ್ಲಿ ಎರಡು ಉಪವಿಭಾಗಗಳಡಿಯ ಏಳು ತಾಲೂಕುಗಳು ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳ ಆಡಳಿತಕ್ಕೊಳಪಟ್ಟಿದ್ದರೂ, ಈ ಎರಡು ಉಪವಿಭಾಗಗಳ ಕಾರ್ಯದ ಉಸ್ತುವಾರಿಯನ್ನು ಜಿಲ್ಲಾಧಿಕಾರಿ ನಿರ್ವಹಿಸುತ್ತಾರೆ. ಇವರು ಕಂದಾಯ ವ್ಯವಸ್ಥೆ, ಕಾನೂನು ಹಾಗೂ ಸುವ್ಯವಸ್ಥೆ, ಅಭಿವೃದ್ಧಿ ಕಾರ್ಯಕ್ರಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ಉಸ್ತುವಾರಿಯನ್ನು ನಿರ್ವಹಿಸುವರು. ಜಿಲ್ಲೆಯ ಎಲ್ಲಾ ಸರ್ಕಾರಿ ಭೂಮಿಗೆ ಮೇಲ್ವಿಚಾರಕರಾಗಿಯೂ, ಖಾಸಗಿ ಭೂಮಿಗೆ ಪೋಷಕರಾಗಿಯೂ ಕಾರ್ಯನಿರ್ವಹಿಸುತ್ತಾರೆ. ಜಿಲ್ಲೆಯ ವ್ಯಾಪ್ತಿಗೆ ಒಳಪಡುವ ಎಲ್ಲಾ ಭೂಪ್ರದೇಶದ ಕಂದಾಯವನ್ನು ನಿಗಧಿಪಡಿಸುವ ಅಧಿಕಾರ ಹೊಂದಿದ್ದು, ಅದರ ವ್ಯಾಪ್ತಿಗೆ ಭೂಕಂದಾಯ, ವ್ಯವಸಾಯೇತರ ಕಂದಾಯವೂ ಒಳಪಡುತ್ತದೆ. ಕಂದಾಯ ನಿಗಧಿಪಡಿಸುವುದು, ನಿಗಧಿತ ಕಂದಾಯವನ್ನು ವಸೂಲಿ ಮಾಡುವುದು, ವಸೂಲಾದ ಕಂದಾಯವನ್ನು ಸಕಾಲಕ್ಕೆ ಸರ್ಕಾರಕ್ಕೆ ಜಮಾ ಮಾಡುವುದೇ ಇವರ ಪ್ರಮುಖ ಕರ್ತವ್ಯವಾಗಿರುತ್ತದೆ. ಇವರು ಭೂಕಂದಾಯ ಅಧಿನಿಯಮದ ರೀತ್ಯ ವಿಸ್ತೃತ ಅಧಿಕಾರವನ್ನು ಹೊಂದಿರುತ್ತಾರೆ. ವಿವಿಧ ನಿಯಮಗಳಡಿ ನೀರಾವರಿ, ಸೇತುವೆ ಮುಂತಾದ ವಿಷಯಗಳಲ್ಲಿ ಶುಲ್ಕ ಹಾಗೂ ತೆರಿಗೆಗಳನ್ನು ಪಾವತಿಸಿಕೊಳ್ಳುವುದೂ ಇವರ ಜವಾಬುದಾರಿಯಾಗಿರುತ್ತದೆ. ಕೇಂದ್ರ ಅಥವಾ ರಾಜ್ಯ ಸರ್ಕಾರಕ್ಕೆ ಸೇರಬೇಕಾದ ಭೂಕಂದಾಯವನ್ನು ತೆರಿಗೆ ನಿಯಮದ ರೀತ್ಯ ವಸೂಲು ಮಾಡಿ ಸಲ್ಲಿಸುವುದು ಇವರ ಹೊಣೆಯಾಗಿರುತ್ತದೆ. ತೆರಿಗೆ ಪಾವತಿಸದ ವ್ಯಕ್ತಿಗಳ ವಿಷಯದಲ್ಲಿ ತಮ್ಮ ಅಧಿಕಾರ ಚಲಾಯಿಸಿ ತೆರಿಗೆ ಪಾವತಿಸಿಕೊಳ್ಳುವ ಹಕ್ಕನ್ನೂ ಇವರು ಹೊಂದಿರುತ್ತಾರೆ. ಇವರು ಭೂದಾಖಲಾತಿಗಳ ಸಂರಕ್ಷಣಾಧಿಕಾರಿಯೂ ಆಗಿರುತ್ತಾರೆ. ಅಲ್ಲದೆ ಭೂಸ್ವಾಧೀನ ಕಾಯ್ದೆ, ಭೂಸುಧಾರಣಾ ಕಾಯ್ದೆ, ಭೂಕಂದಾಯ ಅಧಿನಿಯಮ ಹಾಗೂ ನೀರಾವರಿ ಕಾಯ್ದೆಯನ್ವಯ ಕಾನೂನು ಚಲಾಯಿಸುವ ಹಕ್ಕನ್ನು ಪಡೆದಿರುತ್ತಾರಲ್ಲದೆ, ಜಮೀನು ಸಂಬಂಧಿತ ತಕರಾರು ಪ್ರಕರಣಗಳನ್ನು ಇತ್ಯರ್ಥ ಪಡಿಸುವ ಕಾರ್ಯ ನಿರ್ವಾಹಕ ದಂಡಾಧಿಕಾರಿಯೂ ಆಗಿರುತ್ತಾರೆ. ಜಿಲ್ಲೆಯ ಕಾರ್ಯನಿರ್ವಾಹಕ ಜಿಲ್ಲಾ ದಂಡಾಧಿಕಾರಿಗಳಾದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿರುವ ಇವರು, ಜಿಲ್ಲೆಯ ಶಾಂತಿ ಪಾಲನೆ ಹಾಗೂ ಕಾನೂನು ಸುವ್ಯವಸ್ಥೆಯನ್ನೂ ನೋಡಿಕೊಳ್ಳುತ್ತಾರೆ. ಇದಲ್ಲದೆ ಜಿಲ್ಲಾ ಆಡಳಿತದಡಿ ಬರುವ ಇಲಾಖೆಗಳಾದ ಆರೋಗ್ಯ, ಶಿಕ್ಷಣ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಇವಕ್ಕೆಲ್ಲ ಪ್ರತ್ಯೇಕ

ಅಧಿಕಾರಿಗಳಿದ್ದರೂ ಈ ಎಲ್ಲಾ ಇಲಾಖೆಗಳ ಕಾರ್ಯನಿರ್ವಹಣೆಯ ಹೊಣೆಗಾರಿಕೆ ಜಿಲ್ಲಾಧಿಕಾರಿಯವರದೇ ಆಗಿರುತ್ತದೆ. ಈ ಎಲ್ಲಾ ಇಲಾಖೆಗಳಿಗೆ ಮಾರ್ಗದರ್ಶನ ಮಾಡುವ ಕಾರ್ಯ ಸಹ ಜಿಲ್ಲಾಧಿಕಾರಿಯವರದೇ ಆಗಿರುತ್ತದೆ. ವೃದ್ಧ ವಿಧವೆಯರ ಮಾಸಾಶನ, ಬಡ ಬಸುರಿಯರಿಗೆ ಹೆರಿಗೆ ಭತ್ಯೆ, ಅಂಗವಿಕಲರಿಗೆ ಸ್ಟೈಪೆಂಡ್ ನೀಡುವಿಕೆ ಮುಂತಾದ ಸಾಮಾಜಿಕ ಭದ್ರತಾ ಕ್ರಮಗಳೂ ಸಹ ಅವರ ಜವಾಬ್ದಾರಿಗಳಲ್ಲಿ ಸೇರಿವೆ. ಆಹಾರ ಮತ್ತು ನಾಗರೀಕ ಪೂರೈಕೆಯು ವ್ಯವಸ್ಥಿತ ರೀತಿಯಲ್ಲಿ ನಡೆಯುವುದನ್ನು ಜಿಲ್ಲಾಧಿಕಾರಿಗಳು ಮೇಲ್ವಿಚಾರಣೆ ನಡೆಸುತ್ತಾರೆ. ಲೋಕಸಭೆ, ರಾಜ್ಯಸಭೆ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಯೂ ಜಿಲ್ಲಾಧಿಕಾರಿಯದೇ ಜವಾಬುದಾರಿಯಾಗಿದ್ದು, ಮತದಾರರ ನೋಂದಣಿ ಹಂತದಿಂದ ಮೊದಲುಗೊಂಡು ಫಲಿತಾಂಶ ಪ್ರಕಟವಾಗುವವರೆಗೆ ಎಲ್ಲಾ ಹಂತಗಳಲ್ಲಿಯೂ ಯಾವುದೇ ಸಮಸ್ಯೆ ಉದ್ಭವಿಸದಂತೆ ಎಚ್ಚರಿಕೆ ವಹಿಸಬೇಕಾಗುತ್ತದೆ.

ಪುರಸಭೆಗಳಂತಹ ಸ್ಥಳೀಯ ಸಂಸ್ಥೆಗಳು ಜಿಲ್ಲಾಡಳಿತದ ನೇರ ಆಡಳಿತಕ್ಕೆ ಒಳಗಾಗದಿದ್ದರೂ ಅವುಗಳ ಮೇಲ್ವಿಚಾರಣೆ ಸಹ ಜಿಲ್ಲಾಧಿಕಾರಿ ನಡೆಸುತ್ತಾರೆ. ಗ್ರಾಮಪಂಚಾಯತಿಯಂತಹ ಸ್ಥಳೀಯ ಸಂಸ್ಥೆಗಳ ಆಡಳಿತವನ್ನು ಜಿಲ್ಲಾಭಿವೃದ್ಧಿ ಸಂಸ್ಥೆಯ ಮೂಲಕ ನಡೆಸಲಾಗುತ್ತದೆ.

ಇವಲ್ಲದೆ ಬರಗಾಲ, ನೆರೆಹಾವಳಿ, ಬೆಂಕಿ ಅನಾಹುತಗಳಂತಹ ತುರ್ತು ಪರಿಸ್ಥಿತಿಗಳನ್ನು ನಿಭಾಯಿಸುವುದೂ ಜಿಲ್ಲಾಧಿಕಾರಿಯ ಕರ್ತವ್ಯವಾಗಿರುತ್ತದೆ. ಜಿಲ್ಲೆಯ ಎಲ್ಲಾ ಇಲಾಖೆಗಳ ಸಹಾಯದಿಂದ ಮೇಲ್ಕಂಡ ಪರಿಸ್ಥಿತಿಯನ್ನು ಜಿಲ್ಲಾಧಿಕಾರಿಯು ನಿಯಂತ್ರಿಸಿ ಜನರಿಗೆ ಯಾವುದೇ ತೊಂದರೆಯಾಗದಂತೆ ಪರಿಹಾರ ಒದಗಿಸಬೇಕಾಗುತ್ತದೆ.

ಸರ್ಕಾರದ ಮುಖ್ಯ ಪ್ರತಿನಿಧಿಯಾಗಿ ಸಣ್ಣ ಉಳಿತಾಯ ಯೋಜನೆ ಮುಂತಾದ ಸಣ್ಣ ಕಾರ್ಯಕ್ರಮಗಳ ಅನುಷ್ಠಾನವು ಜಿಲ್ಲೆಯಲ್ಲಿ ನಡೆಯುವಂತೆ ಜಿಲ್ಲಾಧಿಕಾರಿಯವರು ನೋಡಿಕೊಳ್ಳುತ್ತಾರೆ. ಜಿಲ್ಲೆಯ ಕಂದಾಯಾಧಿಕಾರಿಯ ಕರ್ತವ್ಯದ ಜೊತೆಗೆ ಅಭಿವೃದ್ಧಿಕಾರ್ಯಗಳನ್ನು ಪರಿವೀಕ್ಷಿಸುವ ಉಪ ಅಭಿವೃದ್ಧಿ ಆಯುಕ್ತರಾಗಿ ರಾಷ್ಟ್ರೀಯ ಉಳಿತಾಯ ಯೋಜನೆಯ ಜಿಲ್ಲಾ ಸಲಹಾ ಸಮಿತಿಯ ಅಧ್ಯಕ್ಷರಾಗಿ, ಜಿಲ್ಲೆಯ ಅಧಿಕಾರಿಗಳ ಸಹಯೋಗ ಸಮಿತಿಯ ಅಧ್ಯಕ್ಷರಾಗಿ, ಜಿಲ್ಲೆಯ ಪ್ರಾದೇಶಿಕ ಸಾರಿಗೆ ಸಂಸ್ಥೆಯ ಅಧ್ಯಕ್ಷರಾಗಿ, ಜಿಲ್ಲಾ ಕುಟುಂಬ ಯೋಜನಾ ಘಟಕದ ಅಧ್ಯಕ್ಷರಾಗಿ ಹಾಗೂ ಜಿಲ್ಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸುತ್ತಾರೆ. ಇವರು ಜಿಲ್ಲಾ ಖಜಾನೆಯ ಮುಖ್ಯಾಧಿಕಾರಿಯೂ ಆಗಿರುತ್ತಾರೆ.

**ಕಂದಾಯ ಕಾರ್ಯಗಳು**

ಭೂಕಂದಾಯದ ನಿರ್ಧಾರ ಸಾಮಾನ್ಯವಾಗಿ ಮೂರು ವಿಧಗಳಾಗಿರುತ್ತವೆ. (ಅ) ಕೃಷಿ (ಆ) ಕೃಷಿಯೇತರ (ಇ) ಇತರೆ. ಮೇಲ್ಕಂಡ ಮೂರೂ ವಿಧದ ಕಂದಾಯ ಸಕಾಲಕ್ಕೆ ಪಾವತಿ ಮಾಡಲ್ಪಟ್ಟು, ಅದು ಸರ್ಕಾರಕ್ಕೂ ತಕ್ಷಣ ಪಾವತಿಯಾಗುವಂತೆ ನೋಡಿಕೊಳ್ಳುವುದು ಜಿಲ್ಲಾಧಿಕಾರಿಯ ಕರ್ತವ್ಯವಾಗಿರುತ್ತದೆ. ಭೂಕಂದಾಯ ಕಾಯ್ದೆಗಳಿಗೆ ಸಂಬಂಧಿಸಿದಂತೆ ಮತ್ತು ನೀರಾವರಿಗೆ ಬಳಸುವ ನೀರಿನ ದರಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗೆ ಹೇರಳವಾದ ಅಧಿಕಾರ ಕೊಡಮಾಡಲ್ಪಟ್ಟಿದೆ. ಭೂಕಂದಾಯಕ್ಕೆ ಸಂಬಂಧಿಸಿದ ಕರ್ತವ್ಯಗಳ ಜೊತೆಗೆ, ಭೂಸುಧಾರಣಾ ಕಾಯ್ದೆ, ಭೂಸ್ವಾಧೀನ ಕಾಯ್ದೆ, ಧಾರ್ಮಿಕ ದತ್ತಿ ಕಾಯ್ದೆ, ನೀರಾವರಿ ಕಾಯ್ದೆ, ಅಬ್ಕಾರಿ ಕಾಯ್ದೆ, ಸಾರ್ವಜನಿಕ ಆರೋಗ್ಯ ಕಾಯ್ದೆ, ಅಗತ್ಯ ವಸ್ತುಗಳ ಪೂರೈಕೆ ಕಾಯ್ದೆ, ವೃದ್ಧರ ಮಾಸಾಶನ ಕಾಯ್ದೆ ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಕಾಯ್ದೆಗಳಂತಹ ಹಲವಾರು ಕಾನೂನುಗಳಡಿ ಅಧಿಕಾರ ಕೊಡಮಾಡಲ್ಪಟ್ಟಿದೆ. ಕಂದಾಯ ಸಂಬಂಧಿತ ಕುಂದು ಕೊರತೆಗಳನ್ನು ನಿವಾರಿಸುವಲ್ಲಿ ಜಿಲ್ಲಾಧಿಕಾರಿ ಅರೆ ನ್ಯಾಯಾಂಗಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಾರೆ. ಜಿಲ್ಲೆಯ ಎಲ್ಲಾ ಮುಜರಾಯಿ ಸಂಸ್ಥೆಗಳೂ ಇವರ ಆಡಳಿತಕ್ಕೊಳಪಡುತ್ತವೆ.

## ನ್ಯಾಯಾಂಗ ಕರ್ತವ್ಯಗಳು

ಜಿಲ್ಲಾಧಿಕಾರಿಯು ಜಿಲ್ಲಾ ದಂಡಾಧಿಕಾರಿಯೂ ಆಗಿದ್ದು, ಕಾನೂನು ಮತ್ತು ಸುವ್ಯವಸ್ಥೆಯ ಪಾಲಕರಾಗಿರುತ್ತಾರೆ. ಕಾರ್ಯಾಂಗ ಮತ್ತು ನ್ಯಾಯಾಂಗಗಳು ಬೇರ್ಪಡೆಯಾದ ನಂತರ ನ್ಯಾಯ ವಿತರಣಾಧಿಕಾರವು ಜಿಲ್ಲಾ ನ್ಯಾಯಾಧೀಶರ ಕಕ್ಷೆಗೆ ವರ್ಗಾಯಿಸಲ್ಪಟ್ಟಿದೆ. ವಿಚಾರಣಾ ಹಂತದಲ್ಲಿ ಜಿಲ್ಲಾಧಿಕಾರಿಗೆ ನ್ಯಾಯಾಂಗ ಕರ್ತವ್ಯವಿಲ್ಲದಿದ್ದರೂ ಕರ್ನಾಟಕ ಪೋಲಿಸ್ ಅಧಿನಿಯಮ ಮತ್ತು ದಂಡ ಪ್ರಕ್ರಿಯಾ ಸಂಹಿತೆಯಂತೆ (ಕ್ರಿಮಿನಲ್ ಪ್ರೊಸಿಜರ್ ಕೋಡ್) ಜಿಲ್ಲಾಧಿಕಾರಿಗೆ ವ್ಯಾಪಕ ಅಧಿಕಾರವಿದ್ದು ಶಾಂತಿಪಾಲನೆಯ ವಿಶೇಷ ಸಂದರ್ಭಗಳಲ್ಲಿ ಪೋಲೀಸ್ ದಳಕ್ಕೆ ಮಾರ್ಗದರ್ಶನ ನೀಡಬಹುದು ಹಾಗೂ ಜಿಲ್ಲೆಯಲ್ಲಿನ ಸೆರೆಮನೆಗಳ ಉಸ್ತುವಾರಿ ಸಹ ಮಾಡಬಹುದಾಗಿದೆ. ಸಾರ್ವಜನಿಕ ಶಾಂತಿ ಪಾಲನೆಗಾಗಿ ಯಾವುದೇ ವ್ಯಕ್ತಿಯನ್ನು ಪ್ರತಿಬಂಧಕ ಸ್ಥಾನಬದ್ಧತೆಯಲ್ಲಿ ಅಥವಾ ದಿಗ್ಬಂಧನದಲ್ಲಿ ಇಡಬಹುದು. ಅಸ್ಪೃಶ್ಯತಾ ನಿವಾರಣೆಯ ಕಾನೂನಿನ ಅನುಷ್ಠಾನಕ್ಕೆ ಹಾಗೂ ವೀಸಾ, ಪಾಸ್‌ಪೋರ್ಟ್ ಸಂಬಂಧಿತ ನಿಯಮಗಳ ಕಾರ್ಯಾಚರಣೆಗೆ ಇವರೇ ಜವಾಬ್ದಾರರು. ಜಿಲ್ಲಾಧಿಕಾರಿಯು ಈ ಮುಂದೆ ನಮೂದಿಸಲಾದ ಹಲವಾರು ಕಾಯ್ದೆ/ನಿಯಮಗಳಡಿ ಅಧಿಕಾರ ಚಲಾಯಿಸಿ ಕರ್ತವ್ಯ ನಿರ್ವಹಿಸುತ್ತಾರೆ; ಕರ್ನಾಟಕ ಭೂಕಂದಾಯ ಅಧಿನಿಯಮ ೧೯೬೪ ಮತ್ತು ೧೯೬೬, ಕರ್ನಾಟಕ ಭೂಮಂಜೂರಾತಿ ನಿಯಮ ೧೯೬೯, ಕರ್ನಾಟಕ ಭೂ ಸುಧಾರಣಾ ಅಧಿನಿಯಮ ೧೯೬೧, ಕರ್ನಾಟಕ ಋಣ ಪರಿಹಾರ ಅಧಿನಿಯಮ ೧೯೭೮, ಕರ್ನಾಟಕ ಪರಿಶಿಷ್ಟ ಜಾತಿ–ವರ್ಗಗಳ ಪರಭಾರೆ ನಿಷೇಧ ಅಧಿನಿಯಮ ೧೯೭೫, ಕರ್ನಾಟಕ ತುಂಡು ಹಿಡುವಳಿ ನಿಷೇಧ ಮತ್ತು ನಿಯೋಜನಾ ಅಧಿನಿಯಮ ೧೯೬೬, ಕರ್ನಾಟಕ ಗ್ರಾಮಾಧಿಕಾರಿಗಳ ರದ್ದತಿ ಕಾನೂನು ೧೯೬೧, ಕರ್ನಾಟಕ ನೀರಾವರಿ ಅಧಿನಿಯಮ ೧೯೬೫, ಕರ್ನಾಟಕ ನೀರು ಶುಲ್ಕ ಅಭಿವೃದ್ಧಿ ಕರ ಅಧಿನಿಯಮ, ಕರ್ನಾಟಕ ಅರಣ್ಯ ಅಧಿನಿಯಮ, ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮ ಹಾಗೂ ನಿಯಮಾವಳಿಗಳು, ಕರ್ನಾಟಕ ಇನಾಂ ರದ್ದತಿ ಅಧಿನಿಯಮ ೧೯೭೭, ಕರ್ನಾಟಕ ಧಾರ್ಮಿಕ ದತ್ತಿ ಹಾಗೂ ಇನಾಂ ರದ್ದತಿ ಅಧಿನಿಯಮ ೧೯೫೫, ಭೂಸ್ವಾಧೀನ ಕಾಯ್ದೆ ಹಾಗೂ ತಿದ್ದುಪಡಿ ಕಾಯ್ದೆ ೧೯೮೪, ಜನತಾ ಪ್ರಾತಿನಿಧ್ಯ ಕಾನೂನು, ಕರ್ನಾಟಕ ಅಕ್ಕಿ ಸಂಸ್ಕರಣಾ ಕೈಗಾರಿಕಾ ಕಾನೂನು, ಕರ್ನಾಟಕ ವರ್ಕ್ಫ್ ಕಾನೂನು, ಕರ್ನಾಟಕ ಪೋಲಿಸ್ ಅಧಿನಿಯಮ ೧೯೬೩, ಕರ್ನಾಟಕ ಚಲನಚಿತ್ರ ನಿಯಂತ್ರಣ ಕಾನೂನು ೧೯೬೪, ಕರ್ನಾಟಕ ಟ್ರೆಜರಿ ಕಾನೂನು, ಸಿಮೆಂಟ್ ನಿಯಂತ್ರಣ ಕಾನೂನು, ಭಾರತೀಯ ತುರ್ತು ಸ್ಥಿತಿ ಕಾಯ್ದೆ, ದಂಡ ಪ್ರಕ್ರಿಯಾ ಸಂಹಿತೆ, ಸಿವಿಲ್ ಪ್ರಕ್ರಿಯಾ ಸಂಹಿತೆ, ನಾಗರಿಕತ್ವ ಅಧಿನಿಯಮ ೧೯೫೫, ಪೆಟ್ರೋಲಿಯಂ ಕಾನೂನು, ಕರ್ನಾಟಕ ಸೀಮೆಎಣ್ಣೆ ಲೈಸನ್ಸ್ ಆದೇಶ, ಕರ್ನಾಟಕ ಅವಶ್ಯ ವಸ್ತುಗಳ ವ್ಯಾಪಾರ ಪರವಾನಿಗಿ ಆದೇಶ ೧೯೫೯, ಭಾರತ ಬಂದೂಕು ಕಾನೂನು ೧೯೫೯, ಸಿಡಿಮದ್ದುಗಳ ಕಾಯ್ದೆ ನಿಯಮಾವಳಿಗಳು ಮತ್ತು ೧೯೮೪, ಕರ್ನಾಟಕ ಮುನಿಸಿಪಲ್ ಕಾನೂನು ೧೯೬೪, ಭಾರತೀಯ ಮನೋವಿಕಲರ ಅಧಿನಿಯಮ ೧೯೧೨, ಮುದ್ರಣಾಲಯ ನೋಂದಣಿ ಮತ್ತು ಪುಸ್ತಕಗಳ ಕಾಯ್ದೆ, ಪಾಲುದಾರಿಕೆ ವರ್ಗಾವಣೆ ಕಾಯಿದೆ, ಮುಜರಾಯಿ ವರ್ಗಾವಣೆ ಕೈಪಿಡಿ ಹಾಗೂ ಜೀತ ಪದ್ಧತಿ ನಿರ್ಮೂಲನಾ ಕಾಯಿದೆ ೧೯೭೬.

ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದ ನಂತರವೂ ಜಿಲ್ಲೆಯಲ್ಲಿ ಸರ್ಕಾರದ ಪ್ರತಿನಿಧಿ ಜಿಲ್ಲಾಧಿಕಾರಿಯೇ ಆಗಿರುವುದರಿಂದ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದ (೧) ಫಲಾನುಭವಿಗಳನ್ನು ಗುರುತಿಸುವುದು, (೨) ಭೂನಿವೇಶನ ಪೂರೈಸುವುದು ಹಾಗೂ (೩) ಸಾಲ ವಸೂಲಿಗಳಂತಹ ಕಾರ್ಯಗಳನ್ನು ಜಿಲ್ಲಾಧಿಕಾರಿಯೇ ನೋಡಿಕೊಳ್ಳುತ್ತಾರೆ.

ಜಿಲ್ಲಾಧಿಕಾರಿಯ ನೆರವಿಗೆ ಕೇಂದ್ರ ಸ್ಥಾನಿಕ ಸಹಾಯಕರು (ಹೆಡ್ ಕ್ವಾರ್ಟರ್ಸ್ ಅಸಿಸ್ಟೆಂಟ್) ಇದ್ದು, ಇವರು 'ಎ' ವೃಂದದ ಪತ್ರಾಂಕಿತ ಹುದ್ದೆಯಲ್ಲಿ ಅಪರ ಜಿಲ್ಲಾ ದಂಡಾಧಿಕಾರಿಯಾಗಿಯೂ ಕಾರ್ಯನಿರ್ವಹಿಸುತ್ತಾರೆ. ಇವರು ಜಿಲ್ಲಾಧಿಕಾರಿಯ ಎಲ್ಲಾ ರೀತಿಯ ಅಧಿಕಾರ ಚಲಾವಣೆಯಲ್ಲಿ ಸಹಾಯಕರಾಗಿ ಕೆಲಸ ಮಾಡುತ್ತಾರೆ.

ಜಿಲ್ಲಾಧಿಕಾರಿಗಳಿಗೆ ಇರುವಂತೆ ಇವರಿಗೂ ಒಬ್ಬ ಆಪ್ತ ಸಹಾಯಕರಿರುತ್ತಾರೆ. ಕಂದಾಯ ವಿಭಾಗದಲ್ಲಿ ನಾಲ್ವರು ಶಿರಸ್ತೇದಾರರು, ಒಬ್ಬ ಬಾಡಿಗೆ ನಿಯಂತ್ರಣ ಅಧಿಕಾರಿ ಹಾಗೂ ಇತರ ಸಿಬ್ಬಂದಿ ಇರುತ್ತಾರೆ. ರಾಷ್ಟ್ರೀಯ ಉಳಿತಾಯ ಯೋಜನೆಯ ನಿರ್ವಹಣೆಗೆ ಒಬ್ಬ ಉಪನಿರ್ದೇಶಕರಿರುತ್ತಾರೆ. ಇವರ ನೆರವಿಗೆ ಉಪವಿಭಾಗಕ್ಕೊಬ್ಬರಂತೆ ನಾಲ್ವರು ವಿಸ್ತರಣಾಧಿಕಾರಿಗಳಿರುತ್ತಾರೆ.

ಜಿಲ್ಲಾ ಕಚೇರಿಯ ಆಹಾರ ವಿಭಾಗದ ಉಸ್ತುವಾರಿಗೆ ಒಬ್ಬ ಉಪನಿರ್ದೇಶಕರು (ಆಹಾರ), ಒಬ್ಬ ತಹಶೀಲ್ದಾರರು ಮತ್ತು ಯೋಜನಾ ವಿಭಾಗದಲ್ಲಿ ಒಬ್ಬ ಯೋಜನಾಧಿಕಾರಿ, ಒಬ್ಬ ಉಪ ನಿರ್ದೇಶಕರು, ಹಾಗೂ ಒಬ್ಬ ಸಂಖ್ಯಾಧಿಕಾರಿ ಇರುತ್ತಾರೆ. ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ವಿಭಾಗಕ್ಕೆ ಒಬ್ಬ ಕಚೇರಿ ಅಧೀಕ್ಷಕ, ಒಬ್ಬ ಅಭಿವೃದ್ಧಿ ನಿರೀಕ್ಷಕ, ಹಿಂದುಳಿದ ವರ್ಗಗಳ ನಿರ್ದೇಶಕ, ಇತರ ಸಮಾಜ ಕಲ್ಯಾಣ ಇಲಾಖೆಗೆ ಒಬ್ಬ ಉಪನಿರ್ದೇಶಕ, ಒಬ್ಬ ಸಮಾಜಕಲ್ಯಾಣ ಆಧಿಕಾರಿ, ಒಬ್ಬ ಕಚೇರಿ ಅಧೀಕ್ಷಕ ಹಾಗೂ ಇಬ್ಬರು ಸಾಮಾಜಿಕ ಪೌಷ್ಟಿಕ ಆಹಾರ ಕಾರ್ಯಕ್ರಮದ ನಿರೀಕ್ಷಕರಿರುತ್ತಾರೆ.

**ಉಪವಿಭಾಗಾಧಿಕಾರಿ**

ಇವರು ಜಿಲ್ಲಾಧಿಕಾರಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಾ ತಹಶೀಲ್ದಾರರು, ಮತ್ತವರ ಕಿರಿಯ ಅಧಿಕಾರಿಗಳ ಮೇಲೆ ಉಸ್ತುವಾರಿಯ ಅಧಿಕಾರವನ್ನು ಹೊಂದಿರುತ್ತಾರೆ. ಇವರು ತಮ್ಮ ಉಪವಿಭಾಗಕ್ಕೆ ಸಂಬಂಧಪಟ್ಟ ಕಂದಾಯ ಹಾಗೂ ಅಭಿವೃದ್ಧಿ ಚಟುವಟಿಕೆಗಳ ಉಸ್ತುವಾರಿ ಮಾಡುತ್ತಾರೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ ಹೊಂದಿರುವ ಎಲ್ಲಾ ಅಧಿಕಾರವನ್ನು ಇವರೂ ಉಪವಿಭಾಗೀಯ ಮಟ್ಟದಲ್ಲಿ ಹೊಂದಿರುತ್ತಾರೆ. ಕಂದಾಯ ವಿಭಾಗದಲ್ಲಿ ಇವರು ಮೇಲ್ಮನವಿಯ ಪ್ರಥಮ ಅಧಿಕಾರಿಯಾಗಿದ್ದು, ಕರ್ನಾಟಕ ಭೂಕಂದಾಯ ಅಧಿನಿಯಮ ೧೯೬೪ರ ೫೬ನೇ ಪರಿಚ್ಛೇದದಂತೆ ಪ್ರದತ್ತವಾದ ಎಲ್ಲಾ ಅಧಿಕಾರಗಳನ್ನು ಚಲಾಯಿಸುತ್ತಾರೆ. ಇವರು ಭೂಸ್ವಾಧೀನದ ಅಧಿಕಾರವನ್ನು, ಭೂತೆರಿಗೆಯ ಅಧಿಕಾರವನ್ನೂ ಹೊಂದಿರುತ್ತಾರೆ. ಕರ್ನಾಟಕ ಭೂಸುಧಾರಣಾ ಕಾನೂನು ೧೯೬೧ರಡಿ ನೇಮಿಸಲ್ಪಟ್ಟ ಭೂನ್ಯಾಯ ಮಂಡಳಿಯ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸುತ್ತಾರೆ. ಕ್ಷೇತ್ರಾಭಿವೃದ್ಧಿ ಅಧಿಕಾರಿಯು ನಡೆಸುವ ಚಟುವಟಿಕೆಗಳ ಮೇಲ್ವಿಚಾರಣೆ ಇವರೇ ನಡೆಸಬೇಕಿದ್ದರೂ, ೧೯೮೭ರಲ್ಲಿ ಜಿಲ್ಲಾ ಪರಿಷತ್ ಕಾನೂನು ಅಸ್ತಿತ್ವಕ್ಕೆ ಬಂದ ನಂತರ ಈ ಅಧಿಕಾರವನ್ನೂ ಮೊಟಕುಗೊಳಿಸಲಾಗಿದೆ. ವಿಧಾನಸಭಾ ಚುನಾವಣೆಗೆ ನಿರ್ವಾಚನ ಅಧಿಕಾರಿ (ರಿಟರ್ನಿಂಗ್ ಆಫೀಸರ್) ಆಗಿರುತ್ತಾರೆ. ಅಲ್ಲದೆ ಅವರು ತಮ್ಮ ಉಪವಿಭಾಗದ ದಂಡಾಧಿಕಾರಿಯಾಗಿರುತ್ತಾರೆ. (ಅಂದರೆ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್) ಜಿಲ್ಲಾಧಿಕಾರಿಯ ಆದೇಶದಂತೆ ಕಾನೂನು ಪ್ರಕರಣಗಳ ತನಿಖೆ ಮತ್ತು ವಿಚಾರಣೆ ನಡೆಸುವ ಅಧಿಕಾರವನ್ನೂ ಇವರು ಹೊಂದಿರುತ್ತಾರೆ. ಇವರಡಿ ಕಾರ್ಯನಿರ್ವಹಿಸಲು ಒಬ್ಬ ಶಿರಸ್ತೇದಾರ, ನಾಲ್ವರು ಪ್ರಥಮ ದರ್ಜೆ ಸಹಾಯಕರು ಹಾಗೂ ಇತರೆ ಸಿಬ್ಬಂದಿ ಇರುತ್ತಾರೆ. ತಾಲೂಕು ಮಟ್ಟದ ಹಲವಾರು ಸಮಿತಿಗಳಿಗೆ ಪದನಿಮಿತ್ತ ಅಧ್ಯಕ್ಷರೂ, ಜಿಲ್ಲಾಮಟ್ಟದ ವಿವಿಧ ಸಮಿತಿಗಳಿಗೆ ಸದಸ್ಯರೂ ಆಗಿ ಉಪವಿಭಾಗಾಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ.

**ತಹಶೀಲ್ದಾರ**

ಮೊದಲಿಗೆ 'ಅಮಲ್ದಾರ್/ಮಾಮಲೇದಾರ್' ರೆಂದು ಕರೆಯಲ್ಪಡುತ್ತಿದ್ದ ತಹಶೀಲ್ದಾರರು ಉಪವಿಭಾಗಾ–ಧಿಕಾರಿಯ ಅಧೀನದಲ್ಲಿ ಕಾರ್ಯನಿರ್ವಹಿಸುವ, ತಾಲೂಕಿನ ಮೇಲೆ ಅಧಿಕಾರ ಹೊಂದಿರುವ ಅಧಿಕಾರಿ. ತಮ್ಮ ಮೇಲಾಧಿಕಾರಿಯ ಮೂಲಕ ಜಿಲ್ಲಾಧಿಕಾರಿಗೆ ಜವಾಬ್ದಾರರಾಗುವ ಇವರು ತಾಲೂಕಿನಲ್ಲಿ ಸರಕಾರದ ಪ್ರತಿನಿಧಿಯಾಗಿರುತ್ತಾರೆ. ತಾಲೂಕು ಮಟ್ಟದಲ್ಲಿ ಕಂದಾಯ ಪರಿವರ್ತನೆ, ಕಂದಾಯ ಸಂಬಂಧಿತ ತಕರಾರುಗಳ ವಿಚಾರಣೆ ಹಾಗೂ ತೀರ್ಪು, ಪಟ್ಟಾ (ಹಕ್ಕು ಪತ್ರ) ತನಿಖೆ, ಗ್ರಾಮಗಳ ಬೆಳೆಗಳ ಪರಿಸ್ಥಿತಿಯ ಅಂದಾಜು, ಮುಂತಾದ

ಕಾರ್ಯಗಳನ್ನು ನಿರ್ವಹಿಸುತ್ತಾರೆ. ಗ್ರಾಮಲೆಕ್ಕಿಗರು ಹಾಗೂ ಕಂದಾಯ ನಿರೀಕ್ಷಕರು (ರೆವಿನ್ಯೂ ಇನ್ಸ್‌ಪೆಕ್ಟರರು) ಇವರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಾರೆ. ತಾಲೂಕು ಮಟ್ಟದ ಸಮಸ್ಯೆಗಳಾದ ಸರ್ಕಾರಿ ಭೂಮಿ ಒತ್ತುವರಿ, ಭೂಸುಧಾರಣಾ ಕಾನೂನಿನ ಭಂಗ, ಕೃಷಿ ಭೂಮಿಗೆ ಮಂಜೂರಾದ ಸಾಲದ ವಿತರಣಾ ತನಿಖೆ ಹಾಗೂ ವಸೂಲಾತಿ, ಕಂದಾಯ, ನೀರಾವರಿ ಶುಲ್ಕ, ಪೋಟ್ ಹಿಸ್ಸಾ ಅಳತೆ ವೆಚ್ಚ ಮುಂತಾದ ಸರಕಾರಿ ಆದಾಯಗಳ ವಸೂಲಾತಿ, ಇವೆಲ್ಲ ಇವರ ಕರ್ತವ್ಯಗಳಾಗಿರುತ್ತವೆ. ಭೂಕಂದಾಯ ಅಧಿನಿಯಮ, ಭೂಸುಧಾರಣಾ ಅಧಿನಿಯಮ ಹಾಗೂ ತಾಲೂಕಿನ ಆಡಳಿತ ಸಂಬಂಧ ಮುಂತಾದ ನಿಯಮಗಳನ್ನು ಇವರು ಜಾರಿ ಮಾಡುತ್ತಾರೆ. ಆಹಾರ ಧಾನ್ಯ ಎತ್ತುವಳಿ (ಲೆವಿ), ನ್ಯಾಯ ಬೆಲೆ ಅಂಗಡಿಗಳ ಮೂಲಕ ಅಗತ್ಯ ವಸ್ತುಗಳ ನ್ಯಾಯಯುತ ವಿತರಣೆ, ಅಗತ್ಯ ವಸ್ತುಗಳ ದಾಸ್ತಾನು ತನಿಖೆ ಮುಂತಾದವೂ ಇವರದೇ ಹೊಣೆಯಾಗಿವೆ. ಅವಶ್ಯ ವಸ್ತುಗಳ ಅಧಿನಿಯಮ ಹಾಗೂ ನಿಯಾಮಾವಳಿಗಳಂತೆ ತಹಶೀಲ್ದಾರರಿಗೆ ಅನೇಕ ಅಧಿಕಾರಗಳು ದತ್ತವಾಗಿವೆ. ವೃದ್ಧರ ಪಿಂಚಣಿ, ವಿಧವೆಯರಿಗೆ ಹಾಗೂ ಅಂಗವಿಕಲರಿಗೆ ಮಾಸಾಶನ ಮಂಜೂರು ಮಾಡುವ ಅಧಿಕಾರ ಇವರಿಗಿದೆ. ಚುನಾವಣೆಗಳಿಗೆ ಸಂಬಂಧಿಸಿದಂತೆ ಇವರು ಅಸಿಸ್ಟೆಂಟ್ ರಿಜಿಸ್ಟ್ರೇಶನ್ ಆಫೀಸರ್ ಆಗಿದ್ದು, ವಿಧಾನಸಭಾ ಚುನಾವಣೆಗಳ ಸಮಯದಲ್ಲಿ ವಿಧಾನಸಭಾ ಕ್ಷೇತ್ರದ ಸಹಾಯಕ ನಿರ್ವಾಚನ ಅಧಿಕಾರಿ (ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರ್) ಆಗಿ ಜವಾಬ್ದಾರಿ ನಿರ್ವಹಿಸುತ್ತಾರೆ. ಇವರು ಮತದಾರರ ಪಟ್ಟಿ ತಯಾರಿಸಿ ಚುನಾವಣಾ ಯಂತ್ರದ ಉಸ್ತುವಾರಿಯನ್ನೂ ನೋಡಿಕೊಳ್ಳುತ್ತಾರೆ. ತಾಲೂಕಿನ ಶಾಂತಿಪಾಲನಾ ಅಧಿಕಾರಿಯಾದ ಇವರು (ಅಂದರೆ ತಾಲ್ಲೂಕು ಮ್ಯಾಜಿಸ್ಟ್ರೇಟ್) ದಂಡಾಧಿಕಾರಿಯೂ ಆಗಿರುತ್ತಾರೆ.

## ಕ್ಷೇತ್ರಾಭಿವೃದ್ಧಿ ಅಧಿಕಾರಿ

ಸಮುದಾಯ ಅಭಿವೃದ್ಧಿ ಘಟಕವಾದ ಪ್ರತೀ ತಾಲ್ಲೂಕು, ಒಬ್ಬ ಕ್ಷೇತ್ರಾಭಿವೃದ್ಧಿ ಅಧಿಕಾರಿ (ಬಿಡಿಒ)ಯ ಅಧೀನದಲ್ಲಿರುತ್ತದೆ. ಕ್ಷೇತ್ರಾಭಿವೃದ್ಧಿ ಅಧಿಕಾರಿಯು ತಾಲೂಕಿನ ಎಲ್ಲಾ ಅಭಿವೃದ್ಧಿಯ ಉಸ್ತುವಾರಿ ನೋಡಿಕೊಳ್ಳುತ್ತಾರೆ. ಮೊದಲಿಗೆ ತಾಲೂಕು ಅಭಿವೃದ್ಧಿ ಮಂಡಳಿಯ ಕಾರ್ಯನಿರ್ವಾಹಕರಾಗಿದ್ದ ಇವರು, ತಾಲೂಕು ಅಭಿವೃದ್ಧಿ ಸಮಿತಿಯ ಕಾರ್ಯದರ್ಶಿಯಾಗಿದ್ದರು. ಪ್ರಸ್ತುತ ಜಿಲ್ಲಾ ಪಂಚಾಯತ್ ವ್ಯವಸ್ಥೆಯಂತೆ ಅಸ್ತಿತ್ವಕ್ಕೆ ಬಂದಿರುವ ತಾಲೂಕು ಪಂಚಾಯಿತಿಯ ಕಾರ್ಯನಿವಾಹಣಾಧಿಕಾರಿ (ಎಕ್ಸಿಕ್ಯುಟಿವ್ ಆಫೀಸರ್) ಆಗಿರುತ್ತಾರೆ. ಒಬ್ಬ ವ್ಯವಸ್ಥಾಪಕ (ಮ್ಯಾನೇಜರ್) ಹಾಗೂ ಇತರ ಸಿಬ್ಬಂದಿ ಇವರಿಗೆ ಆಡಳಿತದಲ್ಲಿ ನೆರವಾಗುತ್ತಾರೆ.

## ಕಂದಾಯ ನಿರೀಕ್ಷಕ (ರೆವಿನ್ಯೂ ಇನ್ಸ್‌ಪೆಕ್ಟರ್)

ಹೋಬಳಿಗೊಬ್ಬರಂತೆ ಕಂದಾಯ ಅಥವಾ ರಾಜಸ್ವ ನಿರೀಕ್ಷಕರಿದ್ದು, ಇವರು ತಹಶೀಲ್ದಾರರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಾ, ಗ್ರಾಮ ಲೆಕ್ಕಿಗರ ಕೆಲಸದ ಉಸ್ತುವಾರಿ ವಹಿಸುತ್ತಾರೆ. ಜಿಲ್ಲೆಯ ತಾಲೂಕಿನಲ್ಲಿ ಎರಡೆರಡು ನಾಡ ಕಚೇರಿಗಳನ್ನು ಸರ್ಕಾರ ಪ್ರಾರಂಭಿಸಿದ ನಂತರ ಕಂದಾಯ ನಿರೀಕ್ಷಕರ ಸ್ಥಾನವನ್ನು ಶಿರಸ್ತೇದಾರರಿಗೆ ನೀಡಲಾಗಿದೆ. ಕಂದಾಯ ನಿರೀಕ್ಷಕರು ಗ್ರಾಮಲೆಕ್ಕಿಗ ಮತ್ತು ತಹಶೀಲ್ದಾರರ ನಡುವಣ ಕೊಂಡಿಯಂತೆ ಕಾರ್ಯ ನಿರ್ವಹಿಸುತ್ತಾ, ಭೂಕಂದಾಯ ಅಧಿನಿಯಮ ೧೯೬೪ ಹಾಗೂ ಭೂ ಸುಧಾರಣಾ ಅಧಿನಿಯಮ ೧೯೬೧ ಇವುಗಳ ಕಾರ್ಯಚರಣೆಗೆ ಹೊಣೆಗಾರರಾಗಿರುತ್ತಾರೆ. ಕಂದಾಯ, ಅಭಿವೃದ್ಧಿ ಶುಲ್ಕ, ನೀರಾವರಿ ತೆರಿಗೆ, ಭೂ ಸಂಬಂಧಿ ವರಮಾನ ಹಾಗೂ ಸಾಲಗಳ ವಸೂಲಿ, ಗ್ರಾಮ ಲೆಕ್ಕಿಗರ ಲೆಕ್ಕ ಪುಸ್ತಕಗಳ (ದಫ್ತರ್‌ಗಳ) ಪರಿಶೀಲನೆ, ಸರ್ಕಾರಿ ಭೂಮಿಯ ಸೀಮಾ ಪರಿಶೀಲನೆ, ಇವೆಲ್ಲ ಅವರ ಜಬಾಬುದಾರಿಗಳು. ಸರ್ಕಾರದ ಭೂಪತ್ರಗಳ ತಯಾರಿ, ಭೂಸ್ವಾಧೀನ ಹಾಗೂ ಕಂದಾಯ ಸಂಬಂಧಿತ ಇತರೆ ರೆಕಾರ್ಡುಗಳನ್ನು ತಯಾರಿಸಿ, ತಹಸೀಲ್ದಾರರಿಗೆ ಸಲ್ಲಿಸುವುದು ಇವರ ಇತರೇ ಕರ್ತವ್ಯಗಳಾಗಿರುತ್ತವೆ.

**ನಾಡ ಕಛೇರಿಗಳು**

ಆಡಳಿತ ವಿಕೇಂದ್ರೀಕರಣದ ದೃಷ್ಟಿಯಿಂದ ಪ್ರತೀ ತಾಲೂಕಿನ ಒಂದು ಹೋಬಳಿ ಕೇಂದ್ರದಲ್ಲಿ ೧೯೮೬ರ ಆಗಸ್ಟ್ ೧೫ ರಂದು ಪ್ರಾಯೋಗಿಕವಾಗಿ ನಾಡ ಕಛೇರಿಗಳನ್ನು ತೆರೆಯಲಾಯಿತು. ಇವುಗಳ ಮುಖ್ಯಸ್ಥರಾಗಿ ಒಬ್ಬ ಶಿರಸ್ತೇದಾರ ಅಥವಾ ಒಬ್ಬ ಉಪತಹಶೀಹಲ್ದಾರರನ್ನು ನೇಮಿಸಲಾಯಿತು. ಇವರಿಗೆ ತಹಸೀಲ್ದಾರರು ತಾಲ್ಲೂಕು ಮಟ್ಟದಲ್ಲಿ ಚಲಾಯಿಸುತ್ತಿದ್ದ ಮುಖ್ಯ ಅಧಿಕಾರಗಳ ಪೈಕಿ ೨೧ ಅಧಿಕಾರಗಳನ್ನು, ಪ್ರತಿನಿಯುಕ್ತಿಗೊಳಿಸಿ, ತನ್ಮೂಲಕ ನಾಡಕಛೇರಿಯ ಉಪತಹಸೀಲ್ದಾರರು, ಹೋಬಳಿಯ ಮಟ್ಟದಲ್ಲೇ ರೈತ ಸಮುದಾಯದ ಕುಂದುಕೊರತೆಗಳನ್ನು ನಿರ್ವಹಿಸಲು ಸಾಧ್ಯವಾಗಿ, ಅನಗತ್ಯವಾಗಿ ರೈತರು ತಾಲೂಕು ಕೇಂದ್ರಗಳಿಗೆ ತಮ್ಮ ಕೆಲಸಕ್ಕಾಗಿ ಅಲೆದಾಡುವುದನ್ನು ಇದು ತಪ್ಪಿಸಿದೆ. ಇವರ ನೆರವಿಗೆ ಒಬ್ಬ ಸಹಾಯಕ, ಒಬ್ಬ ಬೆರಳಚ್ಚುಗಾರ, ಒಬ್ಬ 'ಡಿ' ವೃಂದದ ನೌಕರನನ್ನೂ ನೀಡಲಾಗಿದೆ. ವೃದ್ಧರ ಮಾಸಾಶನ, ಅಂಗವಿಕಲರ ಭತ್ಯೆ ಮಂಜೂರಾತಿ, ಬೆಂಕಿ ಅಥವಾ ಪ್ರವಾಹ ಪೀಡಿತರಿಗೆ ಪರಿಹಾರ ನೀಡಿಕೆ, ಹಕ್ಕು ಬದಲಾವಣೆ ಪ್ರಕರಣಗಳ ಇತ್ಯರ್ಥ, ಆಹಾರ ಧಾನ್ಯ ಸಂಗ್ರಹಣ ಜಪ್ತಿ, ಸರ್ಕಾರ ವರಮಾನ ವಸೂಲಿ ಹಾಗೂ ಅದನ್ನು ಖಜಾನೆಗೆ ಜಮಾ ಮಾಡುವುದು, ಡಿಸಿಬಿ ಲೆಕ್ಕಪತ್ರಗಳನ್ನು ಸಂರಕ್ಷಿಸುವುದು, ೧೯೬೫ರ ನೀರಾವರಿ ನಿಯಮದಡಿ ಅಭಿವೃದ್ಧಿ ತೆರಿಗೆ ವಸೂಲಿ, ದೃಢೀಕೃತ ದಾಖಲೆ ನೀಡಿಕೆ, ಇವೆಲ್ಲ ನಾಡ ಕಛೇರಿಯ ಕರ್ತವ್ಯಗಳು. ನಾಡ ಕಛೇರಿಗಳ ಉಪಯೋಗ ಹೆಚ್ಚಿದಂತೆ ೧೯೮೭ರ ಆಗಸ್ಟ್ ೧೫ ರಿಂದ ಪ್ರತೀ ತಾಲೂಕಿನ ಎರಡನೇ ಹೋಬಳಿಯಲ್ಲಿ ಸರ್ಕಾರ ನಾಡ ಕಛೇರಿಗಳನ್ನು ಪ್ರಾರಂಭಿಸಿತು. ತಮ್ಮ ಪ್ರದೇಶದಲ್ಲಿಯೇ ಕಾರ್ಯ ನಿರ್ವಹಿಸುವ ನಾಡ ಕಛೇರಿಗಳಿಂದ ಜನತೆ ಸಂತುಷ್ಟರಾಗಿದ್ದಾರೆ.

**ಗ್ರಾಮಲೆಕ್ಕಿಗ**

ಪ್ರಸ್ತುತ ಗ್ರಾಮ ಲೆಕ್ಕಿಗರು (ವಿಲೇಜ್ ಅಕೌಟೆಂಟ್) ಜಿಲ್ಲಾಧಿಕಾರಿಯಿಂದ ನೇಮಿಸಲ್ಪಡುತ್ತಾರೆ. ಒಂದು ದೊಡ್ಡ ಗ್ರಾಮ ಅಥವಾ ಚಿಕ್ಕ ಗ್ರಾಮಗಳ ಗುಂಪಿಗೆ ಒಬ್ಬರಂತೆ ಗ್ರಾಮಲೆಕ್ಕಿಗರು ನೇಮಿಸಲ್ಪಡುತ್ತಾರೆ. ಇವರು ತಮ್ಮ ಗ್ರಾಮಗಳ ಕೇಂದ್ರಸ್ಥಾನದಲ್ಲಿಯೇ ವಾಸಿಸುತ್ತಾ, ಎಲ್ಲಾ ಸಮಯದಲ್ಲಿಯೂ ಜನರಿಗೆ ಸಿಗುವಂತಿರಬೇಕು. ಭೂಕಂದಾಯ ಅಧಿನಿಯಮ ೧೯೬೪ರ ಪ್ರಕಾರ ಇವರು ಕಾಲಕಾಲಕ್ಕೆ ಸರ್ಕಾರ ಸೂಚಿಸಿದ ಕಂದಾಯ ಸಂಬಂಧಿ ಕಾಗದ ಪತ್ರಗಳನ್ನೂ ದಾಖಲಾತಿಗಳನ್ನೂ ಸಿದ್ಧಪಡಿಸಬೇಕು. ತಮ್ಮ ಸುಪರ್ದಿಗೆ ಬರುವ ಗ್ರಾಮಗಳ ಕಂದಾಯ ದಫ್ತರನ್ನು ತಮ್ಮ ಬಳಿ ಇಟ್ಟುಕೊಂಡಿದ್ದು, ಗ್ರಾಮ ಚಾವಡಿಗಳಲ್ಲಿ ರೈತಾಪಿ ಜನ ಹಾಗೂ ಇತರರನ್ನು ಭೇಟಿ ಮಾಡಬೇಕು. ಗ್ರಾಮ ಹಾಗೂ ಸರ್ಕಾರಗಳ ನಡುವಣ ಕೊಂಡಿಯಂತೆ ಕಾರ್ಯನಿರ್ವಹಿಸಬೇಕು. ಕಂದಾಯ ವಸೂಲಿ, ಬೆಳೆಗಳ ನೋಂದಣಿ, ಪಂಚನಾಮೆ ತಯಾರಿ, ಕಂದಾಯ ವಸೂಲಿಗೆ ನೋಟೀಸು ಜಾರಿ ಮಾಡುವುದೇ ಮುಂತಾದ ಕೆಲಸಗಳನ್ನು ಇವರು ನಿರ್ವಹಿಸುತ್ತಾರೆ. ಇವರು ಮುಖ್ಯವಾಗಿ ಹಳ್ಳಿಯ ರೈತಾಪಿ ಜನರಿಗೆ ಅಗತ್ಯವಿರುವ ಕಂದಾಯ ಸಂಬಂದಿ ರಿಜಿಸ್ಟರುಗಳ ನಕಲನ್ನು ಒದಗಿಸುವ ಕರ್ತವ್ಯವನ್ನು ನಿರ್ವಹಿಸುತ್ತಾರೆ. ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯೂ ಆದ ಇವರು ಬಿಡಿಓ ಅವರ ಆದೇಶದಂತೆ ಅಭಿವೃದ್ಧಿ ಕಾರ್ಯಗಳನ್ನು ನಿರ್ದೇಶಿಸುತ್ತಾರೆ. ಆದರೆ ಈ ವ್ಯವಸ್ಥೆ ಎಲ್ಲೆಡೆ ಒಂದೇ ರೀತಿ ನಡೆಯುವುದಿಲ್ಲ. ಗ್ರಾಮ ಪಂಚಾಯಿತಿ ನಿರ್ಣಯಗಳ ಕಾರ್ಯಾಚರಣೆ ಇವರ ಜವಾಬುದಾರಿ. ಪೂರ್ವದಲ್ಲಿದ್ದ ಶಾನುಭೋಗ ಅಥವಾ ಕುಲಕರ್ಣಿಗಳಿಗಿದ್ದಂತೆ ಇವರಿಗೆ ಯಾವುದೇ ಭೂಮಿ ಮುಂತಾದ ಅನುವಂಶಿಕ ಸೌಕರ್ಯಗಳಿರುವುದಿಲ್ಲ. ಇವರು ಇತರೆ ಸರ್ಕಾರಿ ನೌಕರರಂತೆ ಮಾಸಿಕ ವೇತನ ಪಡೆಯುತ್ತಾರೆ.

ಗ್ರಾಮಲೆಕ್ಕಿಗರು ಕಾರ್ಯಚಟುವಟಿಕೆಗಳನ್ನು ಹೇಗೆ ನಡೆಸಬೇಕೆಂಬ ಬಗ್ಗೆ ಮಾರ್ಗದರ್ಶನ ಹಾಗೂ ನಿರ್ದೇಶನಗಳನ್ನು ಗ್ರಾಮಲೆಕ್ಕಿಗರ ಕೈಪಿಡಿಯಲ್ಲಿ ನೀಡಲಾಗಿದೆ.

**ಗ್ರಾಮ ಸಹಾಯಕರು**

ಮೊದಲು ಶಾನುಭೋಗ, ಕುಲಕರ್ಣಿ ಅಥವಾ ಪಾಟೀಲರಿಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದ ತಳವಾರ, ಓಲೆಕಾರ ಮುಂತಾದ ಹುದ್ದೆಗಳಿಗೆ ಬದಲಾಗಿ ಪ್ರಸ್ತುತ ಗ್ರಾಮಸಹಾಯಕರನ್ನು ನೇಮಿಸಲಾಗಿದೆ. ಇವರನ್ನು ಗ್ರಾಮ ಸಿಪಾಯಿ ಎಂದೂ ಕರೆಯುತ್ತಾರೆ. ನಿಗದಿತ ಮಾಸಿಕ ಭತ್ಯೆ ಪಡೆಯುವ ಗ್ರಾಮಲೆಕ್ಕಿಗರ ಸಹಾಯಕರಾಗಿ, ಸಂದೇಶವಾಹಕರಾಗಿ, ದಫ್ತರ ಸಾಗಿಸುವ ಹಾಗೂ ಭೂಮಿ ಅಳೆಯುವ ಸರಪಳಿ ಮುಂತಾದ ಸಲಕರಣೆಗಳನ್ನು ಸಾಗಿಸುವ ಕೆಲಸಗಳನ್ನೂ ಇವರು ಮಾಡುತ್ತಾರೆ.

**ಧಾರ್ಮಿಕ ದತ್ತಿ ಸಂಸ್ಥೆಗಳು**

ರಾಜ್ಯ ಧಾರ್ಮಿಕ ದತ್ತಿ ಸಂಸ್ಥೆಗಳು ೧೯೫೬ರ ಪೂರ್ವದ ಕಾಯ್ದೆಗಳಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸುತ್ತಿವೆ. ಹಳೆ ಮೈಸೂರು ರಿಲಿಜಿಯಸ್ ಅಂಡ್ ಚಾರಿಟಬಲ್ ಇನ್ಸ್‌ಟಿಟ್ಯೂಷನ್ಸ್, ೧೯೨೭ರ ಕಾಯ್ದೆಯಡಿ ಇವು ಕೆಲಸ ನಿರ್ವಹಿಸುತ್ತಿವೆ. ಈ ಕಾಯ್ದೆಯ ಅಧಿನಿಯಮ-೩ ರನ್ವಯ ಜಿಲ್ಲಾಧಿಕಾರಿಯೇ ಮುಜರಾಯಿ ಅಧಿಕಾರಿಯಾಗಿದ್ದು ಜೊತೆಗೆ ಈ ಕಾಯ್ದೆಯ ಅನುಷ್ಠಾನಾಧಿಕಾರಿಯಾಗಿರುತ್ತಾರೆ. ಜಿಲ್ಲೆಯ ಎಲ್ಲಾ ಮುಜರಾಯಿ ಸಂಸ್ಥೆಗಳಿಗೆ ಇವರೇ ನಿಯಂತ್ರಣಾಧಿಕಾರಿಯಾಗಿರುತ್ತಾರೆ. ಈ ಸಂಸ್ಥೆಗಳ ಮೇಲೆ ಉಪವಿಭಾಗಾಧಿಕಾರಿ ಅಥವಾ ತಹಶೀಲ್ದಾರರ ಮುಖೇನ ಆಡಳಿತ ನಡೆಸುತ್ತಾರೆ. ಮುಜರಾಯಿ ಅಧಿಕಾರಿಯಾಗಿ ಜಿಲ್ಲಾಧಿಕಾರಿಯ ಹಲವು ಪ್ರಮುಖ ಕರ್ತವ್ಯ ಹಾಗೂ ಅಧಿಕಾರಗಳೆಂದರೆ:

೧. ದೇವಸ್ಥಾನಗಳಿಗೆ ಪೂಜಾಕಾರ್ಯ ನಿರ್ವಹಣೆಗಾಗಿ ಪೂಜಾರಿಗಳನ್ನು ನೇಮಿಸುವುದು

೨. ಮುಜರಾಯಿ ಸಂಸ್ಥೆಗಳ ಪರವಾಗಿ ವಕಾಲತ್ತು ಮಂಡನೆ

೩. ಧಾರ್ಮಿಕ ಸಂಸ್ಥೆಯ ವಿವಾದಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸುವುದು (ಪ್ರಸ್ತುತ ಈ ಕಾರ್ಯವನ್ನು ಉಪವಿಭಾಗಾಧಿಕಾರಿಗಳು ನಿರ್ವಹಿಸುತ್ತಾರೆ)

೪. ದುರಾಡಳಿತಕ್ಕೊಳಗಾದ ಧಾರ್ಮಿಕ ಸಂಸ್ಥೆಗಳ ಆಡಳಿತವನ್ನು ತಾವೇ ವಹಿಸಿಕೊಳ್ಳುವುದು

೫. ವಿವಿಧ ಮುಜರಾಯಿ ಸಂಸ್ಥೆಗಳಿಗೆ ಧರ್ಮದರ್ಶಿಗಳ ನೇಮಕ, ಮುಂತಾದವು

ಗ್ರಾಮೀಣ ಮುಜರಾಯಿ ಸಂಸ್ಥೆಗಳ ಹೊರತು ಇತರೆ ಎಲ್ಲಾ ಮುಜರಾಯಿ ಸಂಸ್ಥೆಗಳ ಖರ್ಚು, ಕಾಲಕಾಲಕ್ಕೆ ಮಂಜೂರಾದ ವಾರ್ಷಿಕ ಮಂಜೂರಾತಿಯ ಚೌಕಟ್ಟಿಗೊಳಪಟ್ಟಿರಬೇಕು. ಮುಂದೆ ಹೆಸರಿಸಿರುವ ಅಧಿಕಾರಿಗಳು ಈ ವಿವಿಧ ಸಂಸ್ಥೆಗಳ ಖರ್ಚು-ವೆಚ್ಚಗಳನ್ನು ಮಂಜೂರು ಮಾಡುವರು.

ಸರ್ಕಾರ-ಷೆಡ್ಯೂಲ್ಡ್ ಮುಜರಾಯಿ ಸಂಸ್ಥೆಗಳು

ದತ್ತಿ ಆಯುಕ್ತರು-ರೂ.೫,೦೦೦ ಕ್ಕೆ ಮೇಲ್ಪಟ್ಟ ವರಮಾನವಿರುವ ಮುಖ್ಯ ಮುಜರಾಯಿ ಸಂಸ್ಥೆಗಳು

ಜಿಲ್ಲಾಧಿಕಾರಿ-ರೂ.೫,೦೦೦ ಕ್ಕೆ ಒಳಗಿನ ವರಮಾನ ಹೊಂದಿರುವ ಮುಖ್ಯ ಸಂಸ್ಥೆಗಳು

ಉಪವಿಭಾಗಾಧಿಕಾರಿ-ಸಣ್ಣ ಮುಜರಾಯಿ ಸಂಸ್ಥೆಗಳು

ಇನಾಂ ರದ್ದು ಕಾಯ್ದೆಯನ್ವಯ ಧಾರ್ಮಿಕ ಹಾಗೂ ದತ್ತಿ ಇನಾಮುಗಳು ರದ್ದಾದ ನಂತರ ಇನಾಮಾದ್ ಸಂಸ್ಥೆಗಳು ತಮ್ಮ ಜಮೀನುಗಳನ್ನು ಕಳೆದುಕೊಂಡಿರುತ್ತವೆ. ಮೈಸೂರು (ಧಾರ್ಮಿಕ ದತ್ತಿ) ಇನಾಮು ರದ್ಧತಿ

ಕಾಯ್ದೆ ೧೯೫೫ ರಂತೆ ಈ ರೀತಿ ಜಮೀನು ಕಳೆದುಕೊಂಡ ಸಂಸ್ಥೆಗಳಿಗೆ ಜಮೀನಿನ ಬದಲಾಗಿ 'ತಸ್ದಿಕ್ ಭತ್ಯೆ' ನೀಡಲಾಗುತ್ತಿದೆ. ಸಂಸ್ಥೆಯ ಉಳಿವಿರುವವರೆಗೂ ಈ ಭತ್ಯೆಯನ್ನು ವರ್ಷಂಪ್ರತಿ ನೀಡಲಾಗುತ್ತದೆ. ಈ ಭತ್ಯೆ ಸಾಮಾನ್ಯವಾಗಿ ಪ್ರತೀ ಸಂಸ್ಥೆಯ ಐದು ವರ್ಷಗಳ ಒಟ್ಟು ಆದಾಯದಷ್ಟಿದ್ದು, ಇದನ್ನು ಜಿಲ್ಲಾಧಿಕಾರಿ ನಿರ್ಣಯಿಸುತ್ತಾರೆ. ಇದೇ ರೀತಿ ಕರ್ನಾಟಕ ಭೂಸುಧಾರಣಾ ಕಾಯ್ದೆ ೧೯೬೧ ರಂತೆ ಜಮೀನು ಕಳೆದುಕೊಂಡ ಸಂಸ್ಥೆಗಳಿಗೂ ಈ 'ತಸ್ದಿಕ್ ಭತ್ಯೆ' ದೊರೆಯುತ್ತದೆ. ಇದರ ವಾರ್ಷಿಕ ಮಂಜೂರಾತಿಯನ್ನು ಸಂಬಂಧಪಟ್ಟ ಉಪವಿಭಾಗಾಧಿಕಾರಿಯವರು ನೀಡುತ್ತಾರೆ.

## ಕಂದಾಯ ಆಡಳಿತ

**ಐತಿಹಾಸಿಕ ಹಿನ್ನೆಲೆ :** ಮನುಧರ್ಮಶಾಸ್ತ್ರದಂತೆ ಪ್ರಾಚೀನ ಹಿಂದೂ ದೇಶದಲ್ಲಿ ಆಡಳಿತಕ್ಕೆ ಬೇಕಾಗುವ ಆರ್ಥಿಕ ಆದಾಯವು, ಒಟ್ಟು ಭೂಪ್ರದೇಶದಲ್ಲಿ ಬೆಳೆಯುವ ಎಲ್ಲಾ ಬೆಳೆಗಳ ಒಂದಂಶವಾಗಿದ್ದಿತು. ವಿವಿಧ ಭೂಪ್ರದೇಶಗಳಿಗನುಗುಣವಾಗಿ ಇದು ೧/೬ ಭಾಗದಿಂದ ೧/೧೨ ಭಾಗದಷ್ಟಿರುತ್ತಿತ್ತು. ಕಂದಾಯವನ್ನು ಪ್ರತೀ ವ್ಯಕ್ತಿಯಿಂದ ಶೇಖರಿಸದೆ, ಪ್ರತೀ ಗ್ರಾಮದ ಹಿರಿಯನ ಮೂಲಕ ಶೇಖರಿಸಲಾಗುತ್ತಿತ್ತು. ಇಡೀ ಹಳ್ಳಿಯ ಬೆಳೆಯನ್ನು ವಿವಿಧ ಕಣಗಳಲ್ಲಿ ಒಟ್ಟಾರೆ ಸೇರಿಸಿ, ಸರ್ಕಾರದ ಭಾಗವನ್ನು ತೆಗೆದಿಟ್ಟು ಉಳಿದುದನ್ನು ಹಂಚಿಕೊಳ್ಳಲಾಗುತ್ತಿತ್ತು. ಗ್ರಾಮದ ಹಿರಿಯ ಮತ್ತು ರಾಜನ ಮಧ್ಯೆ ಹತ್ತು, ನೂರು ಅಥವಾ ಸಾವಿರ ಹಳ್ಳಿಗಳಿಗೊಬ್ಬರಂತೆ ಅನೇಕ ಅಧಿಕಾರಿಗಳಿದ್ದರು. ಈ ಅಧಿಕಾರಿಗಳು ಕಂದಾಯ ವಸೂಲಿಗೆ ಜವಾಬ್ದಾರರಾಗಿದ್ದು, ಇವರಿಗೆ ರಾಜನಿಗೆ ನೀಡಲ್ಪಟ್ಟ ಆದಾಯದ ಸಣ್ಣ ಭಾಗವನ್ನು ಸಂಬಳವಾಗಿ ನೀಡಲಾಗುತ್ತಿತ್ತು. ಅಥವಾ ಇವರ ಹೆಸರಿನಲ್ಲಿದ್ದ ಭೂಮಿಗೆ ಕಂದಾಯ ಮಾಫಿ ಸಿಕ್ಕುತ್ತಿತ್ತು.

ಶಾತವಾಹನರ ಕಾಲದಲ್ಲಿ ಹಲವು ಸರ್ಕಾರಿ ಅಧಿಕಾರಿಗಳನ್ನು ಅಮಾತ್ಯ, ಮಹಾಮಾತ್ರ, ಮಹಾಭೋಜ, ರಜ್ಜುಕಾರ, ಭಂಡಾರಿಕ, ನಿಬಂಧಕಾರ ಎನ್ನುತ್ತಿದ್ದರು. ದೇಶವು ಹಲವು ಪ್ರಾಂತಗಳಾಗಿ ವಿಭಜನೆಗೊಂಡು, ಒಂದೊಂದು ಪ್ರಾಂತವೂ ಒಬ್ಬೊಬ್ಬ ರಾಜ್ಯಪಾಲರ ಆಡಳಿತದಲ್ಲಿದ್ದಿತು. ಕಂದಾಯ ಲೆಕ್ಕವಿಡಲೋಸುಗ ಹಲವಾರು ಗುಮಾಸ್ತೆಗಳಿದ್ದರು. ಗ್ರಾಮಾಡಳಿತ 'ಬಾರಾಬಲೂತಿ'ಗಳೆಂಬ ಹನ್ನೆರಡು ಅಧಿಕಾರಿಗಳಿಂದ ನಡೆಯುತ್ತಿತ್ತು. ಹಲವೆಡೆಗಳಲ್ಲಿ ಹಳ್ಳಿಯ ಭೂಮಿಯನ್ನು ಸಾಮೂಹಿಕವಾಗಿ ಸಾಗುವಳಿಗೊಳಿಸಿ, ರೈತರ ಶ್ರಮದಾನಕ್ಕನುಗುಣವಾಗಿ ಉತ್ಪನ್ನವನ್ನು ಹಂಚಲಾಗುತ್ತಿತ್ತೆಂದು ತಿಳಿದುಬರುತ್ತದೆ. ಸಾಮಾನ್ಯವಾಗಿ ಪ್ರತೀ ವ್ಯಕ್ತಿ ತನ್ನ ಜಮೀನನ್ನು ತಾನೇ ಸಾಗುವಳಿ ಮಾಡುತ್ತಿದ್ದು, ಬೀಡು ಜಮೀನು ಇಡೀ ಹಳ್ಳಿಯ ದನಕರುಗಳು ಮೇಯುವ ಸ್ಥಳವಾಗಿದ್ದಿತು. ಹಣಕಾಸಿನ ವ್ಯವಸ್ಥೆ ರೂಢಿಗೆ ಬಂದ ನಂತರ ಭೂಮಿಯನ್ನು ಅಳೆಯುವ ವ್ಯವಸ್ಥೆಯೂ ಜಾರಿಗೆ ಬಂದು, ಧಾನ್ಯಗಳ ಬದಲಾಗಿ ಹಣವನ್ನು ಭೂ ಕಂದಾಯವಾಗಿ ಸರ್ಕಾರಕ್ಕೆ ಪಾವತಿಸುವ ನಗದು ಪಾವತಿ ವ್ಯವಸ್ಥೆ ಜಾರಿಯಾಯಿತು.

**ಗಂಗ ಹಾಗೂ ಚೋಳರ ಕಾಲ :** ಹಳೆಯ ಮೈಸೂರು ರಾಜ್ಯದ ಹೆಚ್ಚಿನ ಪ್ರದೇಶವನ್ನು ಹಾಗೂ ಕಾವೇರಿ ಬಯಲು ಪ್ರದೇಶವನ್ನು ಗಂಗವಂಶದ ರಾಜರು ಸುಮಾರು ಕ್ರಿ.ಶ. ನಾಲ್ಕನೇ ಶತಮಾನದಿಂದ ಕ್ರಿ.ಶ.೧೧ನೇ ಶತಮಾನದ ಆರಂಭದವರೆವಿಗೂ ಆಳುತ್ತಿದ್ದರು. ಗಂಗರಿಂದ ಆಳಲ್ಪಟ್ಟ ಪ್ರದೇಶವನ್ನು 'ಗಂಗವಾಡಿ' ಎನ್ನುತ್ತಿದ್ದರು. ಗಂಗರ ಕಂದಾಯ ಆಡಳಿತದ ಬಗ್ಗೆ ವಿಷದವಾದ ಮಾಹಿತಿ ಲಭ್ಯವಿಲ್ಲವಾದರೂ ಸಹ, ಗಂಗರ ನಂತರ ಇಂದಿನ ಮಂಡ್ಯ ಜಿಲ್ಲಾ ಪ್ರಾಂತದ ಮೇಲೂ ಆಡಳಿತ ನಡೆಸಿದ ಚೋಳರ ಕಾಲದಲ್ಲಿ ಕಂದಾಯ ವ್ಯವಸ್ಥೆಗೆ ಹೊಸ ಆಯಾಮ ಬಂದಿತೆಂದು ತಿಳಿದು ಬರುತ್ತದೆ. ಈ ವಂಶದ ಖ್ಯಾತ ದೊರೆಗಳಲ್ಲಿ ಒಬ್ಬನಾದ ರಾಜರಾಜನು ತನ್ನ ಆಡಳಿತದ ೧೭ನೇ ವರ್ಷದಲ್ಲಿ (ಕ್ರಿ.ಶ.೧೦೦೨) ಒಂದು ಕಂದಾಯ ಸಮೀಕ್ಷೆ ನಡೆಸಿದನೆಂದು ತಿಳಿದುಬರುತ್ತದೆ. ಗ್ರಾಮ ಲೆಕ್ಕಾಧಿಕಾರಿಗಳ ಪುಸ್ತಕಗಳಲ್ಲಿ ಹಾಗೂ ತಪ್ಪಾಗಿ ನಮೂದಿಸಲ್ಪಟ್ಟ ಹಲವಾರು ಭೂಸಂಬಂಧಿ ದಾಖಲೆಗಳಲ್ಲಿ ಸೂಕ್ತ ಮಾರ್ಪಾಡನ್ನು ತಂದನಂತರ

ರಾಜರಾಜನು ಭೂಕಂದಾಯ ಪಾವತಿಸಲ್ಪಡದ ಭೂಮಿಯನ್ನು ಮುಟ್ಟುಗೋಲು ಹಾಕಿಕೊಂಡ ಚಾರಿತ್ರಿಕ ದಾಖಲೆಯೂ ಖ್ಯಾತವಾಗಿದೆ ಎಂದು ತಿಳಿದುಬರುತ್ತದೆ.

ತಂಜಾವೂರಿನ ಶಾಸನವೊಂದು ತಿಳಿಸುವಂತೆ, ಸುಮಾರು ಕ್ರಿ.ಶ.೧೧ನೇ ಶತಮಾನದಲ್ಲಿ ಒಂದು 'ವೆಲಿ' ಭೂಮಿಯಲ್ಲಿ ಒಂದು ನೂರು 'ಕಲಂ' ಭತ್ತ ಬೆಳೆಯುತ್ತಿದ್ದರೆಂದೂ, ಒಂದು 'ಕಾಸಿ'ಗೆ ಎರಡು 'ಕಲಂ' ಭತ್ತ ದೊರೆಯುತ್ತಿತ್ತು ಎಂದು ತಿಳಿದುಬರುತ್ತದೆ. ರಾಜರಾಜನು ತನ್ನ ರಾಜ್ಯವನ್ನು ಹಲವಾರು 'ಮಂಡಲ'ಗಳಾಗಿ ವಿಭಜನೆ ಮಾಡಿದ್ದನು. ಪ್ರತೀ ಮಂಡಲವನ್ನು ಹಲವಾರು 'ವಲನಾಡು'ಗಳಾಗಿ ವಿಂಗಡಿಸಿ, ಪ್ರತೀ ವಲನಾಡಿಗೆ ಒಬ್ಬ ರಾಜನ ಹೆಸರನ್ನಿಟ್ಟಿದ್ದನು. ಇಂತಹ ವಲನಾಡುಗಳನ್ನು 'ನಾಡು'ಗಳಾಗಿ ವಿಂಗಡಿಸಿ, ಅವುಗಳಿಗೆ ಗ್ರಾಮದ ಹಿರಿಯರ ಹೆಸರಿನ್ನಿಟ್ಟಿದ್ದನು. ಗಂಗವಾಡಿಯ ದಕ್ಷಿಣ ಪ್ರಾಂತ್ಯಕ್ಕೆ ಇಂದಿನ ಮಂಡ್ಯ ಜಿಲ್ಲೆ ಸೇರಿದ್ದು, ಇದನ್ನು 'ಮುಡಿಕೊಂಡ ಚೋಳ ಮಂಡಲ' ಎಂದು ಕರೆಯುತ್ತಿದ್ದರು. ಈ ಮಂಡಲ 'ಗಂಗೈಕೊಡ – ಚೋಳ – ವಲನಾಡು' ಎಂಬ ವಲನಾಡನ್ನು ಹೊಂದಿದ್ದಿತು. ಇದರ ಪ್ರಮುಖ ನಾಡು 'ಕಿ(ಕಳಲೆ)ವಾಡು' ಎಂದು ಕರೆಯಲ್ಪಡುತ್ತಿದ್ದು, ಇದು ಬಹುಶಃ ಇಂದಿನ ಹದಿನಾಡು ಅಥವಾ ಹದಿನಾರು ಆಗಿರಬಹುದೆಂದು ಅಭಿಪ್ರಾಯಪಡಲಾಗಿದೆ.

ಹೊಯ್ಸಳರ ಆಳ್ವಿಕೆ ಪ್ರಾರಂಭವಾದ ನಂತರ ರಾಜ್ಯವು ಹಲವಾರು ಜಿಲ್ಲೆಗಳಾಗಿ ವಿಭಜಿಸಲ್ಪಟ್ಟು, ಒಂದೊಂದು ಜಿಲ್ಲೆಯನ್ನೂ ಒಬ್ಬೊಬ್ಬ ರಾಜ್ಯಪಾಲರ ಆಳ್ವಿಕೆಗೊಳಪಡಿಸಲಾಯಿತು. ಇವರು ಸಾಮಾನ್ಯವಾಗಿ ರಾಜಕುಟುಂಬಕ್ಕೆ ಸೇರಿದವರಾಗಿದ್ದರು. ಒಬ್ಬ 'ಸರ್ವಾಧಿಕಾರಿ' (ಪ್ರಧಾನಿ) ಹಾಗೂ ಇತರೆ ನಾಲ್ಕು ಮಂದಿ 'ಮಹಾಮಂಡಲೇಶ್ವರ'ರ ಸಹಾಯದಿಂದ ರಾಜನು ಆಡಳಿತ ನಡೆಸುತ್ತಿದ್ದನು. ಜಿಲ್ಲೆಯ ಆಡಳಿತಾಧಿಕಾರಿಯನ್ನು 'ದಣ್ಣಾಯಕ' ಎನ್ನುತ್ತಿದ್ದರು. ಸಣ್ಣ ಪ್ರಾಂತಗಳನ್ನು ಸಾಮಂತರೂ, ಅವರ ಅಧೀನದಲ್ಲಿ ಹೆಗ್ಗಡೆಗಳೂ ಆಳುತ್ತಿದ್ದರು. ರಾಜ್ಯಾಡಳಿತದ ಕೆಳಸ್ಥರದ ಅಧಿಕಾರಿ ಗ್ರಾಮದ 'ಹಿರಿಯ ಅಥವಾ ಗೌಡ'ನಾಗಿದ್ದನು. ರೈತರು ಬೆಳೆದ 'ಖಂಡಿ' (ಖಂಡುಗ) ಬೆಳೆಗೆ ಒಂದು ಫಣಮ್ (ನಾಲ್ಕು ಆಣೆ ಎಂಟು ಪೈಸೆ) ಶುಲ್ಕ ವಿಧಿಸಲಾಗುತ್ತಿತ್ತು.

ಹೊಯ್ಸಳರ ನಂತರ ವಿಜಯನಗರದ ಅರಸರು ಈ ಪ್ರಾಂತದ ಮೇಲೆ ತಮ್ಮ ಅಧಿಪತ್ಯ ಸಾಧಿಸಿದ್ದರು. ಇವರ ಕಾಲದಲ್ಲಿ ಆಡಳಿತ ವ್ಯವಸ್ಥೆ ಉತ್ತಮಗೊಂಡು, ಕೃಷ್ಣದೇವರಾಯ ಮತ್ತು ಅಚ್ಯುತರಾಯರ ಕಾಲದಲ್ಲಿ, ಹಲವಾರು ನಿಯಮಗಳ ಮೂಲಕ ತೆರಿಗೆ ವಿಧಾನವೂ ವೈಜ್ಞಾನಿಕವಾಯಿತೆಂದೂ ಲೆಕ್ಕಪತ್ರಗಳ ಪರಿಶೋಧನೆಯೂ ಜಾರಿಯಾಯಿತೆಂದೂ ತಿಳಿದು ಬರುತ್ತದೆ. ಭೂಮಿಯ ಸೀಮೆಗಳನ್ನು ನಿರ್ಧರಿಸಿ 'ರಾಯ ರೇಖೆ'ಗಳನ್ನು ಹಾಕಲಾಯಿತು. ಭೂಪ್ರದೇಶದ ಪರಿಧಿ ನಿರ್ಧಾರಕ್ಕೆ ಬಾಂದುಗಳನ್ನು ಹಾಕಲಾಯಿತು. ಎಲ್ಲಾ ಹಳ್ಳಿ ಮತ್ತು ಹೋಬಳಿಗಳಲ್ಲಿ 'ಬಾರಬಲೂತಿ' ವ್ಯವಸ್ಥೆ ಜಾರಿಯಾಯಿತು.

ಕಪಿಲೆಗಳಿಂದ ಸಾಗುವಳಿ ಮಾಡಲ್ಪಟ್ಟ ಭೂಮಿಯನ್ನು ಬಾಡಿಗೆಯಾಧಾರದ ಮೇಲೆ ರೈತರಿಗೆ ನೀಡಲಾಯಿತು. ಬೀಳು ಪ್ರದೇಶ ಸಾಗುವಳಿಯಾಗಬೇಕೆನ್ನುವ ಉದ್ದೇಶದಿಂದ ಅವನ್ನೂ 'ಭೂಮಾಳ ಗುಟ್ಟ'ಗಳಾಗಿ ಬಾಡಿಗೆಗೆ ನೀಡಲಾಯಿತು. ಜಾನುವಾರುಗಳನ್ನು ಅಥವಾ ಉಳುಮೆ ಉಪಕರಣಗಳನ್ನು ಕೊಳ್ಳಲು ರೈತರಿಗೆ ಮುಂಗಡ ಹಣ ನೀಡಲಾಯಿತು. ಕೆರೆ–ಕಟ್ಟೆಗಳನ್ನೂ, ನೀರಾವರಿ ಕಾಲುವೆಗಳನ್ನೂ ಕಾಪಾಡಲು ಕ್ರಮಗಳನ್ನು ಕೈಗೊಳ್ಳಲಾಯಿತು. ಭೂಹೀನರಿಗೆ ಕರಾರಿನಂತೆ ಭೂಮಿಯನ್ನು ಬಾಡಿಗೆಗೂ ಕೊಡಲಾಯಿತು.

**ಚಿಕ್ಕದೇವರಾಜಒಡೆಯರ್ ಕಾಲ**

ಕಂದಾಯ ಅಭಿವೃದ್ಧಿಗಾಗಿ ಮಹಾರಾಜ ಚಿಕ್ಕದೇವರಾಜಒಡೆಯರ ಕಾಲದಲ್ಲಿ ಆರ್ಥಿಕ ವಲಯದಲ್ಲಿ ಹಲವಾರು ಮಾರ್ಪಾಡುಗಳನ್ನು ತರಲಾಯಿತು. ಒಣ ಜಮೀನಿನ ಪ್ರತೀ 'ಕುಡು'ವಿಗೆ ಎರಡು ಚಿನ್ನದ ಪಣಗಳ ಶುಲ್ಕ ವಿಧಿಸಲಾಯಿತು. ತೆಂಗು, ಅಡಿಕೆ ಮುಂತಾದ ಗದ್ದೆ ಅಥವಾ ತೋಟಗಾರಿಕೆ ಬೆಳೆಗಳ ೧/೪ ಭಾಗವನ್ನು ಸರ್ಕಾರಕ್ಕೆ ಶುಲ್ಕವಾಗಿ ನೀಡಬೇಕಿದ್ದಿತು. ಸರ್ಕಾರಕ್ಕೆ ಸಂದಾಯವಾಗಬೇಕಾದ ಇತರೆ ಬಾಬ್ತುಗಳನ್ನು ಕಾಲಕಾಲಕ್ಕೆ ನಿಖರವಾಗಿ ವಸೂಲಿ ಮಾಡಲಾಗುತ್ತಿತ್ತು.

ಮುಂದೆ ಹೈದರಾಲಿ ಇದೇ ಆರ್ಥಿಕ ನೀತಿಯನ್ನನುಸರಿಸಿದನು. ತನ್ನ 'ಅಮಲ್'ಗಳ ಮೂಲಕ ಕಂದಾಯ ವಸೂಲಿ ನಡೆಸುತ್ತಿದ್ದನು. ಪ್ರತೀ ತಾಲೂಕಿನಲ್ಲೂ ಈತನಿಂದ ನೇಮಿಸಲ್ಪಟ್ಟ 'ಹರಿಕಾರ'ರು ಜನತೆಯ ಅಹವಾಲುಗಳನ್ನು ಆಲಿಸಿ ರಾಜನಿಗೆ ವರದಿ ಮಾಡುತ್ತಿದ್ದರು. ಮುಂದೆ ಟೀಪ್ಪು ಕಂದಾಯ ವಸೂಲಿ ಪದ್ಧತಿಯನ್ನು ಸರಳಗೊಳಿಸಲು ತನ್ನ ರಾಜ್ಯವನ್ನು 'ತುಕಡಿ' (ಫೌಜದಾರ್)ಗಳಾಗಿ ವಿಂಗಡಿಸಿ, ಪ್ರತೀ ತುಕಡಿಯನ್ನೂ ಒಬ್ಬೊಬ್ಬ ಅಧಿಕಾರಿಯ ಅಧೀನದಲ್ಲಿ ಇರಿಸಿದನು. ಇಂತಹ ಇಪ್ಪತ್ತು ಅಥವಾ ಮೂವತ್ತು ತುಕಡಿಗಳಿಗೆ 'ಅಸಾಫ್' ಎಂಬ ಅಧಿಕಾರಿ ಇದ್ದು, ಅಸಾಫ್ ಕಚೇರಿ ಒಬ್ಬ ಅಧ್ಯಕ್ಷನ ಆಡಳಿತದಲ್ಲಿದ್ದಿತು. ಹೈದರ್ ಮತ್ತು ಟೀಪ್ಪು ಇಬ್ಬರೂ ಮಾಮೂಲು ಕಂದಾಯಕ್ಕಿಂತ ಅಧಿಕ ಕಂದಾಯ ವಿಧಿಸಿದ್ದರೆಂದು ತಿಳಿದು ಬರುತ್ತದೆ.

**ದಿವಾನ್ ಪೂರ್ಣಯ್ಯನವರ ಸುಧಾರಣೆಗಳು**

ಶ್ರೀರಂಗಪಟ್ಟಣವು ೧೭೯೯ರಲ್ಲಿ ಪತನಗೊಂಡು, ಮೈಸೂರು ಸಂಸ್ಥಾನಕ್ಕೆ ಅಧಿಕಾರ ಪುನರ್ ಪ್ರಾಪ್ತಿಯಾದಾಗ, ಕಂದಾಯ ಪದ್ಧತಿಯಲ್ಲಿ ಇದ್ದ ಲೋಪದೋಷ ಸರಿಪಡಿಸುವ ಜವಾಬುದಾರಿ ಹೊಸ ಆಡಳಿತದ ಮೇಲೆ ಬಿದ್ದಿತು. ಇವರು ಮಾಡಿದ ಪ್ರಥಮ ಕಾರ್ಯವೆಂದರೆ, ಪ್ರಾಚೀನ ಹಿಂದೂ ಪದ್ಧತಿಯಂತೆ ಭೂಕಂದಾಯದ ನಿಗದಿ. ಆ ಕಾಲದಲ್ಲಿ ರೀಜೆಂಟರಾಗಿದ್ದ ದಿವಾನ್ ಪೂರ್ಣಯ್ಯನವರಿಗೆ, ವಂಶಪಾರಂಪರ್ಯವಾದ ಜಮೀನಿನ ಯಜಮಾನಿಕೆ ಮತ್ತು ನಿಗದಿತ ಶುಲ್ಕ ನಿರ್ಧರಿಸುವಿಕೆಯಿಂದ ಜನತೆಗೆ ಮತ್ತು ಸರಕಾರಕ್ಕೆ ಆಗುವ ಉಪಯೋಗ ತಿಳಿದಿತ್ತು.

ಕಂದಾಯ ಆಡಳಿತದ ಸುಧಾರಣೆಯಲ್ಲಿ ದಿವಾನ್ ಪೂರ್ಣಯ್ಯನವರು ತೆಗೆದುಕೊಂಡ ಮೊದಲ ಹಂತದ ಕಾರ್ಯವೆಂದರೆ, 'ಪೈಮಾಯಿಷ್' ಅಥವಾ ಭೂಅಳತೆ. ಆದರೆ ಇದು ವೈಜ್ಞಾನಿಕವಾಗಿ ನಡೆಯಲಿಲ್ಲವಾದುದರಿಂದ ಇದರಿಂದ ಯಾವುದೇ ಹೆಚ್ಚಿನ ಉಪಯೋಗವಾಗಲಿಲ್ಲ. ರೈತರು ಹಣದ ರೂಪದಲ್ಲಿ ತೆರಿಗೆ ನೀಡಲು ಅಶಕ್ತರಾದಾಗ, ಅವರಿಂದ ಧಾನ್ಯರೂಪದ ತೆರಿಗೆ ವಸೂಲು ಮಾಡಲಾಯಿತು. ಕಬ್ಬು ಬೆಳೆಯುವ ಜಮೀನಿಗೆ ಅತ್ಯಧಿಕ ತೆರಿಗೆ ವಿಧಿಸಲ್ಪಟ್ಟಿದ್ದು, ಖಂಡಿಯೊಂದಕ್ಕೆ ಇದು ಮೈದಾನ ಪ್ರದೇಶದಲ್ಲಿ ಹತ್ತರಿಂದ ೭೨ ಪಗೋಡಗಳಷ್ಟು ಇದ್ದಿತು. ಉಳಿದಂತೆ ಮಲೆನಾಡು ಪ್ರದೇಶದಲ್ಲಿ ಶಿವಪ್ಪನಾಯಕನ 'ಶಿಸ್ತ್' ಅನ್ನು ಪಾಲಿಸಲಾಗುತ್ತಿತ್ತು. ಹೀಗೆ ಇಡೀ ರಾಜ್ಯದ ಕಂದಾಯ ಆಡಳಿತವನ್ನು 'ಅಮಾನಿ' (ಸರಕಾರದ ನೇರ ಆಡಳಿತ) ವ್ಯವಸ್ಥೆಗೆ ಒಳಪಡಿಸಲಾಯಿತು. ಪ್ರತೀ ತಾಲೂಕು ಒಬ್ಬ 'ಅಮಿಲ್'ರ ಆಡಳಿತದಲ್ಲಿದ್ದು ಇವರ ಪರಿವೀಕ್ಷಣೆಗೆ ಮೂರು ಮಂದಿ ಮುಖ್ಯ ಸುಬೇದಾರರಿದ್ದರು. ತಾಲೂಕುಗಳನ್ನು ಹೋಬಳಿಗಳಾಗಿ ವಿಂಗಡಿಸಿ, ಪ್ರತೀ ಹೋಬಳಿಗೆ ಒಬ್ಬ 'ಪಾರುಪತ್ತೇದಾರ'ನನ್ನು ನೇಮಿಸಲಾಯಿತು. ಇವರ ಸಹಾಯಕ್ಕಾಗಿ 'ಮಣೆಗಾರರು' ಹಾಗೂ 'ಗಡಿ ಶಾನುಭೋಗ'ರಿದ್ದರು. ಇದೇ ವ್ಯವಸ್ಥೆಯನ್ನು ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರೂ ಅನುಸರಿಸಿದರು.

**ಬ್ರಿಟಿಷ್ ಕಮಿಷನ್ನಿನಡಿ ಸುಧಾರಣೆಗಳು**

ದಿವಾನ್ ಪೂರ್ಣಯ್ಯನವರಿಂದ ವ್ಯವಸ್ಥಿತವಾಗಿ ರೂಪುಗೊಂಡ ಭೂಕಂದಾಯ ಪದ್ಧತಿ ಬ್ರಿಟೀಷರಿಂದಲೂ ಅನುಸರಿಸಲ್ಪಟ್ಟು, ಹಣದ ರೂಪದಲ್ಲಿ ನೀಡಲ್ಪಡುತ್ತಿದ್ದ ಕಂದಾಯ ಹೆಚ್ಚೆನಿಸಿದೆಡೆಯಲ್ಲಿ ಅದನ್ನು ಕಡಿಮೆ ಮಾಡಲಾಯಿತು. ಗ್ರಾಮಲೆಕ್ಕಿಗರ ಮಟ್ಟದಲ್ಲಿ ನಡೆಯುತ್ತಿದ್ದ ಅಲ್ಪಸ್ವಲ್ಪ ತೊಂದರೆಗಳು ನಿವಾರಿಸಲ್ಪಟ್ಟವು. ಧಾನ್ಯ ವಿಭಜನೆ ಜನತೆಯ ಕಣ್ಣ ಮುಂದೆಯೇ ನಡೆದು, ಒಣ ಹುಲ್ಲು ಅವರಿಗೇ ನೀಡಲ್ಪಟ್ಟಿತು. ಹಳೆಯ ಮೈಸೂರು ಪ್ರಾಂತದಲ್ಲಿ ೧೭೯೯ರ ಪೂರ್ವದಲ್ಲಿ ಸಾಮಾನ್ಯ ಭೂಸರ್ವೇಕ್ಷಣ ನಡೆದಂತಿಲ್ಲವೆಂದು ಅಭಿಪ್ರಾಯಪಡಲಾಗಿದೆ. ಟೀಪ್ಪು ಮೇಲಿನ ಯುದ್ಧಗಳು ಮುಗಿದೊಡನೆ, ಸರ್ವೇಯರ್ ಜನರಲ್ ಆಫ್ ಇಂಡಿಯಾ ಆಗಿ ನಿವೃತ್ತರಾದ ಕರ್ನಲ್ ಮೆಕೆನ್ಜಿಯವರು ರಾಜ್ಯದ ಭೂಸರ್ವೇಕ್ಷಣ ನಡೆಸಿದುದಾಗಿ ತಿಳಿದುಬರುತ್ತದೆ. ಇದೇ ರೀತಿ ನಿಗಧಿತ ಸಮಯಕ್ಕೆ ಸರಿಯಾಗಿ, ನಿಯಮಿತವಾಗಿ ಭೂ ಸರ್ವೇಕ್ಷಣ ನಡೆಸುವ ನಿರ್ಧಾರವನ್ನು ೧೮೬೨ರಲ್ಲಿ ಕೈಗೊಳ್ಳಲಾಯಿತು.

ಕಂದಾಯ ನಿಗಧಿ ಮಾಡುವಲ್ಲಿ ಏಕರೂಪತೆ ತರುವ ಉದ್ದೇಶದಿಂದ ೧೮೬೫ಕ್ಕೆ ಪೂರ್ವದಲ್ಲಿ ಕಂದಾಯ ನಿಷ್ಕರ್ಷೆಯಾಗಿ ಭೂಮಿಯನ್ನು ಅಳೆಯುವ ಕಾರ್ಯ ಪ್ರಾರಂಭವಾಗಿತ್ತೆಂದು ತಿಳಿದುಬರುತ್ತದೆ. ಇದು ಬಹುಶ: ೧೮೮೦ ರಿಂದ ೧೮೬೦ರ ಎರಡು ದಶಕಗಳಲ್ಲಿ ನಡೆದಿದ್ದು, ಮೂವತ್ತು ವರ್ಷಗಳ ಅವಧಿಗೆ ಸರ್ವೇಕ್ಷಣೆ ಮತ್ತು ಕಂದಾಯ ನಿರ್ಣಯ ನಡೆಸಲಾಯಿತು.

ಮೈಸೂರು ರಾಜ್ಯದಲ್ಲಿ ೧೯೧೯ರಲ್ಲಿ ಬ್ರಿಟಿಷ್ ಆಡಳಿತಾನುಸಾರ ಭೂದಾಖಲೆಗಳ ವ್ಯವಸ್ಥೆಯನ್ನು ಪರಿಷ್ಕರಿಸಲಾಯಿತು. ಮೊದಲ ಬಾರಿಗೆ ೧೯೩೬ರಲ್ಲಿ ರೆಕಾರ್ಡ್ ಆಫ್ ರೈಟ್ಸ್ ಎಂಬ ವ್ಯವಸ್ಥೆಯನ್ನು ಆರಂಭಿಸಲಾಯಿತು. ೧೯೩೭ರಲ್ಲಿ ಒಂದು ಪ್ರತ್ಯೇಕ ಭೂದಾಖಲಾತಿ ಇಲಾಖೆಯನ್ನು ಒಬ್ಬ ಆಯುಕ್ತರ ಆಡಳಿತದಡಿ ಸ್ಥಾಪಿಸಲಾಯಿತು.

ಭೂದಾಖಲೆಗಳ ಸಂರಕ್ಷಣೆಯೇ ಅಲ್ಲದೆ ಭೂಸರ್ವೇಕ್ಷಣೆಯನ್ನೂ ಈ ಇಲಾಖೆ ನಡೆಸಬೇಕಿದ್ದಿತು. ಭೂಮಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಅಂದರೆ ಗ್ರಾಮವಾರು ಭೂಮಿಯ ಹಾಗೂ ಅದರ ಮಾಲಿಕರ ವಹಿ, ಸದರಿ ಭೂಮಿಯ ಪಾಲುಗಾರಿಕೆಯ ವಿವರ, ಪರಾಧೀನಗೊಂಡಿದ್ದರೆ, ಎರಡನೇ ಮಾಲಿಕರ ವಿವರ, ಬಾಡಿಗೆಗೆ ಅಥವಾ ಗುತ್ತಿಗೆಗೆ ನೀಡಿದ್ದರೆ ಅವುಗಳ ವಿವರ, ಕಾಲಕಾಲಕ್ಕೆ ಮಾಲೀಕತ್ವದ ಬದಲಾವಣೆಗಳ ವಿವರ ಈ ಎಲ್ಲವನ್ನೂ ದಾಖಲಿಸಿ, ವಹಿಗಳನ್ನು ಸಂರಕ್ಷಿಸಬೇಕಿದ್ದಿತು. ಭೂದಾಖಲೆ ಹಾಗೂ ರೆಕಾರ್ಡ್ ಆಫ್ ರೈಟ್ಸ್ ಇಲಾಖೆಗಳನ್ನು ೧೯೪೫ರಲ್ಲಿ ಒಗ್ಗೂಡಿಸಿ 'ಡಿಪಾರ್ಟ್‌ಮೆಂಟ್ ಆಫ್ ಸರ್ವೆ ಅಂಡ್ ಸೆಟಲ್ಮೆಂಟ್' ಇಲಾಖೆ ಎಂದು ಕರೆಯಲಾಯಿತು.

### ೧೯೬೪ರ ಪರಿಷ್ಕರಣ ಭೂಕಂದಾಯ ವ್ಯವಸ್ಥೆ

ಪ್ರತೀ ಮೂವತ್ತು ವರ್ಷಗಳು ಕಳೆದಾಗ ಅನೇಕ ಪ್ರಕಾರದ ಜಮೀನುಗಳ ಸ್ಥಿತಿ-ಗತಿಗಳನ್ನು ಪರಿಶೀಲಿಸಿ ಕಂದಾಯವನ್ನು ಪರಿಷ್ಕರಿಸುವ ಪ್ರಸ್ತಾವನೆಯನ್ನು ತಾತ್ವಿಕವಾಗಿ ಒಪ್ಪಿಕೊಳ್ಳಲಾಗಿದ್ದಿತು. ರಾಜ್ಯದ ವಿವಿಧೆಡೆ, ವಿವಿಧ ಕಂದಾಯ ವಸೂಲಿ ಪದ್ಧತಿಗಳು ಪ್ರಚಲಿತವಿದ್ದು, ರಾಜ್ಯದಾದ್ಯಂತ ಅನ್ವಯವಾಗಬಲ್ಲ ಏಕರೂಪ ಭೂಕಂದಾಯ ವ್ಯವಸ್ಥೆಯ ರೂಪರೇಷೆಗಳನ್ನು ನೀಡಲು ಭೂಕಂದಾಯ ಉಪ ಆಯುಕ್ತರನ್ನು ರಾಜ್ಯ ಸರ್ಕಾರ ನೇಮಕ ಮಾಡಿತು. ಇವರು ಇತರೆ ರಾಜ್ಯಸರ್ಕಾರಗಳ ಕಂದಾಯ ಪದ್ಧತಿಯನ್ನು ಅಭ್ಯಸಿಸಿ ಏಕರೂಪ ಪದ್ಧತಿಯ ವ್ಯವಸ್ಥೆಯನ್ನು ತಯಾರಿಸಿ ಮಂಡಿಸಿದರು. ಇದನ್ನು ವಿವರವಾಗಿ ಪರಿಶೀಲಿಸಿದ ಸರ್ಕಾರ ಇದಕ್ಕೆ ತನ್ನ ಸಮ್ಮತಿ ನೀಡಿತು. ೧೯೬೪ರಲ್ಲಿ ಮೈಸೂರು ಕಂದಾಯ ಶಾಸನವನ್ನು ಜಾರಿಗೊಳಿಸುವುದರ ಮೂಲಕ ರಾಜ್ಯದಾದ್ಯಂತ ಏಕರೂಪದ ಭೂಕಂದಾಯ ವ್ಯವಸ್ಥೆ ಜಾರಿಯಾಯಿತು. ಈ ವ್ಯವಸ್ಥೆಯಡಿ ಕಂದಾಯ ಘಟಕಗಳನ್ನು 'ವಲಯ'ಗಳೆಂದು ಕರೆಯಲಾಯಿತು. ಇಂತಹ ವಲಯಗಳಲ್ಲಿ ಏಕರೀತಿಯ ಪ್ರಾಕೃತಿಕ ರಚನೆ, ಹವಾಮಾನ, ಮಳೆ, ಪ್ರದೇಶದ ಮುಖ್ಯ ಬೆಳೆಗಳು, ನೆಲದ ವಿಶೇಷ

ಗುಣಗಳನ್ನುಳ್ಳ ಪ್ರದೇಶದ ಸೇರ್ಪಡೆಯಾಯಿತು. ಇದನ್ನು ಆದಷ್ಟು ವೈಜ್ಞಾನಿಕವಾಗಿ ಕೈಗೊಳ್ಳಲಾಯಿತು. ಒಂದು ವಲಯದಡಿ ಬರುವ ಜಮೀನುಗಳನ್ನು ಪರಸ್ಪರ ಮೌಲ್ಯಗಳ ಪ್ರಕಾರ ವರ್ಗೀಕರಿಸಲಾಯಿತು. ಭೂಮಾಪನ ದಾಖಲೆಗಳಲ್ಲಿದ್ದಂತೆ ನೆಲ, ನೀರು ಹಾಗೂ ಇತರೆ ಸೌಕರ್ಯಗಳನ್ನನುಸರಿಸಿ, 'ವರ್ಗೀಕರಣ ಮೌಲ್ಯ' ದ ಪ್ರಕಾರ ಜಮೀನನ್ನು ತರಿ, ಖುಷ್ಕಿ, ಬಾಗಾಯಿತು ಮತ್ತು ತೋಟಗಳು (ಕಾಫಿ, ಟೀ ಇತ್ಯಾದಿ) ಎಂದು ನಾಲ್ಕು ವರ್ಗಗಳಾಗಿ ವಿಂಗಡಿಸಲಾಯಿತು.

**ಪ್ರಮಾಣಿತ ದರ**

ಭೂಕಂದಾಯ ಶಾಸನ ೧೯೬೪ರ ಪ್ರಕಾರ 'ಪ್ರಮಾಣಿತ ದರ' ಎಂದರೆ ಶೇಕಡಾ ೧೦೦ ರಷ್ಟು ವರ್ಗೀಕರಣ ಮೌಲ್ಯ ಪಡೆದಿರುವ ಒಂದು ವರ್ಗದ ಜಮೀನಿನಲ್ಲಿ ಬೆಳೆದ ಒಂದು ಎಕರೆಯ ಸರಾಸರಿ ಇಳುವರಿಯ ಶೇಕಡಾ ನಾಲ್ಕರಷ್ಟು ಮೌಲ್ಯಕ್ಕೆ ಸಮನಾದುದು ಎಂದರ್ಥ. ಪ್ರಮಾಣಿತ ದರವನ್ನು ಲೆಕ್ಕ ಹಾಕುವಾಗ ಭೂಕಂದಾಯಾಧಿಕಾರಿ (ಸೆಟ್ಲ್‌ಮೆಂಟ್ ಆಫೀಸರ್) ಜಮೀನಿನ ಸರಾಸರಿ ಇಳುವರಿಯ ಖಚಿತವಾದ ಪಾಲನ್ನು (ಹಣದ ರೂಪದಲ್ಲಿ) ಗಣನೆಗೆ ತೆಗೆದುಕೊಳ್ಳುತ್ತಿದ್ದರು. ಇದು ಹವಾಮಾನ, ಮಳೆ, ಸಂಪರ್ಕ ಸಾಧನ, ಮಾರುಕಟ್ಟೆಗಳ ಸಾಮೀಪ್ಯ, ಜಾನುವಾರುಗಳ ವ್ಯವಸ್ಥೆಯಂತಹ ಅಂಶಗಳನ್ನು ಅವಲಂಬಿಸಿತ್ತು. ಭೂಕಂದಾಯ ವ್ಯವಸ್ಥೆ ಕಾರ್ಯಾಚರಣೆ ಪ್ರಾರಂಭವಾಗುವ ಮೊದಲಿನ ೩೦ ವರ್ಷಗಳ ಮಳೆಯ ವಿವರಗಳನ್ನು ಪರಿಗಣಿಸಲಾಗುತ್ತಿತ್ತು. ಇದರಿಂದ ಪ್ರಸ್ತುತ ದರಗಳ ತುಲನಾತ್ಮಕ ಅಂದಾಜು ದೊರೆಯುತ್ತಿತ್ತು. ಬೇಸಾಯ ಭೂಮಿಗಿಂತ ಜನಸಂಖ್ಯೆಯ ಭೂಪ್ರದೇಶ ಅಧಿಕವಾಗಿದ್ದಲ್ಲಿ ಜನಜೀವನದ ಮೇಲೆ ದುಷ್ಪರಿಣಾಮ ಉಂಟಾಗುತ್ತಿತ್ತು ಅಥವಾ ಜನಸಂಖ್ಯಾ ಕೊರತೆಯಿಂದ ಕೂಲಿ ಕೆಲಸದವರೇ ದೊರಕದಿರುವುದೂ ಸಹ ಒಂದು ಬಾಧಕವಾಗುತ್ತಿತ್ತು. ಅಲ್ಲದೆ ಜಾನುವಾರುಗಳ ಪರಿಸ್ಥಿತಿ, ಕೂಲಿದರ ಹಾಗೂ ಕೃಷಿ ಉತ್ಪನ್ನಗಳ ಬೆಲೆಗಳನ್ನೂ ಅವಲೋಕಿಸಲಾಗುತ್ತಿತ್ತು. ೧೯೩೦-೩೧ ರಿಂದ ೧೯೬೦-೬೧ರವರೆಗಿನ ೩೦ ವರ್ಷಗಳ ಸಕಲ ಬೆಳೆಗಳ ಬೆಲೆಗಳನ್ನು ಪರಿಗಣಿಸಲಾಯಿತು. ಒಂದು ವರ್ಗದ ಜಮೀನಿನ ಒಟ್ಟು ಇಳುವರಿ ತಿಳಿದುಕೊಳ್ಳಲು ಹಿಂದಿನ ಹತ್ತು ವರ್ಷಗಳ ಬೆಳೆ ಪ್ರಾತ್ಯಕ್ಷಿಕೆಯ ಫಲಿತಾಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಯಿತು. ತದನಂತರ ದೊಡ್ಡ ಪ್ರಮಾಣದ ವ್ಯತ್ಯಾಸ ಕಂಡು ಬಂದಾಗ ಸಂದರ್ಭಾನುಸಾರ ಶುಲ್ಕ ರಿಯಾಯಿತಿ ನೀಡುವ ಅಥವಾ ಶುಲ್ಕ ಏರಿಸುವ ಅವಕಾಶವನ್ನು ಸರ್ಕಾರ ಉಪಯೋಗಿಸುತ್ತಿತ್ತು. ಈ ರೀತಿ ಪ್ರತಿಯೊಂದು ವರ್ಗದ ಜಮೀನಿನ ಪ್ರಮುಖ ಬೆಳೆಗಳ ಒಟ್ಟು ಉತ್ಪನ್ನದ ಆಧಾರದ ಮೇಲೆ ನಿರ್ಧರಿತವಾದ ಪ್ರಮಾಣಿತ ದರಗಳನ್ನು ಕುರಿತು ಭೂಕಂದಾಯ ಶಿಫಾರಸ್ಸುಗಳನ್ನು ಮಾಡಲಾಯಿತು. ನೂತನ ದರ ಹಾಗೂ ಭೂಕಂದಾಯ ವ್ಯವಸ್ಥೆಯ ವರದಿಗಳನ್ನೂ ಸಾರ್ವಜನಿಕ ಆಕ್ಷೇಪ ಮಂಡನೆಗೆ ಪ್ರಕಟಿಸಲಾಯಿತು. ಸಾಕಷ್ಟು ಕಾಲಾವಧಿಯ ನಂತರ ಈ ಎರಡನ್ನೂ ಜಿಲ್ಲಾಧಿಕಾರಿಗಳ ಅಭಿಪ್ರಾಯದೊಂದಿಗೆ ಶಾಸನ ಸಭೆಯಲ್ಲಿ ಮಂಡನೆಗಾಗಿ ಭೂಕಂದಾಯ ಆಯುಕ್ತರ ಮೂಲಕ ಸರ್ಕಾರಕ್ಕೆ ರವಾನಿಸಲಾಯಿತು. ವಿಧಾನಮಂಡಲದ ಎರಡೂ ಸದನಗಳ ಪರಿಶೀಲನೆಯ ನಂತರ ಇದನ್ನು ೧೯೬೫ರ ಡಿಸೆಂಬರ್‌ನಲ್ಲಿ ಪ್ರತೀ ವಲಯಕ್ಕೆ ಸಂಬಂಧಪಟ್ಟಂತೆ ಅಂಗೀಕೃತ ಪ್ರಮಾಣಿತ ದರಗಳನ್ನು ಅಧಿಸೂಚನೆಯೊಂದಿಗೆ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಯಿತು.

ಕರ್ನಾಟಕ ಭೂಕಂದಾಯ ಕಾಯ್ದೆ ೧೯೬೪, ಪರಿಚ್ಛೇದ ೧೧೪ ರಿಂದ ೧೨೬ ಹಾಗೂ ನಿಯಮ ೨೧ ರಿಂದ ೩೭, ಭೂನಿಷ್ಕರ್ಷೆ ಹಾಗೂ ಭೂಕಂದಾಯ ನಿಗದಿಯ ಬಗ್ಗೆ ಮಾಹಿತಿಯನ್ನೊಳಗೊಂಡಿರುತ್ತವೆ. ಈ ಕಾಯ್ದೆ ೧೯೬೪ರಲ್ಲಿ ಜಾರಿಯಾದೊಡನೆ ರಾಜ್ಯದ ವಿವಿಧೆಡೆ ಭೂಕಂದಾಯದ ಪರಿಷ್ಕೃತ ನಿಷ್ಕರ್ಷೆಗಾಗಿ ಸರಕಾರ ಅಧಿಸೂಚನೆ ಹೊರಡಿಸಿತು ಹಾಗೂ ಇದಕ್ಕಾಗಿ ವಿಭಾಗ ಹಾಗೂ ವಲಯಗಳನ್ನೂ ರೂಪಿಸಿತು.

**ನೀರಿನ ಕರ**

ಕರ್ನಾಟಕ ಸರ್ಕಾರದ ೧೯೮೦ರ ಅಧಿಸೂಚನೆಯನ್ವಯ ಕರ್ನಾಟಕ ನೀರಾವರಿ (ನೀರಿನ ದರ ಆಕರಣೆ) ನಿಯಮಗಳು ೧೯೬೫ ರ ನಿಯಮ ನಾಲ್ಕಕ್ಕೆ ತಿದ್ದುಪಡಿ ಮಾಡಲಾಯಿತು. ಈ ತಿದ್ದುಪಡಿ ಪ್ರಕಾರ ನೀರಾವರಿ ದರ (ವಾಟರ ರೇಟ್) ಬೇಡಿಕೆ ಪತ್ರಿಕೆಯನ್ನು ತಯಾರಿಸಿ ತಹಶೀಲದಾರರಿಗೆ ಕಳಿಸುವ ಹೊಣೆಗಾರಿಕೆ ಆಯಾ ಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರದ್ದಾಗಿರುತ್ತದೆ. ಈ ಬೇಡಿಕೆ ಪತ್ರಿಕೆಯನ್ನು ತಯಾರಿಸುವ ಪೂರ್ವದಲ್ಲಿ ನಿಯಮ ನಾಲ್ಕರ ಪ್ರಕಾರ ಈ ಕೆಳಗಿನಂತೆ ಕ್ರಮ ಜರುಗಿಸಬೇಕಾಗುತ್ತದೆ.

ನೀರಾವರಿ (ಲೋಕೋಪಯೋಗಿ) ಇಲಾಖೆ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳಿಂದ ನೀರಾವರಿ ಅಗತ್ಯಕ್ಕೆ ಸರ್ವೆನಂಬರುಗಳ ಜಂಟಿ ತಪಾಸಣೆ ಮಾಡಿ ಆ ಸರ್ವೆನಂಬರುಗಳಿಗೆ ನೀರು ಮುಟ್ಟಿದ ಬಗ್ಗೆ ಮತ್ತು ಬೆಳೆದ ಬೆಳೆಗಳ ಬಗ್ಗೆ ಮಾಹಿತಿ ಪಡೆಯಲಾಗುವುದು. ಜಂಟಿ ತಪಾಸಣೆಯನ್ನು ಸಾಮಾನ್ಯವಾಗಿ ನೀರಾವರಿ ಸೌಲಭ್ಯ ಪಡೆಯುವ ರೈತರ ಸಮಕ್ಷಮ ನಡೆಸಿ ರೈತರ ಸಹಿಯನ್ನೂ ಪಡೆದುಕೊಳ್ಳಲಾಗುತ್ತಿತ್ತು. ತಪಾಸಣೆ ಪತ್ರಿಕೆಯನ್ನು ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು ಸಂಬಂಧಿಸಿದ ತಹಶೀಲದಾರರಿಗೆ ಕಳುಹಿಸಬೇಕಾಗಿತ್ತು. ಜಂಟಿ ತಪಾಸಣೆಯಿಂದ ಕಂಡು ಬಂದ ನೀರಾವರಿ ಆದ ಸರ್ವೆನಂಬರುಗಳ ಪತ್ರಿಕೆ ಸರಿ ಇದೆ ಎಂದು ಮನವರಿಕೆ ಮಾಡಿಕೊಂಡ ನಂತರ ಪ್ರತೀಯೊಂದು ಸರ್ವೆನಂಬರಿನ ಜಮೀನಿಗೆ ರೈತರಿಂದ ಸಂದಾಯ ಮಾಡಬೇಕಾದ ನೀರಿನ ದರದ ಪತ್ರಿಕೆಯನ್ನು ಸಹಾಯಕ ಇಂಜನೀಯರರು ತಯಾರಿಸಿ ನಂತರ ಗ್ರಾಮಚಾವಡಿ, ಪಂಚಾಯತ ಕಾರ್ಯಾಲಯ ಹಾಗೂ ಇತರ ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಪಡಿಸಿ ಸಂಬಂಧಿಸಿದ ರೈತರಿಂದ ತಕರಾರುಗಳನ್ನು ಆಹ್ವಾನಿಸಿ, ತಕರಾರುಗಳು ಬಂದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಹಶೀಲದಾರರೊಂದಿಗೆ ಅಂತಹ ಭೂಮಿಗಳ ತಪಾಸಣೆ ಮಾಡುವುದು. ಅಲ್ಲದೆ ಸಂಬಂಧಿಸಿದ ರೈತರಿಗೆ ಅವಕಾಶ ಕೊಟ್ಟು ಅವರ ಹೇಳಿಕೆ ಪಡೆದುಕೊಂಡು ಅವಶ್ಯವಿದ್ದರೆ ನೀರಿನ ದರದ ಪತ್ರಿಕೆಯನ್ನು ಪರಿಷ್ಕರಿಸಿ ತಹಶೀಲದಾರರಿಗೆ ಈ ಇಲಾಖೆಯವರು ಕಳಿಸಿದ ನೀರಿನ ದರದ ಪತ್ರಿಕೆಯನ್ವಯ ವಸೂಲಿ ಮಾಡುವ ಕರ್ತವ್ಯ ಕಂದಾಯ ಇಲಾಖೆಯದ್ದಾಗಿದೆ.

ಸರ್ಕಾರದ ಆದೇಶದ ಪ್ರಕಾರ ನೀರಿನ ದರಗಳನ್ನು ಈ ಕೆಳಗಿನಂತೆ ಆಕರ ಮಾಡಬೇಕಾಗುತ್ತದೆ. (೧) ಬೃಹತ್ ಮತ್ತು ಮಧ್ಯಮ ನೀರಾವರಿ ಕಾಮಗಾರಿಗಳ ಕೆಳಗೆ ನೀರಾವರಿ ಆಗತಕ್ಕ ಜಮೀನುಗಳಿಗೆ ದಿನಾಂಕ ೧.೭.೮೫ ರಿಂದ ನೀರಿನ ದರಗಳನ್ನು ಆಕರಣೆ ಮಾಡಬೇಕಾಗುತ್ತದೆ. ೧.೭.೮೫ರ ಪೂರ್ವದಲ್ಲಿ ಅಂದರೆ ೧.೭.೭೮ ರಿಂದ ೩೦.೬.೮೫ರವರೆಗೆ ಹಳೆಯ ನೀರಿನ ದರ ಆಕರಣೆ ಮಾಡಬೇಕಾಗುತ್ತದೆ. (ದಿ.೧.೬.೭೬ರ ದರದಂತೆ). (೨) ನಿಶ್ಚಿತ ನೀರಾವರಿ ಆಗದೆ ಇರುವ ಮಧ್ಯಮ ನೀರಾವರಿ ಕಾಮಗಾರಿಗಳ ಕೆಳಗೆ ಬರುವ ಜಮೀನುಗಳಿಗೆ ನಿಗದಿಪಡಿಸಿದ ನೀರಿನ ದರದ ೧/೨ ದಷ್ಟು ಆಕರಣೆ ಮಾಡಬೇಕು. (೩) ಚಿಕ್ಕ ನೀರಾವರಿ ಕೆರೆಗಳ ಕೆಳಗೆ ಬರುವ ಜಮೀನುಗಳಿಗೆ (ಹೈಯರ್ ರೀಚಸ್) ನಿಗದಿಪಡಿಸಿದ ನೀರಿನ ದರದ ೧/೨ದಷ್ಟು ಹಾಗೂ ಇನ್ನೂ ಕೆಳಗಡೆ (ಲೋವರ್ ರೀಚಸ್) ಯಲ್ಲಿರುವ ಜಮೀನುಗಳಿಗೆ ನಿಗದಿಪಡಿಸಿದ ನೀರಿನ ದರದ ೧/೪ದಷ್ಟು ಆಕರಣೆ ಮಾಡಬೇಕು. ಕನಿಷ್ಠ ದರವು ತರಿ ಆಕಾರ ಮತ್ತು ಖುಷ್ಕಿ ಆಕಾರದ ನಡುವಿನ ಅಂತರ ೧ ೧/೨ ಪಟ್ಟು ಇರಬೇಕು. ಗರಿಷ್ಠ ದರವು ತರಿ ಆಕಾರ ಮತ್ತು ಖುಷ್ಕಿ ಆಕಾರದ ನಡುವಿನ ಅಂತರದ ಎರಡು ಪಟ್ಟು ಇರಬೇಕು. ಹೈಯರ್ ಮತ್ತು ಲೋವರ್ ರೀಚಸ್‌ಗಳಲ್ಲಿಯಂತೆಯೇ, ಕಡಿತಗೊಂಡ ನೀರಿನ ದರಗಳ ಆಕರಣೆ ೧.೭.೭೬ರಿಂದ ಜಾರಿಯಲ್ಲಿ ಬಂದಿತ್ತು.

ಉಲ್ಲೇಖಿತ ಸರ್ಕಾರದ ಆದೇಶದ ಕಂಡಿಕೆ (೫)ರಲ್ಲಿ ಆದೇಶಿಸಿದಂತೆ ಚಿಕ್ಕ ನೀರಾವರಿ ಕೆರೆಗಳ ಅಡಿಯಲ್ಲಿ ಬರತಕ್ಕ ಜಮೀನುಗಳಿಗೆ ೩೦.೬.೭೬ರವರೆಗೆ ಆಕರಣೆ ಆದ ನೀರಿನ ದರಗಳ ವಸೂಲಿ ಆಗದೆ ಬಾಕಿ ಇದ್ದರೆ ಆ ಬಾಕಿಯನ್ನು ಸರ್ಕಾರದವರು ಮನ್ನಾ ಮಾಡಿದ್ದಾರೆ. ಸರ್ಕಾರದ ಆದೇಶವನ್ನು ಈ ಬಗ್ಗೆ ದಿನಾಂಕ ೨೪.೭.೧೯೮೫ರಂದು ನಿಗದಿಪಡಿಸಿದ್ದು ಆ ನೀರಿನ ದರಗಳನ್ನು ಜಾರಿಯಲ್ಲಿ ತರಲು ಕರ್ನಾಟಕ ನೀರಾವರಿ (ನೀರಿನ ದರ ಆಕರಣೆ) ನಿಯಮಗಳು

೧೯೬೫ಕ್ಕೆ ತಿದ್ದುಪಡಿಯನ್ನು ಸರ್ಕಾರದವರು ದಿನಾಂಕ ೪.೧೧.೮೭ ರಂದು ಹೊರಡಿಸಿದ್ದಾರೆ.

**ನಿರ್ವಹಣೆ ಕರ :** ಕರ್ನಾಟಕ ನೀರಾವರಿ ಕಾಯ್ದೆ ೧೯೬೫ರ ಕಲಂ ೪೪ ರ ಅನ್ವಯ ಮತ್ತು ಕರ್ನಾಟಕ ನೀರಾವರಿ ನಿಯಮಗಳು ೧೯೬೫ರ ನಿಯಮ ೨೧–ಎ ಅನ್ವಯ ಪ್ರತೀ ಎಕರೆಗೆ ಪ್ರತೀ ವರ್ಷಕ್ಕೆ ರೂ.೪.೦೦ ರಂತೆ ನಿರ್ವಹಣಾ ಕರವನ್ನು ತಹಶೀಲದಾರರು ಆಕರಣೆ ಮತ್ತು ವಸೂಲಿ ಮಾಡಬೇಕಾಗುತ್ತದೆ. ಆದರೆ ಸತತ ಎರಡು ವರ್ಷಕ್ಕಿಂತ ಕಡಿಮೆ ಇಲ್ಲದ ಅವಧಿಗೆ ಜಮೀನುಗಳಿಗೆ ನೀರು ಪೂರೈಕೆ ಆಗದಿದ್ದರೆ ಈ ನಿರ್ವಹಣಾ ಕರ ಆಕರಣೆ ಮಾಡುವಂತಿಲ್ಲ.

**ನೀರಿನ ದಂಡದ ಕರ :** ಕರ್ನಾಟಕ ನೀರಾವರಿ ಕಾಯ್ದೆ ೧೯೬೫ರ ಕಲಂ ೨೮ (೫) ರನ್ವಯ ನೀರಾವರಿ ಅಧಿಕಾರಿಗಳಿಂದ ಪರವಾನಿಗಿ ಪಡೆಯದೆ ಸರಕಾರದ ಮೂಲಗಳಿಂದ ನೀರನ್ನು ಬಳಸಿಕೊಂಡರೆ ಆ ಬಗ್ಗೆ ದಂಡ ಸಂದಾಯ ಮಾಡಬೇಕಾಗುವುದು. ಇಂತಹ ದಂಡ ಸಾಮಾನ್ಯ ನೀರಿನ ದರದ ೧೫ ಪಟ್ಟು ಆಗಿರುತ್ತದೆ. ಇದೇ ಕಾಯ್ದೆಯ ಕಲಂ ೩೨(೪) ರನ್ವಯ ಅಧಿಸೂಚಿತ ಬೆಳೆಗಳನ್ನು ಹೊರತುಪಡಿಸಿ ಬೇರೆ ಬೆಳೆಗಳನ್ನು ಬಿತ್ತಿದರೆ ಅಥವಾ ಬೆಳೆದರೆ ಸಾಮಾನ್ಯ ನೀರಿನ ದರದ ೧೦ ಪಟ್ಟು ದಂಡ ಸಂದಾಯ ಮಾಡಬೇಕಾಗುವುದು. ಮೇಲ್ಕಾಣಿಸಿದ ನೀರಿನ ದಂಡದ ಕರಗಳು ೧.೭.೧೯೮೫ ರಿಂದ ಜಾರಿಯಲ್ಲಿ ಬಂದಿರುತ್ತದೆ.

ಹಳೆಯ ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿದ್ದ 'ಮೈಸೂರು ಭೂಕಂದಾಯ ಕೈಪಿಡಿ'ಯ ೧೩೩ನೇ ಕಲಂನಲ್ಲಿ ನೀರು ಸರಬರಾಜಿಗಾಗಿ ನೀರಿನ ವಾರ್ಷಿಕ ದರಗಳ ಬಗ್ಗೆ ಹೇಳಲಾಗಿತ್ತು. ನೀರಿನ ತೆರಿಗೆಯನ್ನು ಭೂಮಾಪನ ಇಲಾಖೆ ನಿಗದಿ ಮಾಡುತ್ತಿದ್ದು, ನೀರಾವರಿ ಜಮೀನಿನ ವಾರ್ಷಿಕ ತೆರಿಗೆಯನ್ನು ಆ ಇಲಾಖೆಯೇ ನಿರ್ಧರಿಸುತ್ತಿತ್ತು. ಸರ್ಕಾರಿ ನೀರನ್ನು ಬಳಸಿ ಖುಷ್ಕಿ ಭೂಮಿಯು 'ತರಿ'ಯಾಗಿ ಪರಿವರ್ತನೆ ಹೊಂದಿದಲ್ಲಿ, ಅದರ ಕಂದಾಯ ನೆರೆಯ ಗ್ರಾಮದ ಅಂಥ ಜಮೀನಿನ ಕಂದಾಯವನ್ನವಲಂಬಿಸಿ ನಿಗದಿಯಾಗುತ್ತಿತ್ತು. ಸುಧಾರಿತ ನೀರಿನ ತೆರಿಗೆ ಮತ್ತು ಬೇಸಿಗೆಯಲ್ಲಿ ವಿಶೇಷವಾಗಿ ಸರಬರಾಜು ಮಾಡುವ ನೀರಿನ ತೆರಿಗೆ ದರಗಳನ್ನು ಭೂಕಂದಾಯದೊಡನೆಯೇ ವಸೂಲು ಮಾಡಲಾಗುತ್ತಿತ್ತು. ೧೯೭೨ ರಿಂದ ೧೯೮೨ ರ ಅವಧಿಯಲ್ಲಿ ಹಲವಾರು ತಿದ್ದುಪಡಿಗಳನ್ನು ಮಾಡಿದ ನಂತರ ಮುಂದೆ ನೀಡಿರುವಂತೆ ತೆರಿಗೆಗಳನ್ನು ವಿಧಿಸಲಾಯಿತು. (ಎಕರೆಗಳಿಗೆ ರೂ.ಗಳಲ್ಲಿ) ಕಬ್ಬು (೧೨ ತಿಂಗಳು) ೧೫೦; ಕಬ್ಬು (೧೩ ರಿಂದ ೧೮ ತಿಂಗಳು) ೨೨೪; ಭತ್ತ ೪೫; ಗೋಧಿ ೨೪; ಜೋಳ ೨೪; ಕಡಲೆಕಾಯಿ ೨೪; ಹತ್ತಿ ೪೮; ರಾಗಿ, ಸಜ್ಜೆ, ಹೆಸರುಕಾಳು, ಗೆಣಸು, ತಂಬಾಕು, ಕೊತ್ತಂಬರಿ ೨೪; ಕಾಳುಗಳು ೧೮; ಗೊಬ್ಬರಾವಲಂಬಿತ ಬೆಳೆಗಳು ೯ ಹಾಗೂ ತೋಟದ ಬೆಳೆಗಳು ೫೦.

**ಕೋಷ್ಟಕ ೯.೧ ೧೯೯೪–೯೫ ರಿಂದ ೧೯೯೯–೨೦೦೦ರ ವರೆಗೆ ಭೂಸರ್ವೇಕ್ಷಣ ಹಾಗೂ ಭೂದಾಖಲೆ ಇಲಾಖೆಗಳಿಂದ ವಸೂಲಾದ ಕಂದಾಯ ವಿವರ (ರೂ. ಗಳಲ್ಲಿ)**

| | |
|---|---|
| ೧೯೯೪–೯೫ | ೭೩,೪೧೬ |
| ೧೯೯೫–೯೬ | ೮೮,೭೮೧ |
| ೧೯೯೬–೯೭ | ೯೮,೦೨೯ |
| ೧೯೯೭–೯೮ | ೧,೦೧,೫೧೦ |
| ೧೯೯೮–೯೯ | ೬೨,೫೪೮ |
| ೧೯೯೯–೨೦೦೦ | ೧,೦೯,೪೭೧ |

**ಭೂಕಂದಾಯ ಲೆಕ್ಕ :** ಭೂಮಾಪನದ ಆಧಾರದ ಮೇಲೆ ಭೂಕಂದಾಯ ವ್ಯವಸ್ಥೆಯ ಲೆಕ್ಕಕ್ಕೆ ಭೂ ಮಾಪನ ಮತ್ತು ಕಂದಾಯ ವ್ಯವಸ್ಥೆ ಇಲಾಖೆಯು ಭೂಕಂದಾಯ ವ್ಯವಸ್ಥೆಯ ನೋಂದಣಿ ಪುಸ್ತಕವನ್ನು ತಯಾರಿಸುತ್ತದೆ.

ಇದರಲ್ಲಿ ಪ್ರತೀ ಸರ್ವೆ ಸಂಖ್ಯೆಯ ಕಂದಾಯ, ಕೃಷಿಯಾಗದ ಭೂಭಾಗದ ವಿವರ, ಭೂಮಾಲೀಕರ ಹೆಸರು ಇವೆಲ್ಲಾ ನಮೂದಾಗಿರುತ್ತವೆ. ಸರ್ವೆ ಸಂಖ್ಯೆಗಳನ್ನು ಒಳಗೊಂಡ ಪುಸ್ತಕವನ್ನು 'ಅಕಾರ ಬಂದ್' ಎನ್ನುತ್ತಾರೆ. ಇದರಲ್ಲಿ ಭೂಮಿಯ ಒಟ್ಟು ವಿಸ್ತೀರ್ಣ, ಕೃಷಿಯೋಗ್ಯ ಹಾಗೂ ಯೋಗ್ಯವಲ್ಲದ ಖುಷ್ಕಿ, ತರಿ, ಬಾಗಾಯಿತು ವಿವರಗಳು, ಪ್ರತೀ ಎಕರೆಯ ದರ, ಕಂದಾಯ, ಒಟ್ಟು ಸರ್ವೆ ಸಂಖ್ಯೆಗೆ ನಿಗದಿಯಾದ ಕಂದಾಯ–ಇವೆಲ್ಲ ನಮೂದಾಗಿರುತ್ತದೆ. ಇದನ್ನವಲಂಬಿಸಿ ಗ್ರಾಮಲೆಕ್ಕಿಗರು 'ಖೇತವಾರು ಪತ್ರಿಕೆ'ಯನ್ನು ತಯಾರಿಸುತ್ತಾರೆ.

ಈ ಖೇತವಾರು ಪತ್ರಿಕೆಯ ಆಧಾರದ ಮೇಲೆ ಗ್ರಾಮಲೆಕ್ಕಿಗನು ಗ್ರಾಮದ ಎಲ್ಲಾ ಜಮೀನುಗಳ ವಾಸ್ತವಾಂಶಗಳನ್ನು ದಾಖಲಿಸುತ್ತಾನೆ. ಕಂದಾಯ ದಾಖಲೆಗಳಲ್ಲಿ ಇದು ಬಹು ಪ್ರಮುಖ ದಾಖಲೆ. ಇದರಲ್ಲಿ ಪ್ರತೀ ಮಾಲಿಕನ ಹೆಸರಿನಲ್ಲಿರುವ ಭೂವಿಸ್ತೀರ್ಣ, ಕಂದಾಯ, ನೀರಾವರಿ ದರ, ಭೂವರ್ಗೀಕರಣ, ಗೇಣಿದಾರನ ಹೆಸರಿನಲ್ಲಿರುವ ಹಕ್ಕಿನ ಸ್ವರೂಪ, ಉತ್ಪಾದಿಸಿದ ಬೆಳೆಗಳ ವಿವರ ಮುಂತಾದ ಎಲ್ಲಾ ಅಂಶಗಳೂ ನಮೂದಾಗಿರುತ್ತವೆ. ಗೇಣಿ, ಹಕ್ಕು ದಾಖಲೆ ಹಾಗೂ ಬೆಳೆಗಳ ದಾಖಲೆಯನ್ನೊಳಗೊಂಡ 'ರೆಕಾರ್ಡ್ ಆಫ್ ಟೆನೆನ್ಸಿ ಅಂಡ್ ಕ್ರಾಪ್ಸ್' ಪುಸ್ತಕದ ಮೂಲ ಪ್ರತಿಯನ್ನು ಗ್ರಾಮಲೆಕ್ಕಿಗ ತನ್ನ ಕಛೇರಿಯಲ್ಲಿ ಇಟ್ಟುಕೊಂಡು, ಅದರ ದ್ವಿಪ್ರತಿಯನ್ನು ತಾಲೂಕು ಕಛೇರಿಯಲ್ಲಿಡುತ್ತಾನೆ. ಹಕ್ಕುಗಳ ಬದಲಾವಣೆ, ಅವುಗಳ ಕುರಿತ ವರದಿ ಬಂದ ನಂತರ, ಅವುಗಳನ್ನು ಪರಿಶೀಲಿಸಿ ಈ ನೋಂದಣಿ ಪುಸ್ತಕದಲ್ಲಿ ದಾಖಲಿಸಲಾಗುತ್ತದೆ ಹಾಗೂ ಐದು ವರ್ಷಗಳಿಗೊಮ್ಮೆ ಇದನ್ನು ಹೊಸದಾಗಿ ಬರೆಯಲಾಗುತ್ತದೆ.

**ಜಮಾಬಂದಿ**

'ಜಮಾ' ಎಂದರೆ ಸರ್ಕಾರಕ್ಕೆ ಪಾಲು, 'ಬಂದ್' ಎಂದರೆ ಸರ್ಕಾರಕ್ಕೆ ಬರುವ ಆದಾಯ ನಿಗದಿಪಡಿಸುವುದು, ಎಂದು ಅರ್ಥ. ರಾಜನಿಗೆ ಬರಬೇಕಾದ ಪಾಲನ್ನು (ರಾಜಸ್ವ) ನಿಗದಿಪಡಿಸುವುದು ಬಹು ಹಿಂದಿನಿಂದಲೂ ನಡೆದು ಬಂದಿದೆ. ಅದೇ ರೀತಿ ಸರಕಾರಕ್ಕೆ ಬರುವ ಕಂದಾಯ (ರಾಜಸ್ವ) ನಿಗದಿಪಡಿಸುವುದೇ ಜಮಾಬಂದಿ. 'ಆಕಾರಬಂದ್' ಶಬ್ದವನ್ನು ಉದಾಹರಣೆಗೆ ತೆಗೆದುಕೊಳ್ಳೋಣ. 'ಆಕಾರ' (ಆಕರಣೆ) ಎಂದರೆ ಒಂದು ನಿರ್ದಿಷ್ಟ ಜಮೀನಿನ ಉತ್ಪತ್ತಿಯ ಒಂದಂಶವನ್ನು ಸರ್ಕಾರದ ಪಾಲೆಂದು ನಿಗದಿಪಡಿಸಿ ಹಣದ ರೂಪದಲ್ಲಿ ವಸೂಲ ಮಾಡಬೇಕಾದ ಮೊಬಲಗೆಷ್ಟು ಎಂದು ಹೇಳುವುದು. 'ಬಂದ್' ಎಂದರೆ ನಿರ್ಧಾರಪಡಿಸುವುದು. ಈ ಆಕರಣೆಯೇ ಭೂಕಂದಾಯ. ಕರ್ನಾಟಕ ರಾಜ್ಯದ ವ್ಯಾಪ್ತಿಯಲ್ಲಿ ಬರುವ ಜಮೀನುಗಳಿಗೆ ಪ್ರತೀ ೩೦ ವರ್ಷಗಳಿಗೊಮ್ಮೆ ಪ್ರತೀಯೊಂದು ಜಮೀನನ್ನು ಅಳತೆ ಮಾಡಿಸಿ ಅದರ ಫಲವತ್ತತೆ, ಉತ್ಪತ್ತಿ, ಮಳೆ ಇತ್ಯಾದಿಗಳ ಆಧಾರದ ಮೇಲೆ ಆಕಾರಬಂದ್ ತಯಾರಿಸಿ, ಅದರ ಆಧಾರದ ಮೇಲೆ ಭೂಕಂದಾಯ ನಿರ್ಧರಿಸುವರು.

ಭೂಕಂದಾಯ ನಿಗದಿಯಾದ ಜಮೀನುಗಳ ಆದಿಭೋಗದಾರರು ಪ್ರತೀ ಕಂದಾಯ ಸಾಲಿಗೂ ಭೂಕಂದಾಯ ಕೊಡಬೇಕಾಗುತ್ತದೆ. ಪ್ರತಿಯೊಂದು ಜಮೀನಿನ ಆದಿಭೋಗದಾರನು ಪ್ರಸ್ತುತ ಕಂದಾಯ ಸಾಲಿಗೆ ಕೊಡಬೇಕಾದ ಭೂಕಂದಾಯವೆಷ್ಟು, ಸೆಸ್ಸುಗಳೆಷ್ಟು ಎಂಬುದನ್ನು ಜಿಲ್ಲಾಧಿಕಾರಿಗಳು ನಿರ್ಧರಿಸುವರು. ಪ್ರತೀ ವರ್ಷದ ಜುಲೈ ಒಂದನೇ ತಾರೀಖಿನಿಂದ ತದನಂತರದ ವರ್ಷದ ಜೂನ್ ೩೦ನೇ ತಾರೀಖಿನ ಅವಧಿಗೆ ಕಂದಾಯ ವರ್ಷವೆನ್ನುವರು. ಪ್ರತೀಯೊಂದು ಆದಿಭೋಗದಾರನ ಲೆಕ್ಕವನ್ನು ಜಿಲ್ಲಾಧಿಕಾರಿಗಳು ಅಥವಾ ಉಪ ವಿಭಾಗಾಧಿಕಾರಿಗಳು ದೃಢೀಕರಿಸಬೇಕಾಗುತ್ತದೆ. ಈ ರೀತಿ ಕಂದಾಯ ಸಾಲಿನ ಲೆಕ್ಕಗಳನ್ನು ದೃಢೀಕರಿಸುವ ಕಾರ್ಯವನ್ನು ವಿಶೇಷಾರ್ಥದಲ್ಲಿ 'ಹುಜೂರ್ ಜಮಾಬಂದಿ' ಎಂದು ಕರೆಯುತ್ತಾರೆ.

'ದಿತ್ತಂ ಜಮಾಬಂದಿ' ಮತ್ತು 'ಹುಜೂರ್ ಜಮಾಬಂದಿ', ಜಮಾಬಂದಿಯ ಎರಡು ವಿಧಗಳಾಗಿದ್ದು,

ಜಿಲ್ಲಾಧಿಕಾರಿ ಅಥವಾ ಉಪವಿಭಾಗಾಧಿಕಾರಿ ನಡೆಸುವ ವಾರ್ಷಿಕ ಲೆಕ್ಕಪತ್ರ ತಪಾಸಣೆಯೇ ಹುಜೂರ್ ಜಮಾಬಂದಿ. ಹುಜೂರ್ ಜಮಾಬಂದಿಯು ಅತಿ ಮಹತ್ವದ ಕಂದಾಯ ಕೆಲಸ. ಇದು ಸಾಮಾನ್ಯವಾಗಿ ಅಕ್ಟೋಬರ್ ತಿಂಗಳಿಂದ ಡಿಸೆಂಬರ್ ತಿಂಗಳ ಒಳಗೆ ನಡೆಯುತ್ತದೆ. ಈ ಸಮಯದಲ್ಲಿ ಹಿಂದಿನ ವರ್ಷದ ಗ್ರಾಮಲೆಕ್ಕದ ಪರಿಶೀಲನೆ ಹಾಗೂ ದೃಢೀಕರಣ ನಡೆಯುವುದಲ್ಲದೆ, ಪ್ರಸಕ್ತ ವರ್ಷದ ಕಂದಾಯ ಹಾಗೂ ಇತರ ಬಾಕಿಗಳ ಬಗ್ಗೆ ನಿರ್ಧರಿಸಲಾಗುತ್ತದೆ. ಜಮಾಬಂದಿ ಅಧಿಕಾರಿ ತಮ್ಮ ವಲಯ ಅಥವಾ ಗ್ರಾಮಕ್ಕೆ ಭೇಟಿಗಾಗಿ ಬಂದಾಗ, ರೈತರಿಗೆ ತಮ್ಮ ಅಹವಾಲುಗಳೇನಾದರೂ ಇದ್ದಲ್ಲಿ ಅವುಗಳನ್ನು ಅವರಿಗೆ ತಿಳಿಸಲು ಅನುಕೂಲವಾಗುವಂತೆ, ರೈತರಿಗೆ ಜಮಾಬಂದಿ ದಿನಾಂಕಗಳನ್ನು ಪೂರ್ವಭಾವಿಯಾಗಿ ತಿಳಿಸಲಾಗುತ್ತದೆ. ಇಂತಹ ಅಹವಾಲುಗಳನ್ನು ಜಮಾಬಂದಿ ಅಧಿಕಾರಿ ಆಯಾಯ ಸ್ಥಳದಲ್ಲಿಯೇ ನಿರ್ಧರಿಸುತ್ತಾನೆ. ಜಮಾಬಂದಿ ನಡೆದ ೧೫ ದಿನಗಳೊಳಗಾಗಿ ಜಮಾಬಂದಿ ವರದಿಯನ್ನು ಅಧಿಕಾರಿಯು ಸರಕಾರಕ್ಕೆ ಕಳುಹಿಸಬೇಕಾಗುತ್ತದೆ.

ಹುಜೂರ ಜಮಾಬಂದಿಗೆ ಪೂರ್ವಭಾವಿಯಾಗಿ ಮಾಡುವುದೇ 'ತಾಲೂಕ ಅಥವಾ ದಿತ್ತಂ' ಜಮಾಬಂದಿ. ಇದನ್ನು ಆಯಾ ತಾಲೂಕಿನ ತಹಶೀಲದಾರರು ನಡೆಸುತ್ತಾರೆ. ಹುಜೂರ ಜಮಾಬಂದಿ ಡಿಸೆಂಬರ್ ಅಂತ್ಯದ ವೇಳೆಗೆ ಮುಗಿಯಬೇಕಾಗುತ್ತದೆ. ಅಂದರೆ ದಿತ್ತಂ ಜಮಾಬಂದಿಯನ್ನು ಅದಕ್ಕೆ ಒಂದು ತಿಂಗಳ ಪೂರ್ವದಲ್ಲಿಯೇ ಮುಗಿಸಬೇಕು. ತಾಲೂಕ ದಿತ್ತಂ ಜಮಾಬಂದಿಯಲ್ಲಿ (೧) ಕಳೆದ ಕಂದಾಯ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸುವುದು ಹಾಗೂ (೨) ಪ್ರಸ್ತುತ ಸಾಲಿನ ಕಂದಾಯ ಲೆಕ್ಕಗಳನ್ನು ಸಿದ್ಧಪಡಿಸುವುದು, ಅವಶ್ಯಕವಾಗಿದೆ.

(ಅ) ಕಳೆದ ಸಾಲಿನ ಲೆಕ್ಕಗಳನ್ನು ಮುಕ್ತಾಯ ಮಾಡುವಾಗ (೧) ರಶೀದಿ ಪುಸ್ತಕ, (೨) ಖಿರ್ದಿ ಪುಸ್ತಕ, (೩) ಖಾತೆ, (೪) ಕಮ್ ಜಾಸ್ತಿ (ಹೆಚ್ಚು ಕಡಿಮೆ) ಘೋಷವಾರೆ, (೫) ತಾಲೂಕ ಭೂಕಂದಾಯ ಡೇ ಬುಕ್ಕ (ದೈನಿಕ ವಹಿ), (೬) ತಾಲೂಕು ಭೂಕಂದಾಯ ಲೆಡ್ಜರು (ಹೊತ್ತಿಗೆ), (೭) ಡಿ.ಸಿ.ಬಿ. ರಿಜಿಸ್ಟರ, (೮) ಕುಳ (ಹಿಡುವಳಿದಾರ) ವಾರ ಬಾಕಿ ಪಟ್ಟಿ ಹಾಗೂ (೯) ಇತರೇ ಸರಕಾರಿ ಬಾಕಿಗಳ ಖಾತೆಗಳನ್ನು ಪರಿಶೀಲಿಸಬೇಕು. (ಬ) ಪ್ರಸ್ತುತ ಸಾಲಿನ ಲೆಕ್ಕಗಳನ್ನು ಸಿದ್ಧಪಡಿಸುವಾಗ (೧) ಚಾಲ್ತಿ ಸಾಲಿನ ಖಾತೆ, (೨) ಚಾಲ್ತಿ ಸಾಲಿನ ಖಿರ್ದಿ, (೩) ಹಕ್ಕು ದಾಖಲೆ ಆರ್.ಟಿ.ಸಿ., (೪) ಹಕ್ಕು ದಾಖಲೆ ಬದಲಾವಣೆ ರಿಜಿಸ್ಟರ್, (೫) ವಿವಾದಾಸ್ಪದ ಪ್ರಕರಣಗಳ ರಿಜಿಸ್ಟರ್, (೬) ಇನಾಂ ರಿಜಿಸ್ಟರ್, (೭) ಬಂಜರು ಭೂಮಿ ತಖ್ತೆ, (೮) ಅತಿಕ್ರಮಣ ಪ್ರಸಂಗಗಳ ರಿಜಿಸ್ಟರ್, (೯) ಕಮ್ ಜಾಸ್ತಿ ಘೋಷವಾರೆ, (೧೦) ಆಕಾರ ಬಂದ್, (೧೧) ಚಾಲ್ತಿ ಸಾಲಿನ ಡಿ.ಸಿ.ಬಿ ರಿಜಿಸ್ಟರ್, (೧೨) ಚಾಲ್ತಿ ಸಾಲಿನ ಕುಳ (ಹಿಡುವಳಿದಾರ) ಬಾಕಿಪಟ್ಟಿ, (೧೩) ಇತರೇ ಸರ್ಕಾರಿ ಬಾಕಿಗಳ ಖಾತೆ ಮುಂತಾದವುಗಳನ್ನು ಪರಿಶೀಲಿಸಬೇಕಾಗುತ್ತದೆ.

ಜಮಾಬಂದಿ ಅಥವಾ ವಾರ್ಷಿಕ ಕಂದಾಯ ವಸೂಲಿ ತಪಾಸಣೆ ಪದ್ಧತಿಯು ಹಳೆಯ ಮೈಸೂರು ಪ್ರದೇಶದಲ್ಲಿ ೧೯೦೦ರಲ್ಲಿ ಪ್ರಾರಂಭವಾಯಿತು. ಪ್ರತೀ ವರ್ಷ ನಡೆಯುವ ಈ ಕಾರ್ಯಕ್ರಮದ ಸಮಯದಲ್ಲಿ ಗ್ರಾಮದ ಹಾಗೂ ತಾಲೂಕಿನ ವಹಿ (ರಿಜಿಸ್ಟರ್)ಗಳ ಸವಿವರ ಪರಿಶೋಧನೆ ನಡೆಯುತ್ತದೆ. ಭೂಕಂದಾಯ ನಿಗದಿಯಾದ ಗ್ರಾಮಗಳ ಬೇಡಿಕೆ (ಠರಾವು) ಸಹ ಸೇರಿದಂತೆ ಕಂದಾಯದ ಎಲ್ಲಾ ಬಾಬ್ತುಗಳನ್ನು ಸರಿಯಾಗಿ ನಿರ್ಧರಿಸಿ ಲೆಕ್ಕಕ್ಕೆ ಸೇರಿಸಲಾಗಿದೆಯೇ, ಆರ್ಥಿಕ ಹಾಗೂ ಆಡಳಿತ ಉದ್ದೇಶಗಳಿಗಾಗಿ ನಿಗದಿಪಡಿಸಿದ ಅಂಕಿ ಸಂಖ್ಯೆಗಳನ್ನು ಸರಿಯಾಗಿ ಸಂಗ್ರಹಿಸಲಾಗಿದೆಯೇ ಎಂಬದನ್ನು ಪರಿಶೀಲಿಸಲಾಗುವುದು. ಇವೆಲ್ಲದರ ಸಮಗ್ರ ಪರಿಶೀಲನೆಯೇ ಜಮಾಬಂದಿಯ ಮೂಲೋದ್ದೇಶ. ಇದರಿಂದ ಗ್ರಾಮ ಲೆಕ್ಕಿಗರ ವಾರ್ಷಿಕ ಕಾರ್ಯಕ್ರಮ ಪ್ರಗತಿಯ ಪರಿಶೀಲನೆಯೂ ಆಗುತ್ತದೆ.

**ಭೂಕಂದಾಯ ವಸೂಲಿ**

ಅನಾದಿಕಾಲದಿಂದಲೂ ಕಂದಾಯ ಸಲ್ಲಿಕೆ ಜನಸಾಮಾನ್ಯರ ಋಣವಾಗಿದ್ದಿತು. ೧೯೬೪ರಲ್ಲಿ ಕರ್ನಾಟಕ ಭೂಕಂದಾಯ ಅಧಿನಿಯಮ ಜಾರಿಯಾಗಿ ಭೂಕಂದಾಯ ಸಲ್ಲಿಕೆಯಲ್ಲಿ ಏಕರೂಪತೆ ಕಂಡು ಬಂದಿದೆ. ಹಳೆಯ ಮೈಸೂರು ಸಂಸ್ಥಾನದಲ್ಲಿ ಫೆಬ್ರವರಿ, ಮಾರ್ಚ್, ಏಪ್ರಿಲ್ ಹಾಗೂ ಮೇ ತಿಂಗಳುಗಳಲ್ಲಿ ನಾಲ್ಕು ಕಂತುಗಳಲ್ಲಿ ಭೂ ಕಂದಾಯ ಸಲ್ಲಿಸುವ ಅವಕಾಶವಿದ್ದಿತು. ಪ್ರಸ್ತುತ ಕಂದಾಯ ಹಾಗೂ ಇತರೆ ಬಾಕಿಗಳ ವಸೂಲಿ ಜನವರಿ ಒಂದರಿಂದ ಆರಂಭವಾಗಿ ಜೂನ್ ೩೦ಕ್ಕೆ ಮುಗಿಯುತ್ತದೆ. ಈ ಅವಧಿಯನ್ನು 'ಕಿಸ್ತು' ಅಥವಾ ವಸೂಲಿ ಸಮಯವೆನ್ನುತ್ತಾರೆ. ಭೂಕಂದಾಯವನ್ನೂ ನಾಲ್ಕು ಸಮನಾದ ಕಂತುಗಳಲ್ಲಿ ಪ್ರತೀ ವರ್ಷ ಜನವರಿ, ಫೆಬ್ರವರಿ, ಮಾರ್ಚಿ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ೨೦ನೇ ತಾರೀಖಿನ ಒಳಗೆ ಪಾವತಿಸಬೇಕಾಗುವುದು. ಐದು ರೂಪಾಯಿಗಿಂತ ಕಡಿಮೆ ಕಂದಾಯವಿದ್ದಲ್ಲಿ ಜನವರಿ ಇಪ್ಪತ್ತರ ಮೊದಲೇ ಎಲ್ಲಾ ಮೊತ್ತವನ್ನು ಕೊಡತಕ್ಕದ್ದು. ಕಂದಾಯ ವರ್ಷದ ಮೊದಲನೇ ದಿನ ಅಂದರೆ ಜುಲೈ ಒಂದನೇ ತೇದಿ ಮತ್ತು ಮೇಲ್ಕಾಣಿಸಿದ ಕಂದಾಯ ಸಲ್ಲಿಸುವ ತಾರೀಖುಗಳ ನಡುವಣ ಅವಧಿಯನ್ನು ರಿಯಾಯಿತಿ ಅವಧಿ ಎಂದು ಪರಿಗಣಿಸಲಾಗುವುದು.

ಹುಜೂರ್ ಜಮಾಬಂದಿಯಲ್ಲಿ ಜಿಲ್ಲಾಧಿಕಾರಿ ಅಥವಾ ಜಮಾಬಂದಿ ಅಧಿಕಾರಿ ದೃಢೀಕರಿಸಿದ ಲೆಕ್ಕಪತ್ರಗಳು, ಕಂದಾಯ ಮೊತ್ತ, ಅಸ್ತಿತ್ವ ಹಾಗೂ ಬಾಕಿದಾರನ ವಿವರಗಳ ರುಜುವಾತು ಎನಿಸುತ್ತವೆ. ಬಾಕಿ ವಸೂಲಿ ಕ್ರಮ ಜಮಾಬಂದಿ ನೋಟೀಸು ಜಾರಿಯಾಗುವ ಹಂತದಿಂದ ಪ್ರಾರಂಭವಾಗುತ್ತದೆ. ಕಂದಾಯ ಬಾಕಿ ವಿವರಗಳ ಪ್ರಕಟಣೆಯನ್ನು ಗ್ರಾಮ ಚಾವಡಿಯಲ್ಲಿ ಅಂಟಿಸಲಾಗುವುದು. ಇದರ ಪ್ರತಿಯನ್ನು ಬಾಕಿದಾರನಿಗೆ ನೀಡಿ ಸ್ವೀಕೃತಿ ಪತ್ರ ಪಡೆಯಲಾಗುವುದು. ಬಾಕಿ ಕಂದಾಯ ತಿಳುವಳಿಕೆ ಪತ್ರದ ಪ್ರಕ್ರಿಯಾ ಶುಲ್ಕ (ಪ್ರೊಸೆಸಿಂಗ್ ಫೀ) ವಾಗಿ ಬಾಕೀದಾರನಿಂದ ಒಂದು ರೂಪಾಯಿ ಶುಲ್ಕ ವಸೂಲಿ ಮಾಡಲಾಗುವುದು. ತಿಳುವಳಿಕೆ ಪತ್ರ ತಲುಪಿದ ಒಂದು ವಾರದೊಳಗೆ ಬಾಕಿ ವಸೂಲಾಗದಿದ್ದಲ್ಲಿ ಗ್ರಾಮಲೆಕ್ಕಿಗನು ತಹಶೀಲ್ದಾರನಿಗೆ ವರದಿ ಮಾಡಿ, ಆತನ ಆದೇಶದಂತೆ ಕರ್ನಾಟಕ ಭೂಕಂದಾಯ ನಿಯಮ ೧೯೬೬ ರಂತೆ ಬಾಕಿದಾರನ ಚರ ಆಸ್ತಿಯನ್ನು ಜಫ್ತಿ ಮಾಡಬೇಕು. ಕಂದಾಯ ಸಮೀಕ್ಷಾಧಿಕಾರಿ ಇದರ ಬಗ್ಗೆ ಸಾಕಷ್ಟು ಪ್ರಚಾರ ನೀಡಿದ ನಂತರ ಬಾಕಿದಾರನ ಚರಾಸ್ತಿಯನ್ನು ಮಾರಾಟ ಮಾಡಿ, ಸರ್ಕಾರಕ್ಕೆ ಬರಬೇಕಾದ ಪೂರ್ಣ ಮೊತ್ತವನ್ನು ಕಚೇರಿಯಲ್ಲಿ ಕೂಡಲೇ ಜಮಾ ಮಾಡಲಾಗುವುದು.

**ಕೋಷ್ಟಕ ೯.೨ ಮಂಡ್ಯ ಜಿಲ್ಲೆಯ ಭೂಕಂದಾಯ ಮತ್ತು ನೀರು ತೆರಿಗೆ ಡಿಸಿಬಿ ವಿವರಗಳು (೧೯೮೭-೮೮ ರಿಂದ ೨೦೦೧-೦೨ರವರೆಗೆ)**

| ವರ್ಷ | ಭೂ ಕಂದಾಯ (ರೂ.ಗಳಲ್ಲಿ) | | | ನೀರಿನ ತೆರಿಗೆ (ರೂ.ಗಳಲ್ಲಿ) | | |
|---|---|---|---|---|---|---|
| | ಬೇಡಿಕೆ | ವಸೂಲಿ | ಬಾಕಿ | ಬೇಡಿಕೆ | ವಸೂಲಿ | ಬಾಕಿ |
| ೧ | ೨ | ೩ | ೪ | ೫ | ೬ | ೭ |
| ೧೯೮೭-೮೮ | ೧೮,೧೭,೪೬೧ | ೧೩,೧೨,೬೨೩ | ೫,೦೪,೮೩೮ | ೧,೦೩,೦೪,೫೪೪ | ೬೬,೦೪,೮೯೪ | ೩೬,೯೯,೬೫೦ |
| ೧೯೮೮-೮೯ | ೨೪,೪೬,೩೪೫ | ೧೧,೯೨,೭೭೨ | ೧೨,೫೩,೫೭೩ | ೨,೯೬,೪೫,೭೦೧ | ೧,೦೯,೬೩,೮೬೦ | ೧,೮೬,೮೧,೮೪೧ |
| ೧೯೮೯-೯೦ | ೩೦,೩೨,೨೩೮ | ೨೧,೭೩,೦೯೧ | ೮,೫೯,೧೪೭ | ೩,೦೦,೭೫,೦೬೬ | ೧,೦೦,೭೫,೭೨೫ | ೧,೯೯,೯೯,೩೪೧ |
| ೧೯೯೦-೯೧ | ೩೧,೩೪,೧೨೩ | ೨೩,೨೯,೦೩೩ | ೮,೦೫,೦೯೦ | ೩೩,೫೮,೩೨೬ | ೫೫,೫೧,೪೬೨ | ೨,೮೦,೩೩,೮೬೪ |
| ೧೯೯೧-೯೨ | ೩೧,೬೭,೮೩೨ | ೨೩,೮೫,೧೯೯ | ೭,೮೨,೬೩೩ | ೨,೪೫,೮೭,೩೩೬ | ೧,೭೧,೦೨,೨೮೯ | ೭೪,೮೫,೦೪೭ |
| ೧ | ೨ | ೩ | ೪ | ೫ | ೬ | ೭ |
| ೧೯೯೨-೯೩ | ೨೯,೮೯,೯೨೯ | ೨೪,೭೮,೧೨೯ | ೫,೧೧,೮೦೦ | ೨,೨೬,೧೨,೬೧೯ | ೧,೬೯,೨೨,೯೬೦ | ೫೬,೮೯,೬೫೯ |

| | | | | | | |
|---|---|---|---|---|---|---|
| ೧೯೯೩–೯೪ | ೪೦,೭೬,೮೩೦ | ೨೪,೮೨,೪೯೭ | ೧೫,೩೮,೯೮೨ | ೩,೨೮,೫೭,೭೬೩ | ೧,೬೬,೬೨,೭೧೬ | ೧,೬೧,೯೫,೦೪೭ |
| ೧೯೯೪–೯೫ | ೩೯,೮೯,೦೯೯ | ೨೪,೪೯,೧೧೭ | ೧೫,೩೮,೯೮೨ | ೩,೬೪,೨೫,೬೨೪ | ೧,೬೪,೮೮,೨೯೫ | ೧,೯೯,೩೭,೩೨೯ |
| ೧೯೯೫–೯೬ | ೪೫,೨೨,೦೯೧ | ೩೮,೧೨,೫೫೨ | ೭,೦೯,೫೩೯ | ೪,೧೪,೧೬,೬೭೫ | ೨,೩೧,೫೬,೩೧೪ | ೧,೮೨,೬೦,೩೬೧ |
| ೧೯೯೬–೯೭ | ೪೮,೭೪,೯೪೧ | ೩೪,೬೫,೮೦೫ | ೧೪,೦೯,೧೩೬ | ೩,೩೮,೨೬,೨೨೧ | ೧,೯೬,೭೪,೬೪೧ | ೧,೪೧,೫೧,೫೮೦ |
| ೧೯೯೭–೯೮ | ೩೧,೫೮,೮೯೫ | ೨೬,೯೧,೨೭೩ | ೪,೬೭,೬೨೨ | ೨,೭೦,೯೪,೪೧೨ | ೧,೫೯,೪೫,೪೮೬ | ೧,೧೧,೪೮,೯೨೬ |
| ೧೯೯೮–೯೯ | ೪೦,೦೨,೧೫೫ | ೨೯,೮೫,೦೨೫ | ೧೦,೧೭,೧೩೦ | ೩,೮೬,೦೭,೫೪೦ | ೨,೨೦,೧೭,೨೯೭ | ೧,೬೫,೯೦,೨೪೩ |
| ೧೯೯೯–೨೦೦೦ | ೪೭,೭೩,೦೨೮ | ೨೬,೦೮,೯೦೫ | ೧೮,೨೫,೮೩೬ | ೨,೪೫,೪೯,೨೩೬ | ೧,೫೮,೯೮,೮೪೬ | ೮೬,೫೦,೩೮೯ |
| ೨೦೦೦–೦೧ | ೪೯,೯೮,೪೮೭ | ೩೨,೩೮,೮೨೫ | ೧೭,೫೯,೬೬೨ | ೪,೧೨,೬೦,೯೪೪ | ೨,೯೩,೯೯,೨೯೯ | ೧,೧೮,೬೧,೬೪೫ |
| ೨೦೦೧–೦೨ | ೫೨,೮೫,೭೫೭ | ೪೦,೧೭,೭೨೪ | ೧೨,೬೮,೦೩೩ | ೩,೬೨,೬೩,೬೫೪ | ೨,೨೩,೫೧,೫೦೨ | ೧,೩೯,೧೨,೧೫೨ |

**ಕೋಷ್ಟಕ ೯.೩ ಮಂಡ್ಯ ಜಿಲ್ಲೆಯ ೨೦೦೦–೨೦೦೧ ಮತ್ತು ೨೦೦೧–೦೨ ನೇ ಸಾಲಿನ ತಾಲೂಕುವಾರು ಭೂಕಂದಾಯ ಮತ್ತು ಕರಗಳ ಡಿಸಿಬಿ ವಿವರ**

| ತಾಲೂಕು ಹೆಸರು | ೨೦೦೦–೦೧ | | | ೨೦೦೧–೦೨ | | |
|---|---|---|---|---|---|---|
| | ಬೇಡಿಕೆ | ವಸೂಲಿ | ಬಾಕಿ | ಬೇಡಿಕೆ | ವಸೂಲಿ | ಬಾಕಿ |
| ಮಂಡ್ಯ | ೬,೦೫,೧೨೧ | ೬,೦೫,೧೨೧ | ೦ | ೬,೬೩,೬೧೦ | ೬,೬೩,೬೧೦ | ೦ |
| ಮದ್ದೂರು | ೬,೩೮,೯೧೬ | ೪,೬೮,೬೪೩ | ೧,೭೦,೨೭೩ | ೬,೨೮,೭೨೪ | ೫,೬೦,೯೧೩ | ೬೭,೮೧೧ |
| ಮಳವಳ್ಳಿ | ೬,೬೩,೪೯೬ | ೬,೨೩,೯೬೨ | ೩೯,೫೩೪ | ೮,೧೫,೨೬೫ | ೮,೧೫,೨೬೫ | ೦ |
| ಪಾಂಡವಪುರ | ೩,೧೩,೫೪೧ | ೨,೬೦,೭೧೭ | ೫೨,೮೨೪ | ೩,೯೦,೧೫೮ | ೩,೦೩,೫೬೮ | ೮೬,೫೬೦ |
| ಶ್ರೀರಂಗಪಟ್ಟಣ | ೩,೨೧,೮೪೩ | ೧,೬೦,೬೮೦ | ೧,೬೧,೧೬೩ | ೩,೧೨,೯೭೧ | ೨,,೯೮,೧೩೮ | ೧೪,೮೩೩ |
| ಕೃಷ್ಣರಾಜಪೇಟೆ | ೧೬,೬೫,೪೯೪ | ೫,೨೭,೦೯೫ | ೧೧,೩೮,೩೯೯ | ೧೬,೨೦,೫೯೦ | ೭,೩೪,೧೫೪ | ೮,೮೬,೪೩೬ |
| ನಾಗಮಂಗಲ | ೭,೯೦,೦೭೬ | ೫,೯೨,೬೦೭ | ೧,೯೭,೨೬೯ | ೮,೫೪,೪೬೯ | ೬,೪೨,೦೭೬ | ೩೧,೩೯೩ |

**ಕೋಷ್ಟಕ ೯.೪ ಮಂಡ್ಯ ಜಿಲ್ಲೆಯ ೨೦೦೦–೨೦೦೧ ಮತ್ತು ೨೦೦೧–೦೨ ನೇ ಸಾಲಿನ ತಾಲೂಕುವಾರು ನೀರು ತೆರಿಗೆ ಮತ್ತು ನಿರ್ವಹಣಾ ಕರಗಳ ಡಿಸಿಬಿ ವಿವರ**

| ತಾಲೂಕು ಹೆಸರು | ೨೦೦೦–೦೧ | | | ೨೦೦೧–೦೨ | | |
|---|---|---|---|---|---|---|
| | ಬೇಡಿಕೆ | ವಸೂಲಿ | ಬಾಕಿ | ಬೇಡಿಕೆ | ವಸೂಲಿ | ಬಾಕಿ |
| ೧ | ೨ | ೩ | ೪ | ೫ | ೬ | ೭ |
| ಮಂಡ್ಯ | ೧,೫೫,೯೪,೩೬೮ | ೫೬,೨೧,೩೬೦ | ೯೯,೭೩,೦೦೮ | ೯೯,೮೪,೯೭೮ | ೭೨,೭೫,೮೮೦ | ೨೭,೦೯,೦೯೮ |
| ಮದ್ದೂರು | ೪೧,೫೮,೫೪೬ | ೪೧,೩೫,೭೪೮ | ೨,೨೨,೭೯೮ | ೯೩,೧೬,೬೩೬ | ೬೩,೯೨,೪೦೬ | ೨,೯೪,೨೩೦ |
| ಮಳವಳ್ಳಿ | ೪೩,೧೦,೪೨೦ | ೩೮,೯೮,೩೮೬ | ೪,೧೨,೦೩೪ | ೬೩,೨೯,೬೪೯ | ೩೪,೨೩,೬೬೨ | ೨೯,೦೫,೯೮೭ |
| ೧ | ೨ | ೩ | ೪ | ೫ | ೬ | ೭ |
| ಪಾಂಡವಪುರ | ೨೫,೨೬,೮೪೩ | ೧೧,೫೯,೭೯೪ | ೧೩,೭೭,೦೪೯ | ೬೩,೯೮,೧೭೫ | ೧೧,೬೦,೭೫೦ | ೫೨,೩೭,೪೨೫ |

| | | | | | | |
|---|---|---|---|---|---|---|
| ಶ್ರೀರಂಗಪಟ್ಟಣ | ೧,೦೫,೧೮,೬೯೪ | ೧,೦೫,೧೮,೬೯೪ | ೦ | ೧೫,೬೫,೭೦೭ | ೧೫,೬೫,೭೦೭ | ೦ |
| ಕೃಷ್ಣರಾಜಪೇಟೆ | ೩೫,೧೧,೬೦೮ | ೩೫,೧೧,೬೦೮ | ೦ | ೧,೫೬,೫೭,೦೭೧ | ೧೫,೬೫,೭೦೭ | ೦ |
| ನಾಗಮಂಗಲ | ೬,೩೦,೪೬೫ | ೫,೫೩,೭೦೯ | ೭೬,೭೫೬ | ೪,೯೬,೫೫೧ | ೩,೬೧,೧೩೯ | ೧,೩೫,೪೧೨ |

## ಕೋಷ್ಟಕ ೯.೫ ಮಂಡ್ಯ ಜಿಲ್ಲೆಯ ೨೦೦೦-೨೦೦೧ ಮತ್ತು ೨೦೦೧-೦೨ ನೇ ಸಾಲಿನ ತಾಲೂಕುವಾರು ನೀರು ದಂಡ ಕರ ಡಿಸಿಬಿ ವಿವರ

| ತಾಲೂಕು ಹೆಸರು | ೨೦೦೦-೦೧ | | | ೨೦೦೧-೦೨ | | |
|---|---|---|---|---|---|---|
| | ಬೇಡಿಕೆ | ವಸೂಲಿ | ಬಾಕಿ | ಬೇಡಿಕೆ | ವಸೂಲಿ | ಬಾಕಿ |
| ೧ | ೨ | ೩ | ೪ | ೫ | ೬ | ೭ |
| ಮಂಡ್ಯ | ೩,೭೬,೦೯,೧೪೯ | ೦ | ೩,೭೬,೦೯,೧೪೯ | ೩,೭೬,೦೯,೧೪೯ | ೦ | ೩,೭೬,೦೯,೧೪೯ |
| ಮದ್ದೂರು | ೫೭,೬೬,೦೩೦ | ೦ | ೫೭,೬೬,೦೩೦ | ೮೪,೫೮,೩೧೦ | ೦ | ೮೪,೫೮,೩೧೦ |
| ಮಳವಳ್ಳಿ | ೨೦,೧೫,೭೨೧ | ೦ | ೨೦೧೫೭೨೧ | ೩೭,೨೧,೭೬೧ | ೮೨೮ | ೩೭,೨೦,೯೩೩ |
| ಪಾಂಡವಪುರ | ೨,೪೨,೫೪,೮೯೫ | ೦ | ೨೪೨೫೪೮೯೫ | ೨,೫೧,೩೩,೯೩೫ | ೦ | ೨,೫೧,೩೩,೯೩೫ |
| ಶ್ರೀರಂಗಪಟ್ಟಣ | ೩,೮೮,೪೩,೧೮೮ | ೦ | ೩೮೮೪೩೧೮೮ | ೩,೮೮,೪೩,೧೮೮ | ೦ | ೩,೮೮,೪೩,೧೮೮ |
| ಕೃಷ್ಣರಾಜಪೇಟೆ | ೧,೦೪,೭೫,೦೮೬ | ೦ | ೧೦೪೭೫೦೮೬ | ೧,೪೨,೮೯,೯೧೪ | ೦ | ೧,೪೨,೮೯,೯೧೪ |
| ನಾಗಮಂಗಲ | ೦ | ೦ | ೦ | ೦ | ೦ | ೦ |

## ಕೋಷ್ಟಕ ೯.೬ ಮಂಡ್ಯ ಜಿಲ್ಲೆಯ ೨೦೦೦-೨೦೦೧ ಮತ್ತು ೨೦೦೧-೦೨ ನೇ ಸಾಲಿನ ತಾಲೂಕುವಾರು ಸಾಲಗಳಿಗೆ ಸಂಬಂಧಿಸಿದ ಡಿಸಿಬಿ ವಿವರ

| ತಾಲೂಕು ಹೆಸರು | ೨೦೦೦-೦೧ | | | ೨೦೦೧-೦೨ | | |
|---|---|---|---|---|---|---|
| | ಬೇಡಿಕೆ | ವಸೂಲಿ | ಬಾಕಿ | ಬೇಡಿಕೆ | ವಸೂಲಿ | ಬಾಕಿ |
| ೧ | ೨ | ೩ | ೪ | ೫ | ೬ | ೭ |
| ಮಂಡ್ಯ | ೭,೯೬,೧೭೨ | ೦ | ೭,೯೬,೧೭೨ | ೭,೯೬,೧೭೨ | ೦ | ೭,೯೬,೧೭೨ |
| ಮದ್ದೂರು | ೧೯,೩೦೪ | ೦ | ೧೯,೩೦೪ | ೧೯,೩೦೪ | ೦ | ೧೯,೩೦೪ |
| ಮಳವಳ್ಳಿ | ೨೦,೭೪೫ | ೦ | ೨೦,೭೪೫ | ೨೦,೭೪೫ | ೦ | ೨೦,೭೪೫ |
| ಪಾಂಡವಪುರ | ೦ | ೦ | ೦ | ೦ | ೦ | ೦ |
| ಶ್ರೀರಂಗಪಟ್ಟಣ | ೦ | ೦ | ೦ | ೦ | ೦ | ೦ |
| ಕೃಷ್ಣರಾಜಪೇಟೆ | ೦ | ೦ | ೦ | ೦ | ೦ | ೦ |
| ನಾಗಮಂಗಲ | ೧೯,೩೦೪ | ೦ | ೧೯,೩೦೪ | ೧೯,೩೦೪ | ೦ | ೧೯,೩೦೪ |

## ಕೋಷ್ಟಕ ೯.೭ ಮಂಡ್ಯ ಜಿಲ್ಲೆಯ ೨೦೦೦-೨೦೦೧ ಮತ್ತು ೨೦೦೧-೦೨ ನೇ ಸಾಲಿನ ತಾಲೂಕುವಾರು ಇತರೇ ಸರ್ಕಾರಿ ಬಾಕಿಗಳ ಡಿಸಿಬಿ ವಿವರ

| ತಾಲೂಕು ಹೆಸರು | ೨೦೦೦–೦೧ | | | ೨೦೦೧–೦೨ | | |
|---|---|---|---|---|---|---|
| | ಬೇಡಿಕೆ | ವಸೂಲಿ | ಬಾಕಿ | ಬೇಡಿಕೆ | ವಸೂಲಿ | ಬಾಕಿ |
| ೧ | ೨ | ೩ | ೪ | ೫ | ೬ | ೭ |
| ಮಂಡ್ಯ | ೬೩,೮೨,೧೦೬ | ೧೯,೧೩,೭೩೦ | ೪೪,೬೮,೩೭೫ | ೫೪,೪೬,೦೧೯ | ೨೧,೭೨,೧೬೧ | ೩೨,೭೩,೮೫೮ |
| ಮದ್ದೂರು | ೮೬,೦೧,೨೫೫ | ೩,೯೮,೬೮೭ | ೮೨,೦೨,೫೬೮ | ೯೧,೭೨,೦೩೦ | ೯,೬೬,೨೫೬ | ೮೨,೦೫,೭೭೪ |
| ಮಳವಳ್ಳಿ | ೯,೮೫,೯೧೬ | ೩,೧೧,೦೩೧ | ೬,೭೪,೮೮೫ | ೮,೯೯,೦೭೪ | ೩,೪೫,೩೯೬ | ೫,೫೩,೬೭೮ |
| ಪಾಂಡವಪುರ | ೧೦,೬೫,೮೧೧ | ೩೦,೬೨೫ | ೧೦,೩೫,೧೮೬ | ೧೦,೮೦,೩೫೮ | ೬೬,೦೦೮ | ೧೦,೧೪,೩೫೦ |
| ಶ್ರೀರಂಗಪಟ್ಟಣ | ೭,೨೬,೭೭೮ | ೪,೨೪,೦೦೨ | ೩,೦೨,೭೭೬ | ೩,೩೦,೪೭೬ | ೧,೮೮,೬೨೩ | ೧,೪೧,೮೫೩ |
| ಕೃಷ್ಣರಾಜಪೇಟೆ | ೧೧,೪೨,೨೪೬ | ೩,೦೦,೬೩೪ | ೮,೪೧,೬೧೨ | ೧೦,೦೧,೧೩೨ | ೨,೦೬,೩೫೦ | ೭,೯೪,೭೮೨ |
| ನಾಗಮಂಗಲ | ೬,೦೮,೨೭೪ | ೪,೩೭,೬೮೦ | ೧,೭೦,೫೯೪ | ೪,೬೬,೯೦೬ | ೩,೩೬,೮೪೯ | ೧,೩೦,೦೫೭ |

**ಮಾಫಿಗಳು**

ಭೂಕಂದಾಯ ವ್ಯವಸ್ಥೆ ಪ್ರಾರಂಭವಾಗುವ ಮೊದಲು ರೈತರ ಮನವಿಯಂತೆ ಅಸಾಧಾರಣ ಪರಿಸ್ಥಿತಿಗಳಲ್ಲಿ ಕಂದಾಯ ಮಾಫಿ ಮಾಡಲಾಗುತ್ತಿತ್ತಾದರೂ ಇದಕ್ಕೆ ಖಚಿತ ನಿಯಮಗಳಿರಲಿಲ್ಲ. ಭೂಕಂದಾಯ ವ್ಯವಸ್ಥೆ ಪ್ರಾರಂಭವಾದ ನಂತರವೂ ಬೆಳೆಗಳು ನಷ್ಟವಾಗಿ ಕಡಿಮೆ ಇಳುವರಿ ಬಂದಾಗ ಕಂದಾಯ ಮಾಫಿ ಅಗತ್ಯವೆಂದು ಪರಿಗಣಿಸಲಾಗಿತ್ತು. ೧೯೦೭ ರಲ್ಲಿ ಸರಕಾರವು ಭೂಕಂದಾಯ ಮಾಫಿ ಹಾಗೂ ಸ್ಥಗಿತಗಳನ್ನು ಕುರಿತ ಆದೇಶಗಳನ್ನು ಹೊರಡಿಸಿತು. ಅದರಂತೆ ಕಂದಾಯ ಸ್ಥಗಿತಗೊಂಡ ವರ್ಷದಿಂದ ಮುಂದಿನ ಮೂರು ವರ್ಷಗಳ ಸುಗ್ಗಿಯನ್ನು ಅವಲಂಬಿಸಿ ಕಂದಾಯ ಮಾಫಿ ಮಾಡಲಾಯಿತು. ಎರಡು ವರ್ಷಗಳಿಗಿಂತ ಹೆಚ್ಚು ಅವಧಿಗೆ ಸ್ಥಗಿತಗೊಂಡ ಕಂದಾಯದಲ್ಲಿ ಮಾಫಿ ಆದೇಶವನ್ನು ನೀಡುವ ಅಧಿಕಾರ ಜಿಲ್ಲಾಧಿಕಾರಿಗಿದ್ದಿತು.

೧೯೨೨ ಕ್ಕೆ ಮೊದಲು ಹಳೆಯ ಮೈಸೂರು ಭಾಗದಲ್ಲಿ ಮಾಫಿಗಾಗಿ ನಿಶ್ಚಿತ ನಿಯಮಗಳಿರಲಿಲ್ಲ. ೧೯೦೮ ರಲ್ಲಿ ಪರಿಹಾರ ನೀಡಬೇಕಾದ ಪರಿಸ್ಥಿತಿ ಉಂಟಾದಾಗ ಸರ್ಕಾರ ವಿಶೇಷ ಆದೇಶಗಳನ್ನು ಹೊರಡಿಸಿತು. ೧೯೨೨ರಲ್ಲಿ ಪ್ರಥಮ ಬಾರಿಗೆ ಮಾಫಿ ಮಂಜೂರಾತಿ ನಿಯಮಗಳನ್ನು ಹೊರಡಿಸಲಾಯಿತು. ಇವು ನೀರಾವರಿ ಭೂಮಿಗೆ ಮಾತ್ರ ಅನ್ವಯಿಸಿದ್ದವು. ಮರುವರ್ಷ ಬೆಳೆಗಳು ಚೆನ್ನಾಗಿದ್ದು ಇಳುವರಿ ಹೆಚ್ಚು ಬಂದಾಗ ಸ್ಥಗಿತವಾಗಿದ್ದ ಕಂದಾಯ ವಸೂಲಿಯಾಗುತ್ತಿತ್ತು. ಆದರೆ ಆ ವರ್ಷವೂ ಬೆಳೆಗಳು ಕೆಟ್ಟರೆ ಕಂದಾಯ ಮಾಫಿಯಾಗುತ್ತಿತ್ತು ಮಾಫಿ ನಿಯಮಗಳು ಕಾಲಕಾಲಕ್ಕೆ ಪರಿಷ್ಕೃತವಾಗುತ್ತಿತ್ತು. ಪ್ರಸ್ತುತದ ಪರಿಷ್ಕರಣವನ್ನು ೧೯೬೬ರಲ್ಲಿ ಕರ್ನಾಟಕ ಭೂ ಕಂದಾಯ ನಿಯಮಗಳು ೧೯೬೪ರ ಪ್ರಕಾರ ಮಾಡಲಾಗಿದೆ.

**ಕಂದಾಯ ಮಾಫಿ ನಿಯಮಗಳು**

ಮೇಲ್ಕಂಡ ಪರಿಷ್ಕರಣದಂತೆ, ಮಳೆಯ ಕೊರತೆ, ಬೆಳೆಗಳಿಗೆ ಬಡಿದ ರೋಗಗಳು ಅಥವಾ ಇನ್ನಾವುದೇ ಕಾರಣಗಳಿಂದ ಬೆಳೆಗಳು ಭಾಗಶಃ ಅಥವಾ ಸಂಪೂರ್ಣವಾಗಿ ಯಾವುದೇ ಪ್ರದೇಶದಲ್ಲಿ ನಾಶಗೊಂಡಲ್ಲಿ ಇದನ್ನು ಜಿಲ್ಲಾಧಿಕಾರಿಯು ಖಚಿತಪಡಿಸಿಕೊಂಡು, ಇಂಥ ಪ್ರದೇಶದ ಪ್ರತೀ ಎಕರೆಯ ಫಸಲುವಾರಿ ಸರಾಸರಿ ಇಳುವರಿ ಗೊತ್ತುಪಡಿಸಲು ಆ ಪ್ರದೇಶದ ಎಲ್ಲಾ ಭಾಗಗಳಲ್ಲಿ ಬೆಳೆ ಕೊಯ್ಲಿನ ಪ್ರಾತ್ಯಕ್ಷಿಕೆ ಪ್ರಯೋಗಗಳನ್ನು ಏರ್ಪಡಿಸುತ್ತಾರೆ. ಸದರಿ ಪ್ರದೇಶದ ಶೇಕಡಾ ಐದು ಗ್ರಾಮಗಳಲ್ಲಿ ತಾಲೂಕು ತಹಶೀಲ್ದಾರರು ಇಂಥ ಪ್ರಾತ್ಯಕ್ಷಿಕೆಗಳನ್ನು ನಡೆಸುತ್ತಾರೆ.

ಸರಾಸರಿ ಫಸಲು ಇಳುವರಿ ಶೇಕಡಾ ೩೫ ಕ್ಕಿಂತ ಕಡಿಮೆ ಇದ್ದರೆ ಭೂಕಂದಾಯ ವಸೂಲಿ ಪೂರ್ಣ ಸ್ಥಗಿತಗೊಳಿಸಲಾಗುವುದು: ಶೇ.೩೫ ರಿಂದ ೫೦ ಇದ್ದರೆ ಅರ್ಧ ಸ್ಥಗಿತಗೊಳಿಸಲಾಗುವುದು. ಶೇಕಡಾ ೫೦ ಕ್ಕೆ ಸ್ಥಗಿತಗೊಳಿಸಲಾಗುವುದಿಲ್ಲ.

ವಸೂಲಿ ಸ್ಥಗಿತಗೊಂಡ ಕಂದಾಯವನ್ನು ಮುಂದೆ ಹೇಳಿರುವಂತೆ ವರ್ಷದಲ್ಲಿ ಕೊಡಬೇಕಾಗುವ ಕಂದಾಯದ ಜತೆಗೆ ವಸೂಲಿ ಮಾಡಲಾಗುವುದು. ೧. ವಸೂಲಿ ವರ್ಷದ ಫಸಲಿನ ಸರಾಸರಿ ಇಳುವರಿ ಶೇಕಡಾ ೭೫ ರಷ್ಟಿದ್ದರೆ ಒಂದು ವರ್ಷಕ್ಕೆ ಸಮನಾದ ಕಂದಾಯದ ಮೊತ್ತ; ೨.ಸರಾಸರಿ ಇಳುವರಿ ಶೇ.೬೨ ಕ್ಕಿಂತ ಕಡಿಮೆ ಇರದಿದ್ದಲ್ಲಿ ಒಂದು ವರ್ಷದ ಕಂದಾಯದ ಶೇ.೬೨ರಷ್ಟು ಮೊತ್ತ ೩.ಶೇಕಡಾ ೬೨ ಕ್ಕಿಂತ ಕಡಿಮೆ ಸರಾಸರಿ ಇಳುವರಿ ಇದ್ದಲ್ಲಿ ಕಂದಾಯ ವಸೂಲಿ ಮಾಡಲಾಗುವುದಿಲ್ಲ.

### ಭೂಕ್ರೋಢೀಕರಣ ಮತ್ತು ವಿಭಜನೆ

ಬೇಸಾಯವನ್ನು ಒಂದು ಲಾಭದಾಯಕ ಉದ್ಯಮವನ್ನಾಗಿಸಲು ಹಿಡುವಳಿಗಳ ವಿಭಜನೆ (ಸಬ್ ಡಿವಿಷನ್) ಮತ್ತು ಜಮೀನು ತುಂಡರಿಸುವುದು (ಫ್ರಾಗ್‌ಮೆಂಟೇಷನ್‌ಗಳನ್ನು) ತಪ್ಪಿಸುವುದು ಮುಖ್ಯವಾದುದೆಂದು ಹಿಂದೆಯೇ ಕಂಡುಕೊಳ್ಳಲಾಗಿದ್ದಿತು. ರಾಜ್ಯದ ಭೂಹಿಡುವಳಿಗಳ ವಿಭಜನೆ ಹಾಗೂ ತುಂಡರಿಕೆಗಳನ್ನು ಪರಿಶೀಲಿಸಲು ಮೈಸೂರು ಸರಕಾರ ೧೯೩೧ ರಲ್ಲಿ ರಚಿಸಿದ ಸಮಿತಿಯು ಮೈಸೂರಿನಲ್ಲಿ ಬೇಸಾಯ ಲಭ್ಯ ಹಿಡುವಳಿಯ ಸರಾಸರಿ ಪ್ರಮಾಣ ೮.೧ ಎಕರೆ ಎಂದು ವರದಿ ನೀಡಿತು. ೧೯೬೮ರ ಕರ್ನಾಟಕ ಹಿಡುವಳಿ ವಿಭಜನೆ ನಿಯಂತ್ರಣ ಮತ್ತು ಕ್ರೋಢೀಕರಣ ಶಾಸನದ ಮೂಲಕ ಕರ್ನಾಟಕದಾದ್ಯಂತ ಹಿಡುವಳಿಗಳ ಕ್ರೋಢೀಕರಣಕ್ಕಾಗಿ ಹಾಗೂ ಜಮೀನು ತುಂಡರಿಸುವುದನ್ನು ತಡೆಯಲು ಏಕರೂಪದ ಕ್ರಮ ಪ್ರಾರಂಭಿಸಲಾಯಿತು. ಭೂವರ್ಗೀಕರಣದ ಪ್ರಕಾರ ಪ್ರಮಾಣಿತ ಕನಿಷ್ಠ ವಿಸ್ತೀರ್ಣದ ಕ್ಷೇತ್ರದ ಅರ್ಧ ಎಕರೆಯಿಂದ ನಾಲ್ಕು ಎಕರೆವರೆಗೆ ವ್ಯತ್ಯಾಸವಿರುತ್ತದೆ. ಇಂತಹ ತುಂಡನ್ನು ನೆರೆಯ ಹಿಡುವಳಿದಾರರ ಹೊರತು ಬೇರಾರಿಗೂ ಮಾರಾಟ ಮಾಡುವುದನ್ನು ಕಾನೂನು ನಿರ್ಬಂದಿಸಿದೆ. ಮೇಲ್ಕಂಡ ಶಾಸನದನ್ವಯ ಇದನ್ನು ಪುನ: ವಿಭಜಿಸಲು ಅಥವಾ ಪಾಲು ಮಾಡಲೂ ಆಗುವುದಿಲ್ಲ. ಇದೇ ಶಾಸನದನ್ವಯ ಅಲ್ಲಲ್ಲಿ ಹಂಚಿ ಹೋಗಿರುವ ಭೂಹಿಡುವಳಿಗಳನ್ನು ಒಟ್ಟುಗೂಡಿಸಲು ಹಾಗೂ ಸಂಬಂಧಪಟ್ಟ ಭೂಮಾಲೀಕರಿಗೆ ಪರಿಹಾರಧನ ನೀಡುವುದಕ್ಕೂ ಅವಕಾಶವಿದೆ. ಈ ಕ್ರೋಢೀಕರಣ ಯೋಜನೆಯಲ್ಲಿ ಹಿಡುವಳಿ ಪಡೆಯುವವರಿಗೆ, ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕವಿಲ್ಲದೆ ವರ್ಗಾವಣೆಯ ಪ್ರಮಾಣಪತ್ರ ನೀಡಲಾಗುವುದು.

**ಭೂಸುಧಾರಣೆ :** ಗೇಣಿದಾರಿ ಸಮಸ್ಯೆಗಳನ್ನು ಸಕಲ ರೂಪಗಳಲ್ಲಿಯೂ ಪರಿಶೀಲಿಸಿ ರಾಜ್ಯದಾದ್ಯಂತ ಏಕರೂಪದ ಪರಿಹಾರ ಕ್ರಮಗೊಳ್ಳಬೇಕೆಂಬ ಒತ್ತಾಯದ ಮೇರೆಗೆ ೧೯೫೭ರ ಮೇ ೧೧ರಂದು ಬಿ.ಡಿ.ಜತ್ತಿಯವರ ಅಧ್ಯಕ್ಷತೆಯಲ್ಲಿ ಮೈಸೂರು ಗೇಣಿದಾರಿ ಹಾಗೂ ಕೃಷಿ ಭೂಮಿ ಕಾನೂನು ಸಮಿತಿ' ಯನ್ನು ರಚಿಸಲಾಯಿತು. ಸಮಸ್ಯೆಗಳ ಸಮಗ್ರ ಪರಿಶೀಲನೆಯ ನಂತರ ಸಮಿತಿಯು ಅದೇ ವರ್ಷ ಸೆಪ್ಟೆಂಬರ್ ತಿಂಗಳಿನಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಇದನ್ನು ೧೯೫೮ರಲ್ಲಿ ವಿಧಾನಮಂಡಲದಲ್ಲಿ ಒಪ್ಪಲಾಯಿತು. ಎರಡೂ ಸದನಗಳ ೪೬ ಸದಸ್ಯರನ್ನೊಳಗೊಂಡ ಜಂಟಿ ಪ್ರವರ ಸಮಿತಿಯು (ಜಾಯಿಂಟ್ ಸೆಲೆಕ್ಟ್ ಕಮಿಟಿ) ಈ ವಿಧೇಯಕದ ಎಲ್ಲ ಕಲಮುಗಳನ್ನು ಪರಿಶೀಲಿಸಿ ೧೯೬೧ರ ಮಾರ್ಚ್ ೨೫ರಂದು ತನ್ನ ವರದಿ ಸಲ್ಲಿಸಿತು. ನವೆಂಬರ್ ೧೯೬೧ರಲ್ಲಿ ಸಣ್ಣ ಮಾರ್ಪಾಡುಗಳೊಂದಿಗೆ ವಿಧಾನಮಂಡಲದಲ್ಲಿ ಅಂಗೀಕೃತವಾದ ಈ ವಿಧೇಯಕಕ್ಕೆ ೧೯೬೨ರಲ್ಲಿ ರಾಷ್ಟ್ರಪತಿಯವರ ಸಮ್ಮತಿಯೂ ದೊರೆಯಿತು. ನಂತರ ಹಲವು ತಿದ್ದುಪಡಿಗಳಿಗೊಳಗಾದ ಈ ವಿಧೇಯಕವು ೧೯೬೫ರ ಅಕ್ಟೋಬರ್ ಎರಡರಂದು ರಾಜ್ಯದಾದ್ಯಂತ ಜಾರಿಯಾಯಿತು. ಈ ವಿಧೇಯಕದಲ್ಲಿ ಗೇಣಿದಾರಿ ಹಕ್ಕು, ಭೂಹಿಡುವಳಿಗಳ ಗರಿಷ್ಠ ಮಿತಿ ಹಾಗೂ ಇದರ

ಫಲಾಫಲಗಳನ್ನು ಕುರಿತಂತೆ ಸಮಗ್ರ ವಿವರಗಳನ್ನು ನೀಡಲಾಗಿದೆ. ಭೂಸುಧಾರಣಾ ಶಾಸನವನ್ನು ೧೯೬೬, ೧೯೬೭, ೧೯೬೮, ೧೯೭೦, ೧೯೭೨ ಹಾಗೂ ೧೯೭೪ರಲ್ಲಿ ಮತ್ತೆ ತಿದ್ದುಪಡಿ ಮಾಡಲಾಯಿತು.

ಅಂತಿಮ ತಿದ್ದುಪಡಿ ಶಾಸನದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರಲಾಯಿತು. ಅದರಂತೆ ಉಳುವವನಿಗೇ ಭೂಮಿ ಎಂಬ ಘೋಷಣೆ ೧೯೭೪ರ ಮಾರ್ಚ್ ಒಂದರಿಂದ ಕಾರ್ಯರೂಪಕ್ಕೆ ಬಂದಿತು. ಈ ಘೋಷಣೆಯು ಕೃಷಿ ಕೂಲಿಕಾರರು ಮತ್ತು ಭೂರಹಿತ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜನಾಂಗದವರು ಭೂಒಡೆಯರಾಗುವಂತೆ ಮಾಡಿದೆ. 'ಕುಟುಂಬ' ಎಂಬ ಪದಕ್ಕೆ ಪುನಃ ವ್ಯಾಖ್ಯೆ ನೀಡಿ, ಒಂದು ವ್ಯಕ್ತಿ. ಆ ವ್ಯಕ್ತಿಯ ಪತಿ ಅಥವಾ ಪತ್ನಿ, ಅವರ ಅಪ್ರಾಪ್ತ ವಯಸ್ಸಿನ ಗಂಡು ಮಕ್ಕಳು ಅಥವಾ ಮದುವೆಯಾಗದ ಹೆಣ್ಣುಮಕ್ಕಳು ಮಾತ್ರ ಕುಟುಂಬಕ್ಕೊಳಪಡುತ್ತಾರೆಂದು ಘೋಷಿಸಿ ಪ್ರತೀ ಕುಟುಂಬ ಹೊಂದಬಹುದಾದ ಜಮೀನಿನ ಗರಿಷ್ಠ ಮಿತಿಯನ್ನು ಕಡಿಮೆಗೊಳಿಸಿತು. ಕೃಷಿಯೇತರ ಮೂಲಗಳಿಂದ ವಾರ್ಷಿಕವಾಗಿ ರೂ.೧೨,೦೦೦ಕ್ಕಿಂತ ಹೆಚ್ಚಿನ ವರಮಾನ ಪಡೆಯುವವರು ನಿಶ್ಚಿತ ಕರಾರುಗಳ ಹೊರತಾಗಿ ಭವಿಷ್ಯದಲ್ಲಿ ಕೃಷಿ ಜಮೀನನ್ನು ಖರೀದಿಸುವುದನ್ನು ಈ ಶಾಸನ ನಿಷೇಧಿಸಿತು.

### ಗೇಣಿದಾರಿ ರದ್ಧತಿ

ಮೇಲ್ಕಂಡ ಸುಧಾರಣೆಯನ್ವಯ ಸೈನಿಕರು ಹಾಗೂ ನಾವಿಕರ ಹೊಲಗಳ ಹೊರತಾಗಿ, ಗೇಣಿದಾರಿ ಪದ್ಧತಿ ರದ್ದಾಗಿ ಭೂಮಾಲೀಕರ ಮತ್ತು ಗೇಣಿದಾರರ ಸಂಬಂಧ ಕೊನೆಗೊಂಡಿತು. ಈ ಕಾನೂನು ಕೇವಲ ಸ್ವಂತ ಉಳುಮೆ ಮಾಡುವವರು ಮಾತ್ರ ಭೂಮಿ ಹೊಂದುವ ಹಕ್ಕನ್ನು ನೀಡುತ್ತದೆ. ಮಾಲೀಕ ತನ್ನ ಸ್ವಂತ ದೈಹಿಕ ಶ್ರಮದಿಂದಾಗಲೀ, ತನ್ನ ಮನೆ ಮಂದಿಯ ದೈಹಿಕ ಶ್ರಮದಿಂದಾಗಲೀ ಉಳುಮೆ ಮಾಡುವುದನ್ನು ಸ್ವಂತ ಉಳುಮೆ ಎಂದು ವ್ಯಾಖ್ಯಾನಿಸಲಾಗಿದೆ. ಆದರೆ ತಮ್ಮ ಮೇಲ್ವಿಚಾರಣೆಯಲ್ಲಿ ಕೂಲಿಯಾಳುಗಳ ಸಹಾಯದಿಂದ ಉಳುಮೆ ಮಾಡಿಸಿ, ಅವರಿಗೆ ಹಣದ ರೂಪದಲ್ಲಿ ಕೂಲಿ ನೀಡಬಹುದೇ ಹೊರತು ಧಾನ್ಯದ ರೂಪದಲ್ಲಲ್ಲ. ಈ ಶಾಸನದ ವಿರುದ್ದ ಸಾಗುವಳಿ ಮಾಡಿಸಿದಲ್ಲಿ ಆ ಜಮೀನನ್ನು ಯಾವ ಪರಿಹಾರವನ್ನೂ ನೀಡದೆ ಸರ್ಕಾರ ವಹಿಸಿಕೊಳ್ಳುತ್ತದೆ.

### ಭೂ ನ್ಯಾಯಮಂಡಳಿ

ಕರ್ನಾಟಕ ಭೂಸುಧಾರಣಾ ಕಾಯ್ದೆ ೧೯೬೧ರ ೪೮ನೇ ವಿಧಿಯಂತೆ ಪ್ರತೀ ತಾಲೂಕಿಗೆ ಒಂದರಂತೆ ಭೂ ನ್ಯಾಯಮಂಡಳಿಗಳನ್ನು ರಚಿಸಲು ಅವಕಾಶವಿದ್ದಿತು. ಪ್ರತೀ ಮಂಡಳಿಯಲ್ಲಿ ನಾಲ್ಕು ಜನ ಸರ್ಕಾರೇತರ ಸದಸ್ಯರು ಸಂಬಂಧಪಟ್ಟ ಉಪವಿಭಾಗದ ಉಪವಿಭಾಗಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಕಾನೂನಿನಂತೆ ಸರ್ಕಾರೇತರ ಸದಸ್ಯರಲ್ಲಿ ಒಬ್ಬ ಪರಿಶಿಷ್ಟ ಜಾತಿ ಅಥವಾ ಪಂಗಡದ ಸದಸ್ಯರಿರುತ್ತಾರೆ. ಪ್ರಕರಣಗಳು ಬಹುಮತದಿಂದ ತೀರ್ಮಾನವಾಗುತ್ತವೆ. ಮೂರು ಜನ ಸದಸ್ಯರು ಹಾಗೂ ಅಧ್ಯಕ್ಷರೂ ಸೇರಿದರೆ ಅವಶ್ಯ ಹಾಜರಿ (ಕೋರಂ) ಆಗುತ್ತದೆ. ಅರ್ಜಿದಾರರ ಅನುಕೂಲಕ್ಕೆ ಪ್ರತೀ ತಾಲೂಕಿನಲ್ಲೂ ಒಂದೊಂದು ನ್ಯಾಯಮಂಡಳಿ ರಚಿತವಾಗಿದೆ. ಕಾರ್ಯಭಾರ ಹೆಚ್ಚಿರುವಲ್ಲಿ ಒಂದೇ ತಾಲೂಕಿಗೆ ಎರಡು ಅಥವಾ ಹೆಚ್ಚು ಮಂಡಳಿಗಳನ್ನು ರಚಿಸಲಾಗಿದೆ.

ನ್ಯಾಯಮಂಡಳಿಯು ಅರೆ ನ್ಯಾಯಾಸ್ಥಾನದ ರೂಪದ ಸಂಸ್ಥೆಯಾಗಿದ್ದು (ಕ್ವಾಸಿ ಜುಡಿಷಿಯಲ್ ಬಾಡಿ) ಸಂಕ್ಷಿಪ್ತ ವಿಚಾರಣೆ ನಡೆಸುವ ಅಧಿಕಾರವನ್ನು ಹೊಂದಿರುತ್ತದೆ. ಗೇಣಿದಾರ ಮತ್ತು ಭೂಮಾಲೀಕರ ಮಧ್ಯೆ ಇರುವ ವ್ಯಾಜ್ಯಗಳನ್ನು ವಿಚಾರಣೆಯ ನಂತರ ಪರಿಹರಿಸಲಾಗುತ್ತದೆ.

ಗೇಣಿದಾರನು ಆರ್ಥಿಕವಾಗಿ ದುರ್ಬಲನಾಗಿದ್ದರೆ ಆತನಿಗೆ ನೆರವು ನೀಡಲು ಶಾಸನದಲ್ಲಿ ಅವಕಾಶ

ಮಾಡಿಕೊಡಲಾಗಿದೆ. ಸರ್ಕಾರವು ಗೇಣಿದಾರರ ಸಹಾಯಕ್ಕೆಂದೇ 'ಕಾನೂನು ಸಲಹಾ ಕೋಶ (ಸೆಲ್)'ವನ್ನು ಸಚಿವಾಲಯದಲ್ಲಿ ಸ್ಥಾಪಿಸಿದೆ. ನ್ಯಾಯಮಂಡಳಿಗಳ ತೀರ್ಮಾನದ ವಿರುದ್ಧವಾಗಲೀ, ಭೂಮಾಲೀಕರ ರಿಟ್ ಅರ್ಜಿಗಳ ವಿರುದ್ಧವಾಗಲೀ ಈ ಕೋಶದಲ್ಲಿ ಗೇಣಿದಾರರು ರಕ್ಷಣೆ ಪಡೆಯಬಹುದು.

## ಹೆಚ್ಚುವರಿ ಭೂಮಿ ಹಂಚಿಕೆ

ಸರ್ಕಾರ ವಹಿಸಿಕೊಂಡ ಹೆಚ್ಚುವರಿ ಭೂಮಿಯನ್ನು ಸ್ಥಾನಭ್ರಷ್ಟ ಗೇಣಿದಾರರಿಗೆ, ಕೃಷಿ ಕೂಲಿಕಾರರಿಗೆ, ಭೂರಹಿತರಿಗೆ ಮತ್ತು ೨,೦೦೦ ರೂ.ಗಳಿಗಿಂತ ಹೆಚ್ಚು ವಾರ್ಷಿಕ ಆದಾಯವಿಲ್ಲದ ಮಾಜಿ ಸೈನಿಕರಿಗೆ ಹಂಚಲು ಅವಕಾಶವಿರುತ್ತದೆ. ಈ ಹೆಚ್ಚುವರಿ ಭೂಮಿಯ ಶೇಕಡಾ ೫೦ ಭಾಗವನ್ನು ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಜನಕ್ಕೆ ಮೀಸಲಿಡಲಾಗಿದೆ.

## ಭೂಸುಧಾರಣಾ ಮೇಲ್ಮನವಿ ಪ್ರಾಧಿಕಾರ

ಭೂಸುಧಾರಣಾ ಕಾಯ್ದೆಯ ೧೧೮ ಎ ಕಲಮಿನಂತೆ ಭೂಸುಧಾರಣಾ ಮೇಲ್ಮನವಿ ಪ್ರಾಧಿಕಾರವು ಜಿಲ್ಲಾ ಮಟ್ಟದಲ್ಲಿ ಸ್ಥಾಪನೆಗೊಂಡಿದ್ದು, ಸಿವಿಲ್ ಜಡ್ಜ್ ಮಟ್ಟದ ಜ್ಯುಡಿಶಿಯಲ್ ಮೆಂಬರ್ ಹಾಗೂ ಜಿಲ್ಲಾಧಿಕಾರಿ ಮಟ್ಟದ ಅಧಿಕಾರಿಯನ್ನು ಕಂದಾಯ ಸದಸ್ಯನೆಂದೂ ಹೊಂದಿದ್ದು ಕಾರ್ಯನಿರ್ವಹಿಸುತ್ತಿತ್ತು. ಭೂ ನ್ಯಾಯಮಂಡಳಿಯಲ್ಲಿ ಜಾರಿಯಾದ ಪ್ರತೀ ನಿರ್ಣಯ ಹಾಗೂ ಆಜ್ಞೆಗೆ ಸಂಬಂಧಿಸಿದಂತೆ, ೧೧೮ ಎ ಕಲಮಿನಂತೆ ಇಲ್ಲಿ ಮೇಲ್ಮನವಿ ಸಲ್ಲಿಸಬಹುದಾಗಿತ್ತು. ಸಿವಿಲ್ ಸಂಹಿತೆಯಂತೆ ಈ ಪ್ರಾಧಿಕಾರ ನ್ಯಾಯಾಲಯಗಳಂತೆಯೇ ಅಧಿಕಾರ ಚಲಾಯಿಸಬಹುದಾಗಿತ್ತು. ಮೇಲ್ಕಂಡ ಕಂದಾಯ ಸದಸ್ಯ ಹಾಗೂ ನ್ಯಾಯಾಂಗ ಸದಸ್ಯರು ಅಪೀಲುಗಳನ್ನು ಆಲಿಸಿ, ತೀರ್ಪು ನೀಡುತ್ತಿದ್ದರು. ಈ ತೀರ್ಪಿನಲ್ಲಿ ಯಾವುದಾದರೂ ವ್ಯತ್ಯಾಸ ಕಂಡುಬಂದಲ್ಲಿ, ನ್ಯಾಯಾಂಗ ಸದಸ್ಯ ಅದನ್ನು ಆಯಾಯ ಪ್ರದೇಶದ ಪ್ರಿನ್ಸಿಪಾಲ್ ಸಿವಿಲ್ ನ್ಯಾಯಾಧೀಶರ ಬಳಿ ಕೊಂಡೊಯ್ಯಬಹುದಾಗಿತ್ತು. ಪ್ರಿನ್ಸಿಪಾಲ್ ಸಿವಿಲ್ ನ್ಯಾಯಾಧೀಶರು ವಿಷಯದಲ್ಲಿ ಉದ್ಭವಿಸಿರುವ ಸಮಸ್ಯೆಗೆ ಪರಿಹಾರ ನ್ಯಾಯಯುತವಾಗಿ ಸೂಚಿಸುತ್ತಿದ್ದರು. ಆದರೆ ಈ ಭೂಸುಧಾರಣಾ ಮೇಲ್ಮನವಿಗಳನ್ನು ಸರ್ಕಾರವು ೮.೧೦.೧೯೯೦ ರಂದು ರದ್ದು ಮಾಡಿತು.

## ಸರಕಾರಿ ಭೂಮಿಯ ವಿಲೇವಾರಿ

ಸ್ವಾತಂತ್ರ್ಯ ಪೂರ್ವದಲ್ಲಿ ಭೂಮಿ ನೀಡಿಕೆ ಬಗ್ಗೆ ಯಾವುದೇ ಖಚಿತವಾದ ನಿಯಮಗಳಿರಲಿಲ್ಲ. ಸಾಗುವಳಿಯಾಗದ ಹಾಗೂ ಬಂಜರು ಭೂಮಿಯ ತುಂಡುಗಳನ್ನು ಹಲವಾರು ಬಾರಿ ಕೆಲವು ವರ್ಗದ ಜನರಿಗೆ ಅವರು ಮಾಡಿದ ಸೇವೆಗಳಿಗೆ ಬಳುವಳಿಯಾಗಿ ನೀಡಲಾಗುತ್ತಿತ್ತು ಅಥವಾ ಅವುಗಳನ್ನು ಸಾರ್ವಜನಿಕವಾಗಿ ಹರಾಜು ಮಾಡಲಾಗುತ್ತಿತ್ತು. ಭೂಸಾಗುವಳಿಯೇ ಇದರ ಮುಖ್ಯ ಉದ್ದೇಶವಾಗಿತ್ತು. ಸ್ವಾತಂತ್ರ್ಯಾನಂತರ ಭೂ ಮಂಜೂರಾತಿ ವಿಷಯದಲ್ಲಿ ಸಾಮಾಜಿಕ ನ್ಯಾಯನೀತಿಗಳನ್ನು ಅನುಸರಿಸಬೇಕೆಂಬ ಅಂಶವನ್ನು ಅರಿತ ಸರ್ಕಾರವು ಸಮಾಜದ ದುರ್ಬಲ ವರ್ಗದವರಿಗೆ, ಭೂರಹಿತರಿಗೆ ಹಾಗೂ ಇತರೆ ಪಾತ್ರರಿಗೆ ಪ್ರಾಧಾನ್ಯತೆ ನೀಡಲು ನಿರ್ಧರಿಸಲಾಯಿತು. ೧೯೫೮ ರಲ್ಲಿ ಇಡೀ ರಾಜ್ಯದಲ್ಲಿ ಏಕರೂಪದ ಭೂಮಂಜೂರಾತಿ ನಿಯಮ ಜಾರಿ ಮಾಡಲಾಯಿತು. ೧೯೫೦ ರಲ್ಲಿ ರಚಿಸಲಾಗಿದ್ದ ಭೂಮಿ ನೀಡಿಕೆ ನಿಯಮಗಳು ರದ್ದಾಗಿ, ೧೯೬೮ ರಲ್ಲಿ ನೂತನ ನಿಯಮಗಳೂ, ೧೯೭೯ ರಲ್ಲಿ ಮಾರ್ಪಾಟುಗಳೂ ಜಾರಿಯಾದವು. ನೂತನ ಕರ್ನಾಟಕ ಭೂ ಮಂಜೂರಾತಿ ನಿಯಮಗಳು ೧೯೬೪ ರ ಕಾಯ್ದೆಯ ೧೯೭ನೇ ಕಲಮಿನನ್ವಯ ೩.೫.೧೯೭೯ ರಿಂದ ಜಾರಿಗೆ ಬಂದವು. ಭೂಮಂಜೂರಾತಿಯಲ್ಲಿ ಇದರಂತೆ ಪ್ರಥಮಾದ್ಯತೆಯನ್ನು ಗ್ರಾಮಗಳಲ್ಲಿ ವಾಸವಾಗಿರುವ ಭೂರಹಿತರಿಗೆ ನೀಡಲಾಗಿದೆ. ತದನಂತರ ಕಡಿಮೆ ಭೂಮಿ ಹೊಂದಿದವರು, ನೆರೆ ಗ್ರಾಮದ ಭೂರಹಿತರು ಹಾಗೂ ಇತರರು ಆದ್ಯತೆ ಪಡೆಯುತ್ತಾರೆ.

ಮೇಲ್ಕಂಡ ರೀತಿಯಲ್ಲಿ ಭೂಮಿ ಪಡೆದವರು ಅದನ್ನು ೧೫ ವರ್ಷಗಳ ಅವಧಿಗೆ ಪರಭಾರೆ ಮಾಡುವಂತಿಲ್ಲ

ಹಾಗೂ ಪಡೆದ ಮೂರು ವರ್ಷಗಳ ಒಳಗೆ ಮಂಜೂರಾದ ಭೂಮಿಯನ್ನು ಸಾಗುವಳಿಗೆ ಒಳಪಡಿಸಬೇಕು. ಭೂಮಿ ಪಡೆದಾತ ಅದನ್ನು ತಾನೇ ಸ್ವಂತ ಉಳುಮೆ ಮಾಡಬೇಕು ಹಾಗೂ ಬೇಸಾಯಕ್ಕಾಗಿ ಮಾತ್ರ ಉಪಯೋಗಿಸಬೇಕು. ಭೂ ವಿಲೇವಾರಿಯ ಅರ್ಜಿ, ಅದರ ಪರಿಶೀಲನೆ, ವಿಚಾರಣೆ ಹಾಗೂ ಅಖೈರಾಗಿ ಭೂಮಿಯನ್ನು ನಿಗದಿತ ವ್ಯಕ್ತಿಗೆ ಮಾತ್ರ ವಿಲೇವಾರಿಯಾಗುವುದನ್ನು ತಾಲೂಕು ತಹಶೀಲ್ದಾರರೇ ನೋಡಿಕೊಳ್ಳುತ್ತಾರೆ.

### ಭೂಸ್ವಾಧೀನ

ಸಾರ್ವಜನಿಕ ಉಪಯೋಗಕ್ಕಾಗಿ ಯಾವುದೇ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಬೇಕೆಂದು ಸರ್ಕಾರಕ್ಕೆ ತೋರಿದಾಗ, ರಾಜ್ಯ ಪತ್ರದಲ್ಲಿ ಈ ಸಂಬಂಧ ಅಧಿಸೂಚನೆಯನ್ನು ಹೊರಡಿಸಲಾಗುತ್ತದೆ. ಅಲ್ಲದೆ ಈ ವಿಷಯದಲ್ಲಿ ಸಾರ್ವಜನಿಕರ ತಿಳುವಳಿಕೆಗಾಗಿ ನಿಗದಿಯಾದ ಸಾರ್ವಜನಿಕ ಸ್ಥಳಗಳಲ್ಲಿಯೂ ಜಿಲ್ಲಾಧಿಕಾರಿಗಳಿಂದ ಪ್ರಕಟಣೆ ನೀಡಲಾಗುವುದು. ಸಾರ್ವಜನಿಕ ಉಪಯೋಗಕ್ಕಾಗಿ ಭೂಸ್ವಾಧೀನ ಮಾಡಿಕೊಳ್ಳುವ ಕಾರ್ಯ ೧೮೯೧ ರ ಕರ್ನಾಟಕ ಭೂ ಸ್ವಾಧೀನ ಅಧಿನಿಯಮ (೧೮೯೪ರ ಕೇಂದ್ರ ಕಾಯ್ದೆ೧) ದಂತೆ ನಡೆಯುತ್ತದೆ. ನಂತರ ಜಿಲ್ಲಾಧಿಕಾರಿ ಸದರಿ ಭೂ ಪ್ರದೇಶವನ್ನು ಗುರುತಿಸಿ, ಅಳೆದು, ಅದರ ನಕ್ಷೆಯನ್ನು ತಯಾರಿಸಲು ಸೂಚಿಸುತ್ತಾರೆ. ಈ ಭೂಮಿಯ ಸಂಬಂಧ ಯಾವುದೇ ತಕರಾರನ್ನಾಗಲೀ, ಪರಿಹಾರವನ್ನಾಗಲೀ ತಿಳಿಸಲು ಇವರಿಗೆ ಅರ್ಜಿ ನೀಡಬಹುದು. ತಮ್ಮ ಅರ್ಜಿಗಳಲ್ಲಿ ಅರ್ಜಿದಾರರು ಭೂಮಿಯ ಅಮೂಲಾಗ್ರ ವಿವರಣೆ ನೀಡಬೇಕಾಗುವುದು. ಸದರಿ ಭೂಮಿಗೆ ಸಂಬಂಧಿಸಿದ ಎಲ್ಲಾ ವ್ಯಕ್ತಿಗಳೂ ವೈಯಕ್ತಿಕವಾಗಿ ಅಥವಾ ತಮ್ಮ ಏಜೆಂಟರ ಮೂಲಕ ಜಿಲ್ಲಾಧಿಕಾರಿಯ ಮುಂದೆ ಹಾಜರಾಗಬೇಕಾಗುವುದು. ತಮ್ಮ ಭೂಮಿಯ ಅಳತೆಯ ಬಗ್ಗೆಯಾಗಲೀ, ಪ್ರಕಟಿತ ಪರಿಹಾರದ ಬಗ್ಗೆಯಾಗಲೀ ತಕರಾರುಗಳಿದ್ದಲ್ಲಿ ಮುಖತ: ನಿವೇದಿಸಿಕೊಳ್ಳಬಹುದು ಅಥವಾ ಬರವಣಿಗೆಯಲ್ಲಿ ಸಲ್ಲಿಸಬಹುದು.

ಕಕ್ಷಿದಾರರ ಅಹವಾಲುಗಳನ್ನು ಆಲಿಸಿ, ಪರಿಶೀಲಿಸಿದ ನಂತರ ಜಿಲ್ಲಾಧಿಕಾರಿಯವರು ೧೧ನೇ ಕಲಮಿನ ಪ್ರಕಾರ ಸದರಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅದನ್ನು ಸರಕಾರಿ ಭೂಮಿ ಎಂದು ಘೋಷಿಸುತ್ತಾರೆ. ೧೮೯೪ರ ಭೂಸ್ವಾಧೀನ ಕಾಯ್ದೆಯಲ್ಲಿ ೧೯೮೪ರ ಸ್ವಾಧೀನ (ತಿದ್ದುಪಡಿ) ಕಾಯ್ದೆ ಪರಿಹಾರ ಧನವಾಗಿ ಪತ್ತು ಲಕ್ಷ ರೂ.ಗಳವರೆಗೆ ಜಿಲ್ಲಾಧಿಕಾರಿ, ಇಪ್ಪತ್ತು ಲಕ್ಷ ರೂ.ಗಳವರೆಗೆ ವಿಭಾಗಧಿಕಾರಿ ಮತ್ತು ಇಪ್ಪತ್ತು ಲಕ್ಷ ರೂ.ಗಳಿಗೂ ಮೇಲ್ಪಟ್ಟಿದ್ದರೆ ಸರ್ಕಾರ ನೀಡಬಹುದೆಂದು ನಿಗದಿಯಾಗಿದೆ.

### ಇತರ ತೆರಿಗೆಗಳು

ಭೂ ಕಂದಾಯವಲ್ಲದೆ, ಸರ್ಕಾರಕ್ಕೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಹಾಗೂ ಕೇಂದ್ರ ತೆರಿಗೆಗಳಲ್ಲಿ ತನ್ನ ಪಾಲಿನ ತೆರಿಗೆ ಮೂಲಕ ಹಲವಾರು ರೀತಿಯ, ಅಂದರೆ ಅಬ್ಕಾರಿ, ವಾಣಿಜ್ಯ, ನೋಂದಣಿ, ವಾಹನ, ವಿದ್ಯುಚ್ಛಕ್ತಿ, ಅರಣ್ಯ ಮುಂತಾದ ಇತರ ತೆರಿಗೆಗಳೂ ಸಂದಾಯವಾಗುತ್ತವೆ. ಕಾಲಕಾಲಕ್ಕೆ ಇವುಗಳ ದರ ಹಲವಾರು ಅಂಶಗಳನ್ನೊಳಗೊಂಡು ಪುನರ್ನಿಗದಿಗೊಳಪಡುತ್ತದೆ.

### ವಾಣಿಜ್ಯ ತೆರಿಗೆ

ರಾಜ್ಯ ಬೊಕ್ಕಸಕ್ಕೆ ಸಿಂಹಪಾಲಿನ ತೆರಿಗೆ ನೀಡುವ ವಾಣಿಜ್ಯ ತೆರಿಗೆ ಇಲಾಖೆ ಕೆಳಕಂಡ ಕಾಯ್ದೆಗಳನ್ವಯ ಆಡಳಿತ ನಡೆಸುತ್ತದೆ.

೧. ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ ೧೯೫೭

೨. ಕೇಂದ್ರ ಮಾರಾಟ ತೆರಿಗೆ ಕಾಯ್ದೆ ೧೯೫೬

೩. ಕರ್ನಾಟಕ ಮನರಂಜನಾ ಕಾಯ್ದೆ ೧೯೫೮

೪. ಕರ್ನಾಟಕ ಕೃಷಿ ಉತ್ಪನ್ನ ತೆರಿಗೆ ಕಾಯ್ದೆ ೧೯೫೭

೫. ಕರ್ನಾಟಕ ವೃತ್ತಿ, ವ್ಯಾಪಾರ, ನೌಕರಿ ತೆರಿಗೆ ಕಾಯ್ದೆ ೧೯೭೬

೬. ಕರ್ನಾಟಕ ಭೋಗ ಸೌಲಭ್ಯ (ಹೋಟೆಲು ಹಾಗೂ ವಸತಿ ಗೃಹ) ತೆರಿಗೆ ಕಾಯ್ದೆ ೧೯೭೬

**ಮಾರಾಟ ತೆರಿಗೆ**

ಕರ್ನಾಟಕ ವಾಣಿಜ್ಯ ತೆರಿಗೆ ಅಧಿನಿಯಮ ೧೯೫೭ ಹಾಗೂ ಕೇಂದ್ರ ವಾಣಿಜ್ಯ ತೆರಿಗೆ ಅಧಿನಿಯಮ ೧೯೫೬ ರಾಜ್ಯದಲ್ಲಿ ಜಾರಿಯಲ್ಲಿವೆ. ರಾಜ್ಯ ರಾಜ್ಯಗಳ ನಡುವಣ ವ್ಯಾಪಾರಕ್ಕೆ ಸಂಬಂಧಿಸಿದಂತೆ ವಾಣಿಜ್ಯ ತೆರಿಗೆಯನ್ನು ಸಂಗ್ರಹಿಸುವ ರಾಜ್ಯವು ಅದನ್ನು ತಾನೇ ಇಟ್ಟುಕೊಳ್ಳಲು ಎರಡನೇಯ ಕಾನೂನು ಅವಕಾಶ ಕೊಡುತ್ತದೆ. ಈಗ ಇರುವ ವಾಣಿಜ್ಯ ತೆರಿಗೆಯಲ್ಲಿ ಏಕಸ್ಥಾನೀಯ (ಸಿಂಗಲ್ ಪಾಯಿಂಟ್) ಮತ್ತು ಬಹುಸ್ಥಾನೀಯ (ಮಲ್ಟಿ ಪಾಯಿಂಟ್) ವಸೂಲಾತಿಯ ವ್ಯವಸ್ಥೆ ಇದೆ. ಉತ್ಪಾದಕ, ಅಮದುದಾರರಿಂದ ಹಿಡಿದು ಅಂತಿಮವಾಗಿ ಬಳಕೆದಾರರವರೆಗೆ ಯಾವುದಾದರೂ ಒಂದು ಹಂತದಲ್ಲಿ ಮಾತ್ರ ಏಕಸ್ಥಾನೀಯ ತೆರಿಗೆ ವಸೂಲು ಮಾಡಲಾಗುವುದು. ಬಹುಸ್ಥಾನೀಯ ತೆರಿಗೆಯನ್ನು ವಸ್ತುವು ಮಾರಾಟದ ಕಾಲಕ್ಕೆ ಕೈಬದಲಾದಾಗಲೆಲ್ಲಾ ಅದರ ವ್ಯಾಪಾರಿಯಿಂದ ಸಂಗ್ರಹಿಸಲ್ಪಡುವುದು. ಏಕಸ್ಥಾನೀಯ ತೆರಿಗೆಯ ದರಗಳು ಶೇ.೧ ರಿಂದ ೧೫೦ ರವರೆಗೆ ಇರುವುದು. ೧೯೮೬ರಿಂದ ಇದನ್ನು ಶೇಕಡಾ ೨೦೦ ಕ್ಕೆ ಏರಿಸಿದೆ. ಸುಮಾರು ೨೯೩ ಮುಖ್ಯ ವಸ್ತುಗಳಲ್ಲಿ ೧೭೮ ವಸ್ತುಗಳು ಏಕಸ್ಥಾನೀಯ ತೆರಿಗೆಗೆ ಒಳಪಟ್ಟಿವೆ. ಉಳಿದವು ಬಹುಸ್ಥಾನೀಯ ತೆರಿಗೆಗೆ ಬದ್ಧವಾಗಿವೆ. ಸಾಮಾನ್ಯ ಬಳಕೆಯ ವಸ್ತುಗಳು ಶೇ.೪ ಮಾರಾಟ ತೆರಿಗೆಗೆ ಒಳಪಟ್ಟಿವೆ. ಮದ್ಯಗಳು ಅಬಕಾರಿ ಸುಂಕಕ್ಕೆ ಒಳಪಡದಿದ್ದಲ್ಲಿ ಶೇ ೨೦೦ ತೆರಿಗೆಗೆ ಪಾತ್ರವಾಗಿವೆ.

೧೯೮೪ರ ಏಪ್ರಿಲ್ ಒಂದರಿಂದ ಜಾರಿಗೆ ಬಂದ ಕಾನೂನಿನಂತೆ ರೂ. ೫೦,೦೦೦ ಅಥವಾ ಅದಕ್ಕೂ ಹೆಚ್ಚಿನ ವಾರ್ಷಿಕ ವಿಕ್ರಯ ವಹಿವಾಟು ನಡೆಸುವ ವ್ಯಾಪಾರಿಯು ರೂ.೨೦೦ ಪಾವತಿ ಮಾಡಿ ತನ್ನನ್ನು ನೋಂದಾಯಿಸಿಕೊಳ್ಳಬೇಕು. ಅವನ ವಾರ್ಷಿಕ ವಿಕ್ರಯ ಒಂದು ಲಕ್ಷಕ್ಕೂ ಮೀರಿದ್ದರೆ ಅವನು ವಾಣಿಜ್ಯ ತೆರಿಗೆ ಕೊಡಲೇಬೇಕು. ೧೯೮೫ರಿಂದ ನೋಂದಣಿಗೆ ಬೇಕಾದ ವಿಕ್ರಯದ ಮಿತಿಯನ್ನು ರೂ.೭೫,೦೦೦ಕ್ಕೆ ಏರಿಸಿದೆ. ನೋಂದಣಿ ಶುಲ್ಕ ರೂ.೨೫೦ಕ್ಕೆ ಏರಿದೆ. ಪ್ರತೀ ತಿಂಗಳ ೨೦ನೇಯ ತಾರೀಕಿಗೆ ಹಿಂದಿನ ತಿಂಗಳ ಮಾಸಿಕ ಮಾರಾಟದ ವರದಿಯನ್ನು ಇಲಾಖೆಗೆ ಒಪ್ಪಿಸಬೇಕೆಂಬ ನಿಯಮವಿದೆ. ಸರ್ಕಾರವು ನೋಂದಣಿಯ ಮಿತಿಯನ್ನು ೧೯೮೭-೮೮ರಿಂದ ಒಂದು ಲಕ್ಷಕ್ಕೆ ಹಾಗೂ ೧೯೯೦-೯೧ರಿಂದ ರೂ. ೨ ಲಕ್ಷ ಕ್ಕೂ ಹೆಚ್ಚಿಸಿದೆ. ಬಾರ್ ಮುಂತಾದವರಿಗೆ ಈ ಮಿತಿ ಒಂದು ಲಕ್ಷ ರೂ. ಮಾತ್ರ. ಮದ್ಯ ಉತ್ಪಾದಕರಿಗೂ ಮಾರಾಟದಾರರಿಗೂ ಇದೇ ಒಂದು ಲಕ್ಷದ ಮಿತಿ ಇದೆ.

ವರ್ಷಕ್ಕೆ ೧.೫೦ ಲಕ್ಷ ರೂಗಳಿಗೂ ಹೆಚ್ಚು ವಿಕ್ರಯ (ಟರ್ನ್ ಓವರ್)ವಿರುವ ವ್ಯಾಪಾರಿಗಳು ವಿಕ್ರಯ ತೆರಿಗೆಯಾಗಿ ಶೇ.೧.೫೦ರಷ್ಟು ಪಾವತಿ ಮಾಡಬೇಕು. ಐದು ಲಕ್ಷ ರೂ.ಗಳಿಗೂ ಹೆಚ್ಚಿನ ವಿಕ್ರಯವಿರುವ ವ್ಯಾಪಾರಿಗಳು ಪ್ರತೀ ಮಾರಾಟದ ವಿಶಿಷ್ಟ ಹಂತಕ್ಕೆ ಖಚಿತಗೊಳಿಸಿದ ದರದಂತೆ ಹೆಚ್ಚಿನ ತೆರಿಗೆ ಕೊಡಬೇಕು. ಈ ತೆರಿಗೆಯನ್ನು ಬಹುಸ್ಥಾನೀಯ ತೆರಿಗೆಯ ರೂಪದಲ್ಲಿ ಸಂಗ್ರಹಿಸಲು ಕೂಡ ಅವಕಾಶವಿದೆ. ಲಾಟರಿ ಟಿಕೆಟ್‌ಗಳ ಮೇಲೆ ಶೇ.೧೦ ಮಾರಾಟ ತೆರಿಗೆಯನ್ನು ೧೯೮೬ ಏಪ್ರಿಲ್ ಒಂದರಿಂದ ಜಾರಿ ಮಾಡಿದೆ.

## ಕರ್ನಾಟಕ ಮನರಂಜನಾ ಕಾಯ್ದೆ ೧೯೫೮

ಹಲವಾರು ಸಂಯುಕ್ತ ವಲಯಗಳಲ್ಲಿ ಡಿಸೆಂಬರ್ ೧೯೫೮ರವರೆಗೆ ಹಲವಾರು ಮನರಂಜನಾ ತೆರಿಗೆ ನಿಯಮಗಳು ಜಾರಿಯಲ್ಲಿದ್ದವು. ಜನವರಿ ಒಂದು, ೧೯೫೯ ರಿಂದ ರಾಜ್ಯದಾದ್ಯಂತ ಅನ್ವಯವಾಗುವಂತೆ ಸಮಗ್ರ ತೆರಿಗೆ ಕಾಯ್ದೆ ಜಾರಿಯಾಯಿತು. ಅದೇ ದಿನಾಂಕದಿಂದ ಈ ಕಾಯ್ದೆ ವಾಣಿಜ್ಯ ತೆರಿಗೆ ಇಲಾಖೆಯ ಆಡಳಿತಕ್ಕೆ ಒಳಪಟ್ಟಿತು. ಸಿನಿಮಾ ಮಂದಿರ ಹಾಗೂ ಕುದುರೆ ಜೂಜಿನ ಸ್ಥಳಗಳಿಗೆ ಪ್ರವೇಶ ದರಗಳ ಮೇಲೆ ಮನರಂಜನಾ ತೆರಿಗೆ ವಿಧಿಸಲು ಈ ಕಾನೂನಿನನ್ವಯ ಅವಕಾಶವಿರುತ್ತದೆ. ನಾಟಕ, ಸಂಗೀತ ಕಾರ್ಯಕ್ರಮ ಹಾಗೂ ಇತರೆ ಮನರಂಜನೆಗಳು ಇದರ ಪರಿಧಿಗೆ ಒಳಪಡುವುದಿಲ್ಲ. ಮನರಂಜನೆ ಕರ, ಅಧಿಕ ಕರ (ಸರ್ ಚಾರ್ಜ್) ಹಾಗೂ ಪ್ರದರ್ಶನ ಕರಗಳೆಂಬ ಮೂರು ವಿಧಗಳಲ್ಲಿ ತೆರಿಗೆ ವಸೂಲಾಗುತ್ತದೆ. ಮನರಂಜನೆ ಪ್ರವೇಶ ಹಣದ ಶೇಕಡಾ ೨೦ ರಿಂದ ಶೇಕಡಾ ೩೫ರವರೆವಿಗೂ ತೆರಿಗೆ ದರವಿದೆ. ೧೯೬೬ರ ಮೇ ೧೫ ರವರೆಗೆ ಟಿಕೇಟುಗಳ ಮೇಲೆ ಸರಕಾರಿ ಮುದ್ರಾಂಕ ಅಂಟಿಸುವುದರ ಮೂಲಕ ಈ ಕರವನ್ನು ನಗದು ವಸೂಲು ಮಾಡಿ ಮಾರಾಟ ಕರ ಇಲಾಖೆಯಲ್ಲಿ ಹಣ ಸಂದಾಯವಾಗುವಂತೆ ಮುದ್ರೆಯೊತ್ತಲಾಗುತ್ತದೆ.

ರಾಜ್ಯದ ಸಂಪನ್ಮೂಲಗಳನ್ನು ಉತ್ತಮಪಡಿಸಲು ಸಂಪನ್ಮೂಲ ಮತ್ತು ಆರ್ಥಿಕ ಸಮಿತಿಯ ಶಿಫಾರಸ್ಸಿನನ್ವಯ ೧೯೬೨ರಲ್ಲಿ ಮನರಂಜನೆ ತೆರಿಗೆ ಮತ್ತು ಪ್ರದರ್ಶನ ತೆರಿಗೆಯ ಮೇಲೆ ಶೇಕಡಾ ೨೫ರಷ್ಟು ಅಧಿಕ ಕರ ವಿಧಿಸಲಾಯಿತು. ೧೯೭೧ರ ನವೆಂಬರ್ ೩೦ರವರೆಗೆ ಅಧಿಕ ಕರ ದರ, ಮನರಂಜನೆ ದರದ ಶೇಕಡಾ ೫೦ ರಷ್ಟಿತ್ತು. ಡಿಸೆಂಬರ್ ೧, ೧೯೭೧ರಿಂದ ಅದನ್ನು ಶೇಕಡಾ ೬೦ಕ್ಕೆ ಏರಿಸಲಾಯಿತು. ಒಂದು ರೂಪಾಯಿಗಿಂತ ಹೆಚ್ಚು ಬೆಲೆಯುಳ್ಳ ಪ್ರತೀ ಟಿಕೇಟಿನ ಮೇಲೆ ಶೇಕಡಾ ೧೦ ಹೆಚ್ಚಿನ ಕರ ವಿಧಿಸಲಾಯಿತು. ಅಧಿಕ ಕರದ ರೂಪದಲ್ಲಿ ಸಂದಾಯವಾದ ಹಣ ರಾಜ್ಯದ ಸ್ಥಿರ ನಿಧಿಗೆ ಸೇರುತ್ತದೆ. ಶಾಸನಾನ್ವಯ ಚಲನಚಿತ್ರ ಪ್ರದರ್ಶನಗಳಿಗೆ ಮನರಂಜನೆ ತೆರಿಗೆಯಲ್ಲದೆ ಪ್ರದರ್ಶನ ಕರವನ್ನು ನೀಡಬೇಕಾಗುತ್ತದೆ. ೧೯೬೬ರ ೧೪ನೇ ಶಾಸನ ಜಾರಿಯಾಗುವ ಮೊದಲು ಈ ಕರವಿನಾಯಿತಿ ನೀಡುವ ಅಧಿಕಾರ ಸರ್ಕಾರ ಅಥವಾ ಮಾರಾಟ ಕರ ಅಧಿಕಾರಿಗಳಿಗೆ ಇದ್ದಿತು. ನಂತರ ಈ ಅಧಿಕಾರವನ್ನು ಸರ್ಕಾರವೇ ವಹಿಸಿಕೊಂಡಿತು.

## ಕರ್ನಾಟಕ ಕೃಷಿ ವರಮಾನ ತೆರಿಗೆ ಕಾಯ್ದೆ ೧೯೫೭

ಈ ಕಾಯ್ದೆಯನ್ವಯ ಏಳು ತೋಟಗಾರಿಕೆ ಬೆಳೆಗಳೂ ಸೇರಿದಂತೆ ಮೂವತ್ತೊಂದು ವಾಣಿಜ್ಯ ಬೆಳೆಗಳ ಮೇಲೆ ತೆರಿಗೆ ವಿಧಿಸಲು ಅವಕಾಶವಿರುತ್ತದೆ. ಹಳೆಯ ಮೈಸೂರು ಸಂಸ್ಥಾನವು ೧೯೫೫ರಲ್ಲಿ ಕೃಷಿ ವರಮಾನ ಕರವನ್ನು ಪ್ರಾರಂಭಿಸಿತ್ತು. ಆದರೆ ಕೆಲವು ವಿಶಿಷ್ಟ ವ್ಯಾಪಾರೀ ಬೆಳೆಗಳನ್ನು ಬೆಳೆಸುವ ಜಮೀನುಗಳ ವರಮಾನದ ಮೇಲೆ ಮಾತ್ರ ಈ ಕರ ವಿಧಿಸಲ್ಪಡುತ್ತಿತ್ತು. ಅದರಂತೆ ತೆರಿಗೆಗೊಳಪಡುವ ಕನಿಷ್ಠ ವರಮಾನ ರೂ.೪೨೦೦ ಆಗಿತ್ತು. ರಾಜ್ಯ ಪುನರ್ವಿಂಗಡಣೆಯ ತರುವಾಯ ಕೃಷಿ ವರಮಾನ ತೆರಿಗೆ ರಾಜ್ಯದಾದ್ಯಂತ ಏಕರೂಪತೆ ಪಡೆಯಿತು. ಈ ಶಾಸನ ೧೯೮೩ರಲ್ಲಿ ತಿದ್ದುಪಡಿ ಹೊಂದಿ, ೩೧–೩–೧೯೮೨ರಿಂದ ಅನ್ವಯವಾಗುವಂತೆ ತೋಟದ ಬೆಳೆಗಳಿಗೆ ಮಾತ್ರ ತೆರಿಗೆ ವಿಧಿಸುವ ಅವಕಾಶವನ್ನು ಒದಗಿಸಿತು. ತೆರಿಗೆ ಮಿತಿಗೊಳಪಡುವ ವರಮಾನದ ವಿನಾಯ್ತಿ ಸಹ ರೂ.೮,೦೦೦ ದಿಂದ ರೂ. ೧೪,೦೦೦ಕ್ಕೆ ಏರಿತು. ೧.೪.೧೯೮೫ರಿಂದ ಕೃಷಿ ವರಮಾನ ತೆರಿಗೆ ಕಾಯ್ದೆ ೧೯೮೫ರನ್ವಯ ವಿನಾಯ್ತಿ ಮೊತ್ತವು ೧೪,೦೦೦ ರೂ.ಗಳಿಂದ ೨೦,೦೦೦ ರೂ.ಗಳಿಗೆ ಹೆಚ್ಚಿತು.

೧೯೮೫ರ ಕರ್ನಾಟಕ ಕೃಷಿ ವರಮಾನ ತೆರಿಗೆ (ತಿದ್ದುಪಡಿ) ಕಾಯ್ದೆಯಂತೆ, ಹಾಗೂ ನಂತರ ೧೯೮೬ರಲ್ಲಿ ತಿದ್ದುಪಡಿಯಾದ ಕರ್ನಾಟಕ ಕೃಷಿ ವರಮಾನ ತೆರಿಗೆ ಕಾಯ್ದೆಯಲ್ಲಿರುವಂತೆ ೨೫ ಎಕರೆ ಕಾಫಿಯನ್ನು ಮಾತ್ರ ಬೆಳೆಯುವ

ಭೂಮಿಯುಳ್ಳ ಅಥವಾ ಕಾಫಿ ಬೆಳೆಯ ಮಧ್ಯೆ ಬಾಳೆ, ತೆಂಗು, ಏಲಕ್ಕಿ, ಮೆಣಸು ಅಥವಾ ಕಿತ್ತಳೆ ಬೆಳೆಯುವ ಭೂಮಿಯುಳ್ಳ ಮತ್ತು ಇಂತಹ ೧೫ ಎಕರೆ ಭೂಮಿಯ ಉತ್ಪನ್ನಗಳಿಗೆ ತೆರಿಗೆ ವಿನಾಯ್ತಿ ನೀಡುವ ಅವಕಾಶ ಮೇಲಿನ ಕಾಯ್ದೆಯಲ್ಲಿರುತ್ತದೆ. ಈ ಯೋಜನೆಯಡಿ ಒಂದೇ ಕಂತಿನಲ್ಲಿ ನೀಡಬೇಕಾದ ತೆರಿಗೆ ವಿವರ ಹೀಗಿದೆ.

೧. ೧೫ ಎಕರೆಗೆ ಮೀರದ ಭೂಮಿ ಇದ್ದರೆ – ತೆರಿಗೆ ಇಲ್ಲ

೨. ೧೫ ಎಕರೆಗಳಿಂದ ೨೦ ಎಕರೆ ಒಳಗಿದ್ದರೆ – ರೂ. ೧,೫೦೦

೩. ೨೦ ಎಕರೆಗಳಿಂದ ೨೫ ಎಕರೆ ಒಳಗಿದ್ದರೆ – ರೂ. ೨,೫೦೦

**ವೃತ್ತಿತೆರಿಗೆ**

೧೯೭೬ಕ್ಕೂ ಮೊದಲು ಉದ್ಯೋಗ, ವೃತ್ತಿ ಮತ್ತು ಕಸಬುಗಳ ಮೇಲೆ ತೆರಿಗೆಯನ್ನು ಸ್ಥಳೀಯ ಆಡಳಿತ ಸಂಸ್ಥೆಗಳು ಮಾತ್ರ ಸಂಗ್ರಹಿಸುತ್ತಿದ್ದವು. ಕರ್ನಾಟಕ ಪುರಸಭೆಗಳ ಅಧಿನಿಯಮ ೧೯೬೪ರ ಪ್ರಕಾರ ವೃತ್ತಿ ತೆರಿಗೆ ವಸೂಲಿಗೆ ವೃತ್ತಿದಾರರನ್ನು ಒಂಬತ್ತು ಗುಂಪುಗಳಾಗಿ ವಿಭಜಿಸಲಾಗಿತ್ತು. ಆದರೆ ಉದ್ಯೋಗ, ವ್ಯಾಪಾರ ಮತ್ತು ವೃತ್ತಿಗಳ ಅಧಿನಿಯಮ ೧೯೭೬ರಂತೆ ಉದ್ಯೋಗ, ವ್ಯಾಪಾರ, ವೃತ್ತಿ ಮತ್ತು ನೌಕರಿಗಳ ಮೇಲೆ ತೆರಿಗೆಯನ್ನು ಏಪ್ರಿಲ್ ಒಂದರ ೧೯೭೬ರಿಂದ ಜಾರಿ ಮಾಡಲಾಯಿತು. ವೇತನ ಪಡೆಯುವ ನೌಕರರ ತೆರಿಗೆ ದರ ಅವರ ವೇತನ ಪ್ರಮಾಣದ ಮೇಲೆ ಅವಲಂಬಿಸಿವೆ. ವ್ಯಾಪಾರಿಯ ವಿಚಾರದಲ್ಲಿ ವಿಕ್ರಯ (ಟರ್ನ್ ಓವರ್)ದ ಪ್ರಮಾಣವನ್ನು ತೆರಿಗೆ ನಿರ್ಣಯದಲ್ಲಿ ಪರಿಗಣಿಸಲಾಗುತ್ತಿದೆ. ನೌಕರರ ವೃತ್ತಿ ತೆರಿಗೆಯನ್ನು ಪ್ರತೀ ತಿಂಗಳು ಅವರ ಸಂಬಳದಲ್ಲಿ ಮುರಿದುಕೊಳ್ಳುವ ಏರ್ಪಾಡಿದೆ. ಸ್ವಉದ್ಯೋಗಿಗಳು ಆಯಾ ವರ್ಷ ಸೆಪ್ಟೆಂಬರ್ ೩೦ಕ್ಕೆ ಮೊದಲು ತೆರಿಗೆ ಪಾವತಿ ಮಾಡಬೇಕು.

ಏಪ್ರಿಲ್ ಒಂದು, ೧೯೮೩ರಿಂದ ತಿಂಗಳಿಗೆ ರೂ.೧,೨೦೦ಮೂಲ ವೇತನ ಅಥವಾ ಕೂಲಿ ಪಡೆಯುವವರು ಹಾಗೂ ಅದಕ್ಕೆ ಮೇಲ್ಪಟ್ಟ ಆದಾಯ ಉಳ್ಳವರಿಗೆ ಈ ತೆರಿಗೆಯು ಅನ್ವಯಿಸುತ್ತದೆ. ಸ್ವಯಂ ಉದ್ಯೋಗಿಗಳು ತಮಗೆ ಗೊತ್ತುಪಡಿಸಿದ ತೆರಿಗೆಯನ್ನು ಪ್ರತೀವರ್ಷ ಏಪ್ರಿಲ್ ೩೦ಕ್ಕೆ ಮೊದಲು ಪಾವತಿ ಮಾಡಬೇಕು.

ಕರ್ನಾಟಕ ಮಾರಾಟ ಕರ ಅಧಿನಿಯಮ ೧೯೫೦ರಂತೆ ನೋಂದಾಯಿಸಿದ ವ್ಯಾಪಾರಿಗಳು ವಾರ್ಷಿಕ ವಿಕ್ರಯ ೨೫,೦೦೦ಕ್ಕೆ ಮೇಲ್ಪಟ್ಟು ಮತ್ತು ೫೦,೦೦೦ ಕಡಿಮೆ ಇರುವವರು ವರ್ಷಕ್ಕೆ ರೂ.೧೦೦ರಂತೆ, ೫೦,೦೦೦ ರೂ.ನಿಂದ ಮೇಲ್ಪಟ್ಟು ಒಂದು ಲಕ್ಷ ರೂ.ವರೆಗೆ ವಿಕ್ರಯವಿರುವವರು ವರ್ಷಕ್ಕೆ ರೂ. ೨೫೦ರಂತೆ ತೆರಿಗೆ ಕೊಡಬೇಕು. ಆಗಸ್ಟ್ ಒಂದು, ೧೯೮೫ರಿಂದ ವಾರ್ಷಿಕ ವಿಕ್ರಯ ೭೫,೦೦೦ಕ್ಕೂ ಮೇಲ್ಪಟ್ಟು ಇರುವ ವ್ಯಾಪಾರಿಗಳು ರೂ.೨೫೦ ವಾರ್ಷಿಕ ವೃತ್ತಿ ತೆರಿಗೆ ಪಾವತಿ ಮಾಡಬೇಕು.

**ಭೋಗಸೌಲಭ್ಯಗಳ ತೆರಿಗೆ :** ಕರ್ನಾಟಕ ಭೋಗಸೌಲಭ್ಯ (ಹೋಟೇಲು ಮತ್ತು ವಸತಿ ಗೃಹಗಳು) ಕಾಯ್ದೆ ೧೯೭೯, ದಿನಾಂಕ ಒಂದನೇ ಜೂನ್ ೧೯೭೯ ರಿಂದ ಜಾರಿಯಾಯಿತು. ಭೋಗವಸ್ತುಗಳ ಮೇಲೆ ಹಾಗೂ ಹೋಟೇಲುಗಳಲ್ಲಿ ನೀಡಲ್ಪಡುವ ಯಾವುದೇ ಐಷಾರಾಮಗಳ ಮೇಲೆ ಈ ಕೆಳಕಂಡ ದರಗಳಲ್ಲಿ ೧.೮.೧೯೮೫ರಿಂದ ತೆರಿಗೆ ವಿಧಿಸಲಾಯಿತು.

೧. ದಿನಂಪ್ರತೀ ಒಬ್ಬರಿಗೆ ವಸತಿ ದರ ೩೦ ರೂ.ಗಳಿದ್ದು, ೧೫೦ ರೂ. ಮೇಲ್ಪಡದಿದ್ದಲ್ಲಿ ದರದ ಶೇಕಡಾ ೧೦

೨. ವಸತಿ ದರ ದಿನಂಪ್ರತೀ ಒಬ್ಬರಿಗೆ ೧೫೦ ರೂ.ಗಳಿದ್ದು, ೨೫೦ ರೂ.ಮೀರದಿದ್ದಲ್ಲಿ ದರದ ಶೇಕಡಾ ೧೫

೩. ವಸತಿ ದರ ದಿನಂಪ್ರತಿ ಒಬ್ಬರಿಗೆ ರೂ.೨೫೦ ಮೀರಿದಲ್ಲಿ ದರದ ಶೇಕಡಾ ೧೫

**ಕೋಷ್ಟಕ ೯.೮ ಜಿಲ್ಲೆಯಲ್ಲಿ ವಸೂಲಾದ ವಾಣಿಜ್ಯ ತೆರಿಗೆ ವಿವರ (ಲಕ್ಷ ರೂ.ಗಳಲ್ಲಿ) (ಸಹಾಯಕ ಆಯುಕ್ತರು, ಮಂಡ್ಯ ವೃತ್ತ (ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರ ಕಚೇರಿ, ಒಂದನೇ ವೃತ್ತ , ಮಂಡ್ಯ)**

| ವರ್ಷ | ಕರ್ನಾಟಕ ಮಾರಾಟ ತೆರಿಗೆ: ಕೇಂದ್ರ ಮಾರಾಟ ತೆರಿಗೆ | ಕರ್ನಾಟಕ ಪ್ರವೇಶ ತೆರಿಗೆ | ಕರ್ನಾಟಕ ವೃತ್ತಿ ತೆರಿಗೆ | ಒಟ್ಟು |
|---|---|---|---|---|
| ೮೮–೮೯ | ೬೫.೦೬ | ೪.೪೭ | ೦.೯೧ | ೭೦.೪೪ |
| ೮೯–೯೦ | ೯೫.೦೮ | ೪.೨೬ | ೨.೦೨ | ೧೦೧.೩೬ |
| ೯೦–೯೧ | ೫೬.೮೨ | ೫.೨೫ | ೨.೫೦ | ೬೪.೫೮ |
| ೯೧–೯೨ | ೭೧.೩೪ | ೬.೦೭ | ೩.೦೧ | ೮೨.೪೨ |
| ೯೨–೯೩ | ೯೮.೫೫ | ೧೧.೩೨ | ೩.೪೪ | ೧೧೩.೩೧ |
| ೯೩–೯೪ | ೧೦೩.೪೫ | ೧೨.೩೦ | ೩.೫೮ | ೧೧೯.೩೩ |
| ೯೪–೯೫ | ೧೦೯.೦೯ | ೯.೬೮ | ೪.೫೬ | ೧೨೩.೩೩ |
| ೯೫–೯೬ | ೧೦೨.೭೩ | ೧೩.೫೭ | ೪.೫೩ | ೧೨೦.೮೩ |
| ೯೬–೯೭ | ೧೩೦.೯೫ | ೧೨.೦೬ | ೫.೮೭ | ೧೪೮.೮೮ |
| ೯೭–೯೮ | ೧೩೧.೨೬ | ೨೯.೪೯ | ೬.೧೭ | ೧೬೬.೯೪ |
| ೯೮–೯೯ | ೧೮೦.೯೩ | ೩೩.೯೯ | ೬.೦೭ | ೨೨೦.೯೯ |
| ೯೯–೨೦೦೦ | ೨೨೩.೩೦ | ೮.೭೫ | ೬.೨೬ | ೨೩೮.೩೩ |
| ೨೦೦೦–೦೧ | ೨೪೧.೭೪ | ೭.೧೧ | ೫.೯೯ | ೨೫೪.೮೪ |
| ೨೦೦೧–೦೨ | ೨೬೮.೦೦ | ೬.೫೭ | ೬.೬೬ | ೨೮೧.೨೩ |

**ಕೋಷ್ಟಕ ೯.೯ ಜಿಲ್ಲೆಯಲ್ಲಿ ವಸೂಲಾದ ವಾಣಿಜ್ಯ ತೆರಿಗೆ ವಿವರ (ಲಕ್ಷ ರೂ.ಗಳಲ್ಲಿ) ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರ ಕಚೇರಿ, ಎರಡನೇ ವೃತ್ತ, ಮಂಡ್ಯ**

| ವರ್ಷ | ಕರ್ನಾಟಕ ಮಾರಾಟ ತೆರಿಗೆ: ಕೇಂದ್ರ ಮಾರಾಟ ತೆರಿಗೆ | ಕರ್ನಾಟಕ ಪ್ರವೇಶ ತೆರಿಗೆ | ಕರ್ನಾಟಕ ವೃತ್ತಿ ತೆರಿಗೆ | ಕರ್ನಾಟಕ ವಿಶೇಷ ತೆರಿಗೆ | ಒಟ್ಟು |
|---|---|---|---|---|---|
| ೧೯೯೫–೯೬ | ೮೭.೭೮ | ೩.೪೯ | ೭.೬೦ | ೦.೨೩ | ೯೯.೧೦ |
| ೧೯೯೬–೯೭ | ೯೧.೧೯ | ೬.೩೯ | ೮.೧೩ | ೦.೦೪ | ೧೦೬.೧೫ |
| ೧೯೯೭–೯೮ | ೧೨೨.೯೬ | ೨೧.೮೪ | ೭.೯೭ | ೦.೬೧ | ೧೫೩.೩೮ |
| ೧೯೯೮–೯೯ | ೧೮೯.೯೨ | ೨೬.೧೯ | ೭.೮೩ | ೨.೩೨ | ೨೨೬.೨೬ |
| ೧೯೯೯–೨೦೦೦ | ೧೭೫.೧೦ | ೫.೩೩ | ೯.೬೭ | ೩.೫೯ | ೧೯೩.೬೯ |
| ೨೦೦೦–೦೧ | ೧೭೮.೨೧ | ೪.೨೧ | ೮.೭೮ | ೬.೧೯ | ೧೯೭.೩೯ |
| ೨೦೦೧–೦೨ | ೨೩೩.೧೮ | ೬.೪೦ | ೯.೩೮ | ೬.೩೮ | ೨೫೫.೩೪ |

**ಕೋಷ್ಟಕ ೯.೧೦ ಜಿಲ್ಲೆಯಲ್ಲಿ ವಸೂಲಾದ ವಾಣಿಜ್ಯ ತೆರಿಗೆ ವಿವರ (ಲಕ್ಷ ರೂ.ಗಳಲ್ಲಿ) ವಾಣಿಜ್ಯ ತೆರಿಗೆ ಅಧಿಕಾರಿಗಳ ಕಚೇರಿ, ಒಂದನೇ ವೃತ್ತ, ಮಂಡ್ಯ**

| ವರ್ಷ | ಕರ್ನಾಟಕ ಮಾರಾಟ ತೆರಿಗೆ: ಕೇಂದ್ರ ಮಾರಾಟ ತೆರಿಗೆ | ಕರ್ನಾಟಕ ಪ್ರವೇಶ ತೆರಿಗೆ | ಕರ್ನಾಟಕ ವೃತ್ತಿ ತೆರಿಗೆ | ಕರ್ನಾಟಕ ಮನರಂಜನಾ ತೆರಿಗೆ | ಒಟ್ಟು |
|---|---|---|---|---|---|
| ೧೯೯೪-೯೫ | ೨೨.೩೦ | ೨.೧೫ | ೮.೧೦ | ೨೦.೧೫ | ೫೨.೭೦ |
| ೧೯೯೫-೯೬ | ೨೪.೧೫ | ೩.೧೦ | ೧೦.೧೦ | ೨೧.೦೫ | ೫೮.೪೦ |
| ೧೯೯೬-೯೭ | ೨೬.೩೦ | ೪.೧೭ | ೧೧.೧೯ | ೨೨.೭೭ | ೬೪.೯೭ |
| ೧೯೯೭-೯೮ | ೩೦.೨೦ | ೧.೯೯ | ೧೪.೫೦ | ೩೩.೩೪ | ೮೦.೦೩ |
| ೧೯೯೮-೯೯ | ೩೮.೫೨ | ೧.೯೫ | ೧೧.೪೮ | ೨೬.೦೦ | ೭೬.೯೬ |
| ೧೯೯೯-೨೦೦೦ | ೪೪.೫೮ | ೧.೪೭ | ೯.೨೫ | ೧೮.೭೪ | ೭೪.೦೪ |
| ೨೦೦೦-೦೧ | ೪೬.೪೭ | ೦.೬೬ | ೧೦.೭೪ | ೨೧.೫೭ | ೭೯.೪೪ |
| ೨೦೦೧-೦೨ | ೩೫.೫೪ | ೦.೭೦ | ೧೦.೩೦ | ೨೧.೯೦ | ೬೮.೪೪ |

**ಕೋಷ್ಟಕ ೯.೧೧ ಜಿಲ್ಲೆಯಲ್ಲಿ ವಸೂಲಾದ ವಾಣಿಜ್ಯ ತೆರಿಗೆ ವಿವರ (ಲಕ್ಷ ರೂ.ಗಳಲ್ಲಿ) ವಾಣಿಜ್ಯ ಅಧಿಕಾರಿಗಳ ಕಚೇರಿ, ಎರಡನೇ ವೃತ್ತ, ಮಂಡ್ಯ**

| ವರ್ಷ | ಕರ್ನಾಟಕ ಮಾರಾಟ ತೆರಿಗೆ: ಕೇಂದ್ರ ಮಾರಾಟ ತೆರಿಗೆ | ಕರ್ನಾಟಕ ಪ್ರವೇಶ ತೆರಿಗೆ | ಕರ್ನಾಟಕ ವೃತ್ತಿ ತೆರಿಗೆ | ಕರ್ನಾಟಕ ಮನರಂಜನಾ ತೆರಿಗೆ | ಒಟ್ಟು |
|---|---|---|---|---|---|
| ೧೯೮೭-೮೮ | ೧೨.೨೩ | ೦.೩೫ | ೫.೪೨ | ೪.೦೧ | ೨೨.೦೧ |
| ೧೯೮೮-೮೯ | ೧೩.೪೫ | ೦.೨೮ | ೫.೩೬ | ೩.೯೫ | ೨೩.೦೪ |
| ೧೯೮೯-೯೦ | ೧೪.೯೨ | ೦.೪೨ | ೫.೯೭ | ೪.೭೨ | ೨೦.೦೩ |
| ೧೯೯೦-೯೧ | ೧೭.೨೯ | ೦.೬೫ | ೬.೬೨ | ೫.೫೧ | ೩೦.೦೭ |
| ೧೯೯೧-೯೨ | ೨೦.೧೮ | ೦.೭೨ | ೬.೧೨ | ೫.೦೭ | ೩೨.೦೯ |
| ೧೯೯೨-೯೩ | ೨೨.೦೧ | ೦.೫೨ | ೫.೭೬ | ೪.೭೧ | ೩೩.೦೪ |
| ೧೯೯೩-೯೪ | ೨೩.೪೨ | ೦.೬೧ | ೬.೮೯ | ೪.೧೪ | ೩೫.೦೬ |
| ೧೯೯೪-೯೫ | ೨೫.೯೩ | ೦.೯೧ | ೭.೧೫ | ೩.೧೦ | ೩೭.೦೯ |
| ೧೯೯೫-೯೬ | ೨೮.೦೫ | ೦.೫೨ | ೭.೪೫ | ೩.೦೦ | ೩೯.೦೨ |
| ೧೯೯೬-೯೭ | ೩೦.೦೨ | ೦.೭೧ | ೮.೪೧ | ೧.೯೨ | ೪೧.೬೬ |
| ೧೯೯೭-೯೮ | ೩೩.೩೯ | ೦.೬೦ | ೭.೧೮ | ೦.೮೫ | ೪೨.೦೨ |
| ೧೯೯೮-೯೯ | ೨೭.೩೮ | ೦.೭೦ | ೭.೮೬ | ೪.೮೧ | ೪೦.೭೫ |
| ೧೯೯೯-೨೦೦೦ | ೩೦.೦೯ | ೧.೨೮ | ೭.೮೬ | ೪.೦೨ | ೪೩.೨೪ |
| ೨೦೦೦-೦೧ | ೩೩.೨೨ | ೧.೫೭ | ೭.೨೦ | ೮.೦೬ | ೫೦.೦೫ |
| ೨೦೦೧-೦೨ | ೩೩.೦೮ | ೧.೩೧ | ೭.೭೫ | ೭.೦೭ | ೪೯.೩೨ |

ವೃತ್ತಿ ತೆರಿಗೆ ಅಧಿಕಾರಿಗಳು, ಮಂಡ್ಯ ಇವರ ಕಚೇರಿಯಲ್ಲಿ

**ಕೋಷ್ಟಕ ೯.೧೨ ವರ್ಷವಾರು ವೃತ್ತಿ ತೆರಿಗೆ ಸಂಗ್ರಹಣೆ ವಿವರ**

| ವರ್ಷ | ವೃತ್ತಿ ತೆರಿಗೆ |
|---|---|
| ೧೯೮೬–೮೭ | ೧೫.೯೭ |
| ೧೯೮೭–೮೮ | ೧೭.೦೨ |
| ೧೯೮೮–೮೯ | ೨೧.೬೧ |
| ೧೯೮೯–೯೦ | ೩೦.೩೨ |
| ೧೯೯೦–೯೧ | ೬೧.೭೪ |
| ೧೯೯೧–೯೨ | ೭೬.೬೬ |
| ೧೯೯೨–೯೩ | ೯೮.೮೫ |
| ೧೯೯೩–೯೪ | ೧೨೨.೫೮ |
| ೧೯೯೪–೯೫ | ೧೪೧.೧೧ |
| ೧೯೯೫–೯೬ | ೧೬೬.೪೯ |
| ೧೯೯೬–೯೭ | ೧೮೮.೮೨ |
| ೧೯೯೭–೯೮ | ೧೩೪.೮೯ |
| ೧೯೯೮–೯೯ | ೧೫೧.೧೯ |
| ೧೯೯೯–೨೦೦೦ | ೧೯೦.೮೯ |
| ೨೦೦೦–೦೧ | ೨೦೨.೯೫ |
| ೨೦೦೧–೦೨ | ೨೦೮.೯೪ |

## ಸ್ಟ್ಯಾಂಪು ಮತ್ತು ನೋಂದಣಿ

ಭಾರತೀಯ ಮುದ್ರಾಂಕಿತ (ಸ್ಟಾಂಪ್) ಅಧಿನಿಯಮದಂತೆ ವಿನಿಮಯ ಪತ್ರ, ಚೆಕ್, ಪ್ರಾಮಿಸರಿ ನೋಟು, ಸಾಲ ಪತ್ರ, ಜೀವವಿಮಾ ಪಾಲಿಸಿ, ಮುಂತಾದವೆಲ್ಲ ಈ ಅಧಿನಿಯಮಕ್ಕೆ ಒಳಪಟ್ಟಿರುತ್ತವೆ.

ಭಾರತೀಯ ನೋಂದಣಿ ಅಧಿನಿಯಮ ೧೯೦೮ರಂತೆ ಕೆಲವೊಂದು ದಸ್ತಾವೇಜುಗಳನ್ನು ನೋಂದಾಯಿಸಲೇಬೇಕಾಗಿದ್ದು. ನೋಂದಾವಣೆಗೆ ಸೂಕ್ತ ದರವನ್ನು ಗೊತ್ತುಪಡಿಸಲಾಗಿರುತ್ತದೆ. ಕರ್ನಾಟಕ ಮುದ್ರಾಂಕ ಅಧಿನಿಯಮವು ಮೇಲೆ ಹೇಳಿದ ಕಾಗದ ಪತ್ರಗಳನ್ನು ಹೊರತುಪಡಿಸಿ ಇತರ ಕಾಗದ ಪತ್ರಗಳಿಗೆ ಅನ್ವಯಿಸುತ್ತದೆ. ಈ ರಾಜ್ಯ ಅಧಿನಿಯಮದಂತೆ ೫೫ ಬೇರೆ ಬೇರೆ ವಿಧದ ದಸ್ತಾವೇಜುಗಳು ಮುದ್ರಾಂಕನದ ಕಕ್ಷೆಯಲ್ಲಿ ಬರುತ್ತದೆ. ಇವುಗಳನ್ನು ಸ್ಥೂಲವಾಗಿ ಸ್ಥಿರ ತೆರಿಗೆಯವು ಹಾಗೂ ನೋಂದಾಯಿಸುವ ವಸ್ತುವಿನ ಮೌಲ್ಯದ ಪ್ರಮಾಣದವು ಎಂದೂ ವರ್ಗೀಕರಿಸಬಹುದು. ಇದರಲ್ಲಿ ಮೌಲ್ಯ ಉಳ್ಳ ವಸ್ತುಗಳ ಮೌಲ್ಯವನ್ನು ನೋಂದಣಿ ಪತ್ರದಲ್ಲಿ ಉಲ್ಲೇಖಿಸಿ ಅದಕ್ಕೆ ಅನುಗುಣವಾಗಿ ಗೊತ್ತುಪಡಿಸಿದ ಛಾಪಾಕಾಗದವನ್ನು ನೋಂದಣಿ ಪತ್ರಕ್ಕೆ ಬಳಸಬೇಕು, ಹಾಗೂ ಪ್ರತ್ಯೇಕ ನೋಂದಣಿ ಶುಲ್ಕ ಕೊಡಬೇಕು. ತಾತ್ಕಾಲಿಕ ವ್ಯವಹಾರಗಳಿಂದ ತಾತ್ಪೂರ್ತಿಕ ಹಸ್ತಾಂತರ ಅಥವಾ ತತ್ಸಮ ವ್ಯವಹಾರಗಳಲ್ಲಿ ಬಳಕೆಗೆ ಕೊಡದೆ ಅಡಮಾನ, ಆಸ್ತಿ ವಿಭಜನೆ, ಭದ್ರತಾ ಮುಚ್ಚಳಿಕೆ (ಸೂರಿಟಿ) ಇವುಗಳಿಗೆಲ್ಲ ಛಾಪಾ ಕಾಗದದ ವೆಚ್ಚ

ಕಡಿಮೆ ಇರುತ್ತದೆ. ಒಪ್ಪಂದದ ಕರಾರುಪತ್ರಗಳು (ಅಗ್ರಿಮೆಂಟ್ಸ್), ಪ್ರಮಾಣಪತ್ರ (ಅಫಿಡವಿಟ್), ದತ್ತಕ ಪ್ರಕರಣ ಇವುಗಳಿಗೆಲ್ಲ ಗೊತ್ತು ಮಾಡಿದ ಖಚಿತವಾದ ಮಿತದರ ಇರುತ್ತದೆ. ಇದಲ್ಲದೆ ನ್ಯಾಯಾಲಯ ಸಂಬಂಧಿ ಮತ್ತು ನ್ಯಾಯಾಂಗೇತರ ಪತ್ರಗಳೆಂಬ ವರ್ಗವೂ ಇರುತ್ತದೆ. ಕರ್ನಾಟಕ ನ್ಯಾಯಾಲಯ ಶುಲ್ಕ ಮತ್ತು ಮೊಕದ್ದಮೆಗಳ ಅಧಿನಿಯಮ ೧೯೫೮ರಂತೆ ನ್ಯಾಯಾಂಗ ಸಂಬಂಧಿ ಮೊಕದ್ದಮೆಗಳಿಗೆ ಲಗತ್ತಿಸಬೇಕಾದ ಮುದ್ರಾಂಕ ಶುಲ್ಕ ನಿಗದಿಗೊಳಿಸಿದೆ. ಭಾರತೀಯ ಮುದ್ರಾಂಕಿತ ಅಧಿನಿಯಮ ಮತ್ತು ಕರ್ನಾಟಕ ಮುದ್ರಾಂಕ ಅಧಿನಿಯಮ ೧೯೫೮ ಇವುಗಳ ಕಕ್ಷೆಯಲ್ಲಿ ಬರುವ ಕಾಗದ ಪತ್ರಗಳು, ಕಾನೂನಿನಲ್ಲಿ ತಿಳಿಸಿರುವ ನ್ಯಾಯಾಂಗೇತರ ಛಾಪಾಕಾಗದದಲ್ಲಿ ಬರೆಯಲ್ಪಟ್ಟಿರಬೇಕೆಂದು ನಿಯಮವಿದೆ.

ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ನೋಂದಣಿ ಅಧಿಕಾರಿಯು ತನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸ್ಥಿರ ಆಸ್ತಿಗಳ ಹಸ್ತಾಂತರದ ನೋಂದಣಿ ಮತ್ತು ಸೂಕ್ತ ಶುಲ್ಕವನ್ನು ವಸೂಲು ಮಾಡುವುದು, ಉಪನೋಂದಣಿ ಅಧಿಕಾರಿ (ಸಬ್ ರಿಜಿಸ್ಟ್ರಾರ್)ಯ ಕೆಲಸ, ಮದುವೆ, ದತ್ತಕ ಪ್ರಕರಣ ಹಾಗೂ ಉಯಿಲು (ವಿಲ್)ಗಳನ್ನೂ ಅವರೇ ನೋಂದಣಿ ಮಾಡುತ್ತಾರೆ.

೧೮೩೧ ಹಾಗೂ ೧೮೬೧ ರ ಅವಧಿಯ ಮಧ್ಯೆ ಕೋರ್ಟುಗಳ ಶುಲ್ಕವನ್ನು ಮುಖ್ಯವಾಗಿ ನಗದು ರೂಪದಲ್ಲಿ ಪಾವತಿ ಮಾಡಲಾಗುತ್ತಿತ್ತು. ೧೮೬೨ರ ಭಾರತೀಯ ಸ್ಟ್ಯಾಂಪು ಕಾಯಿದೆಯು ೧೮೬೫ರಲ್ಲಿ ಜಾರಿಯಾಗಿ ಸಾಕಷ್ಟು ಲಾಭಾಂಶ ಬಂದಿತು. ಈ ಕಾಯ್ದೆ ಜಾರಿಯಾದ ನಂತರ, ಕಾನೂನು ಹಾಗೂ ನ್ಯಾಯ ಮುಖ್ಯಸ್ಥರಿಗೆ ಕೋರ್ಟು ಶುಲ್ಕಗಳ ಲೆಕ್ಕ ಪತ್ರ ಒಪ್ಪಿಸಲಾಯಿತು. ಕಾಲಕಾಲಕ್ಕೆ ತರಲ್ಪಟ್ಟ ಹಲವಾರು ತಿದ್ದುಪಡಿಗಳಿಗೆ ಕಾಯ್ದೆ ಬದ್ಧವಾಯಿತು.

೫೫ ವಿವಿಧ ದಾಖಲೆಗಳಿಗೆ ಕರ್ನಾಟಕ ಸ್ಟ್ಯಾಂಪು ವಿಧಿ ಅನ್ವಯಿಸುತ್ತದೆ. ಇವನ್ನು ಎರಡು ರೀತಿಯಲ್ಲಿ ವರ್ಗೀಕರಿಸಲಾಗಿದೆ. ಮೊದಲನೆಯದು 'ಅಡ್ವೊಲೆರೆಂ' ತೆರಿಗೆ ಹಾಗೂ ಎರಡನೇಯದು ನಿರ್ಧಾರಿತ ತೆರಿಗೆ. ಅಡ್ವೊಲೆರೆಂ ವಿಭಾಗದಡಿ ಬರುವ ದಾಖಲೆಗಳನ್ನು ಕನ್ವೆಯನ್ಸ್ ದಾಖಲೆಗಳು ಮತ್ತು ಬಾಂಡ್ ರೇಟ್ ದಾಖಲೆಗಳೆಂದು ಪುನರ್ವಿಂಗಡಿಸಲಾಗಿದೆ. ಮಾರಾಟ, ಬಹುಮಾನ ಅಥವಾ ಅದಲುಬದಲು ಮಾಡಿಕೊಳ್ಳುವ ಸಂಪೂರ್ಣ ಹಕ್ಕನ್ನು ಹೊಂದಿದ್ದ ದಾಖಲೆಗಳ ಮೇಲೆ ಕನ್ವೆಯನ್ಸ್ ದರವನ್ನು ವಿಧಿಸಲಾಗುತ್ತದೆ. ಭೋಗ್ಯ ಪಾಲುದಾರಿಕೆ ಅಥವಾ ಸೆಕ್ಯುರಿಟಿ ಬಾಂಡ್‌ಗಳಂತಹ ಅಪೂರ್ಣ ಹಕ್ಕನ್ನು ಹೊಂದಿದ ದಾಖಲೆಗಳ ಮೇಲೆ ಬಾಂಡ್ ರೇಟ್ ದರವನ್ನು ವಿಧಿಸಲಾಗುತ್ತದೆ. ೧೯೫೭ರಿಂದ ೧೯೭೯ರ ನಡುವೆ ಕನ್ವೆಯನ್ಸ್ ದರವನ್ನು ಹಲವಾರು ಬಾರಿ ಪರಿಷ್ಕರಿಸಲಾಗಿದೆ. ಆದರೆ ೧೯೬೨ರವರೆಗೂ ಬದಲಾಗದ ಬಾಂಡ್ ರೇಟ್ ದರ ೧೯೭೯ರಲ್ಲಿ ಮೂರನೇ ಒಂದು ಭಾಗದಷ್ಟು ಹೆಚ್ಚಾಗಿದೆ. ಅಗ್ರಿಮೆಂಟು, ಅಫಿಡವಿಟ್ಟು, ದತ್ತು ದಾಖಲೆ ಮತ್ತು ಸಂಸ್ಥೆಗಳ ವಿಧಿಬದ್ಧ ದಾಖಲೆಗಳ ಮೇಲೆ ನಿರ್ದಿಷ್ಟ ದರ ನಿಗದಿಪಡಿಸಲಾಗುತ್ತದೆ. ಇದಲ್ಲದೆ ದಾಖಲೆಗಳನ್ನು ನ್ಯಾಯಾಂಗಕ್ಕೆ ಸೇರಿದ ಹಾಗೂ ಸೇರದ ದಾಖಲೆಗಳೆಂದೂ ವರ್ಗೀಕರಿಸಲಾಗಿದೆ. ನ್ಯಾಯಾಂಗಕ್ಕೆ ಸೇರಿದ ದಾಖಲೆಗಳ ಮೇಲಿನ ಸ್ಟ್ಯಾಂಪ್ ಶುಲ್ಕ ಕರ್ನಾಟಕ ಕೋರ್ಟ್ ಫೀ ಅಂಡ್ ಸೂಟ್ ವ್ಯಾಲ್ಯುಯೇಷನ್ ಕಾಯ್ದೆ ೧೯೫೮ರನ್ವಯ ನಿಯಂತ್ರಿಸಲ್ಪಟ್ಟಿದೆ. ಭಾರತೀಯ ಸ್ಟ್ಯಾಂಪ್ ಕಾಯಿದೆಯಡಿ ಬರುವ ವಿಷಯಗಳನ್ನು ನಾನ್ – ಜುಡಿಷಿಯಲ್ ಕಾಗದದ ಮೇಲೆ ಬರೆಯಬೇಕಾಗುತ್ತದೆ.

ಪ್ರಸ್ತುತ ಏಳು ಸಬ್ ರಿಜಿಸ್ಟ್ರಾರ್ ಕಚೇರಿಗಳು ಈ ಮುಂದಿನ ಕಾಯ್ದೆಗಳನ್ನು ಜಾರಿ ಮಾಡುತ್ತಿವೆ.

೧. ನೋಂದಣಿ ಕಾಯ್ದೆ ೧೯೦೮

೨. ಕರ್ನಾಟಕ ನೋಂದಣಿ ನಿಯಮ ೧೯೬೫

೩. ಕರ್ನಾಟಕ ಸ್ಟಾಂಪ್ ಕಾಯ್ದೆ ೧೯೬೭ ಹಾಗೂ ನಿಯಮ

೪. ಕರ್ನಾಟಕ ಕೋರ್ಟ್ ಫೀ ಅಂಡ್ ಸೂಟ್ಸ್ ವ್ಯಾಲುಯೇಷನ್ ಕಾಯ್ದೆ ೧೯೫೮ ಹಾಗೂ ನಿಯಮ

೫. ಭಾರತೀಯ ಪಾಲುದಾರರ ಕಾಯ್ದೆ ೧೯೩೨

ತನ್ನ ಪ್ರಾಂತದ ಸ್ಥಿರಾಸ್ತಿಯ ದಾಖಲೆಗಳ ನೋಂದಣಿ ಹಾಗೂ ನೋಂದಣ ಶುಲ್ಕದ ವಸೂಲಿ ಕೆಲಸವನ್ನು ಉಪನೋಂದಣಾಧಿಕಾರಿಗೆ ವಹಿಸಲಾಗಿದೆ. ವಿವಿಧ ಮದುವೆ ಕಾಯ್ದೆಗಳಡಿ ಬರುವ ಮದುವೆಗಳ ನೋಂದಣಾಧಿಕಾರಿಯೂ ಇವರೇ ಆಗಿರುತ್ತಾರೆ.

ಕರ್ನಾಟಕ ಮುದ್ರಾಂಕ ಕಾಯ್ದೆ ೧೯೫೭ರ ಕಲಂ ೪೫ ಎ ಅನ್ನು ಕರ್ನಾಟಕ ರಾಜ್ಯದಾದ್ಯಂತ ವಿಸ್ತರಿಸಿ ಜಾರಿಗೆ ತರಲಾಗಿ ಆ ಮೂಲಕ ಜಾರಿಗೆ ಬಂದ ವರ್ಷದಿಂದ ರಾಜಸ್ವವು ಪ್ರಸ್ತುತ ಕಾಯ್ದೆ ಅಡಿಯಲ್ಲಿ ವಸೂಲಾದ ವಿವರ ಈ ಕೆಳಕಂಡಂತಿದೆ.

**ಕೋಷ್ಟಕ ೯.೧೩ ವರ್ಷವಾರು ಶುಲ್ಕ ವಸೂಲಾತಿ ವಿವರ**

| ವರ್ಷ | ವಸೂಲಾದ | | ಸ್ವೀಕರಿಸದ ಪ್ರಕರಣಗಳು | ತೀರ್ಮಾನಿಸಿದ ಪ್ರಕರಣಗಳು |
|---|---|---|---|---|
| | ಮುದ್ರಾಂಕ ಶುಲ್ಕ | ನೋಂದಣಿ ಶುಲ್ಕ | | |
| ೧೯೯೨–೯೩ | ೬,೧೯,೨೪೩ | – | ೬೯೭ | ೬೧೯ |
| ೧೯೯೩–೯೪ | ೪,೭೩,೫೦೯ | – | ೭೨೬ | ೪೯೨ |
| ೧೯೯೪–೯೫ | ೭,೨೦,೧೦೫ | – | ೬೪೦ | ೬೫೪ |
| ೧೯೯೫–೯೬ | ೧೦,೧೯,೫೩೯ | – | ೧,೧೫೮ | ೫೯೭ |
| ೧೯೯೬–೯೭ | ೧೧,೦೩,೮೦೯ | ೧,೮೧,೯೯೦ | ೪೫೪ | ೯೭೫ |
| ೧೯೯೭–೯೮ | ೧೨,೨೩,೦೩೫ | ೧,೯೯,೦೨೦ | ೪೮೫ | ೯೩೬ |
| ೧೯೯೮–೯೯ | ೯,೯೬,೯೩೭ | ೧,೫೮,೯೦೦ | ೪೯೯ | ೫೩೩ |
| ೧೯೯೯–೨೦೦೦ | ೯,೪೬,೩೩,೨೮೫ | ೧,೮೩,೫೯,೭೩೨ | ೫೧೦ | ೭೯೯ |
| ೨೦೦೦–೦೧ | ೯,೯೪,೭೩,೩೦೪ | ೨,೨೮,೩೭,೧೫೧ | ೫೭೩ | ೩೮೫ |
| ೨೦೦೧–೦೨ | ೧೦,೩೩,೭೬,೫೭೭ | ೨,೩೪,೩೮,೫೭೬ | ೪೪೦ | ೩೭೧ |

ಮಂಡ್ಯ ಜಿಲ್ಲಾ ನೋಂದಣಿ ಕಚೇರಿಯ ಕಾರ್ಯವ್ಯಾಪ್ತಿಗೆ ಬರುವ ಕರ್ನಾಟಕ ಸಂಘ ಸಂಸ್ಥೆಗಳ ನೋಂದಣಿ ಕಾಯ್ದೆ ೧೯೬೦ಕ್ಕೆ ೧೯೯೦ ರಿಂದ ಜಾರಿಗೆ ಬರುವಂತೆ ತಿದ್ದುಪಡಿ ತರಲಾಗಿ, ಸಂಘ–ಸಂಸ್ಥೆಗಳ ನೋಂದಣಿ ಶುಲ್ಕವನ್ನು ೫೦ ರೂ.ಗಳಿಂದ ೧೦೦ ರೂ.ಗಳಿಗೆ ಏರಿಸಲಾಯಿತು. ವಾರ್ಷಿಕ ಲೆಕ್ಕಪತ್ರಗಳನ್ನು ಫೈಲು ಮಾಡುವ ಶುಲ್ಕವನ್ನು ವರ್ಷಕ್ಕೆ ಎರಡು ರೂ.ಗಳಿಂದ ೧೦೦ ರೂ.ಗಳಿಗೆ ಏರಿಸಲಾಯಿತು. ಇದರಿಂದಾಗಿ ವಸೂಲಾದ ರಾಜಸ್ವವು ಈ ಕೆಳಕಂಡಂತಿದೆ.

**ಕೋಷ್ಟಕ ೯.೧೪ ಜಿಲ್ಲೆಯಲ್ಲಿ ನೋಂದಣಿಗೊಂಡ ಸಂಘ – ಸಂಸ್ಥೆಗಳಿಂದ ವಸೂಲಾದ ಶುಲ್ಕ ವಿವರ**

| ವರ್ಷ | ನೋಂದಣಿಯಾದ ಸಂಘಗಳು | ವಸೂಲಾದ ಶುಲ್ಕ | ವಾರ್ಷಿಕ ಲೆಕ್ಕಪತ್ರ ಫೈಲು ಮಾಡಿದ ಪ್ರಕರಣಗಳು | ವಸೂಲಾದ ಶುಲ್ಕ |
|---|---|---|---|---|
| ೧೯೯೦–೯೧ | ೧೨೫ | ೧೨,೫೦೦ | ೪೨ | ೧೧,೮೦೦ |
| ೧೯೯೧–೯೨ | ೧೩೯ | ೧೩,೯೦೦ | ೮೬ | ೧೬,೩೫೫ |
| ೧೯೯೨–೯೩ | ೨೦೬ | ೧೦,೬೦೦ | ೫೭ | ೨೧,೨೨೫ |
| ೧೯೯೩–೯೪ | ೨೩೫ | ೨೩,೫೦೦ | ೭೩ | ೨,೯೩೫ |
| ೧೯೯೪–೯೫ | ೨೮೨ | ೨೮,೨೦೦ | ೧೦೪ | ೩೯,೬೦೦ |
| ೧೯೯೫–೯೬ | ೩೭೪ | ೩೭,೪೦೦ | ೯೫ | ೨೨,೬೫೦ |
| ೧೯೯೬–೯೭ | ೨೫೧ | ೨೫,೧೦೦ | ೧೧೯ | ೩೦,೮೫೦ |
| ೧೯೯೭–೯೮ | ೨೯೦ | ೨೯,೦೦೦ | ೧೪೧ | ೩೬,೭೦೦ |
| ೧೯೯೮–೯೯ | ೩೯೯ | ೩೯,೦೦೦ | ೧೪ | ೧,೩೦೦ |
| ೧೯೯೯–೨೦೦೦ | ೪೨೧ | ೪೨,೧೦೦ | ೧೮೫ | ೬೦,೦೦೦ |
| ೨೦೦೦–೦೧ | ೩೬೯ | ೧,೪೦,೨೫೦ | ೧೨೦ | ೫೦,೫೦೦ |
| ೨೦೦೧–೦೨ | ೩೭೭ | ೧,೫೦,೨೫೦ | ೨೧ | ೫,೩೨೦ |

ಸರ್ಕಾರದ ಅಧಿಸೂಚನೆ ಸಂಖ್ಯೆ ಎಲ್ ಎ ಡಬ್ಲ್ಯೂ ೧೮:ಎಲ್ ಜಿ ಎನ್ ೭೯ ದಿನಾಂಕ ೩೦–೪–೮೭ ರಂತೆ ಭಾರತೀಯ ಪಾಲುಗಾರಿಕೆ ಕಾಯ್ದೆ ೧೯೩೨ಕ್ಕೆ ತಿದ್ದುಪಡಿ ತಂದು ಪಾಲುಗಾರಿಕೆ ಸಂಸ್ಥೆಗಳಿಗೆ ನೋಂದಣಿ ಶುಲ್ಕ ಮತ್ತು ಫೈಲಿಂಗ್ ಶುಲ್ಕ ದಿನಾಂಕ ೩೦–೪–೮೭ ರಿಂದ ಜಾರಿಗೆ ಬರುವಂತೆ ಹೆಚ್ಚಿಸಿದ್ದರಿಂದ ರಾಜಸ್ವವು ಈ ಕೆಳಕಂಡಂತೆ ವಸೂಲಾಗಿರುವುದು ಕಂಡು ಬರುತ್ತದೆ.

**ಕೋಷ್ಟಕ ೯.೧೫ ಜಿಲ್ಲೆಯಲ್ಲಿ ನೋಂದಣಿಗೊಂಡ ಸಂಘ – ಸಂಸ್ಥೆಗಳಿಂದ ವಸೂಲಾದ ಶುಲ್ಕ ವಿವರ**

| ವರ್ಷ | ನೋಂದಣಿಯಾದ | ವಸೂಲಾದ | |
|---|---|---|---|
| | ವ್ಯಾಪಾರ ಸಂಸ್ಥೆಗಳು | ನೋಂದಣಿ ಶುಲ್ಕ | ಫೈಲಿಂಗ್ ಶುಲ್ಕ |
| ೧೯೯೦–೯೧ | ೧೦೧ | ೧೦,೧೦೦ | ೧,೦೭೫ |
| ೧೯೯೧–೯೨ | ೯೩ | ೯,೩೦೦ | ೧,೭೩೫ |
| ೧೯೯೨–೯೩ | ೭೨ | ೭,೨೦೦ | ೧,೩೫೫ |
| ೧೯೯೩–೯೪ | ೯೩ | ೯,೩೦೦ | ೧,೩೨೫ |
| ೧೯೯೪–೯೫ | ೧೨೦ | ೧೨,೦೦೦ | ೧,೪೫೦ |
| ೧೯೯೫–೯೬ | ೧೦೯ | ೧೦,೯೦೦ | ೧,೪೦೦ |
| ೧೯೯೬–೯೭ | ೧೭೩ | ೧೭,೩೦೦ | ೧,೯೭೫ |
| ೧೯೯೭–೯೮ | ೮೯ | ೮,೯೦೦ | ೧,೩೦೦ |
| ೧೯೯೮–೯೯ | ೮೨ | ೮,೨೦೦ | ೧,೫೦೦ |
| ೧೯೯೯–೨೦೦೦ | ೮೨ | ೮,೨೦೦ | ೧೨೭೫ |
| ೨೦೦೦–೦೧ | ೭೪ | ೭,೪೦೦ | ೯೪೫ |
| ೨೦೦೧–೦೨ | ೧೦೦೦ | ೧೦,೦೦೦ | ೧,೧೨೫ |

**ಅಬಕಾರಿ ಇಲಾಖೆ**

ಮಂಡ್ಯ ಜಿಲ್ಲೆಯಲ್ಲಿ ೧೯೬೭ರಲ್ಲಿ ಅಬಕಾರಿ ಇಲಾಖೆಯು ಪ್ರಾರಂಭವಾಯಿತು. ಜಿಲ್ಲೆಯ ಏಳೂ ತಾಲೂಕುಗಳಲ್ಲಿ ಅಬಕಾರಿ ಕಾಯ್ದೆ ಜಾರಿಯಲ್ಲಿದ್ದು, ನಿಗದಿತ ಅಂಗಡಿಗಳಲ್ಲಿ ಸಾರಾಯಿ, ಬಾಟಲ್ಡ್ ಮದ್ಯ ಹಾಗೂ ಬಿಯರ್ ಮಾರಾಟವನ್ನು ಅಬಕಾರಿ ಕಾಯಿದೆಯನ್ವಯ ನಡೆಸಿಕೊಂಡು ಬರುತ್ತಿದೆ.

ಇಲಾಖೆಯ ಕಾರ್ಯ ನಿರ್ವಹಣೆಯನ್ನು ಅಬಕಾರಿ ಉಪ ಆಯುಕ್ತರು, ಮಂಡ್ಯ ಜಿಲ್ಲೆ, ಮಂಡ್ಯ ಹಾಗೂ ಅಬಕಾರಿ ಅಧೀಕ್ಷಕರು ಮಂಡ್ಯ ಜಿಲ್ಲೆ, ಮಂಡ್ಯ ಇವರು ಜಿಲ್ಲಾಧಿಕಾರಿಯವರ ಅಧೀನದಲ್ಲಿ ನಿರ್ವಹಿಸುತ್ತಾರೆ. ಜಿಲ್ಲೆಯ ಆರು ತಾಲೂಕುಗಳಲ್ಲಿ ವಲಯ ಕಚೇರಿಗಳಿದ್ದು ಅವಕ್ಕೆ ಅಬಕಾರಿ ನಿರೀಕ್ಷಕರು ಮುಖ್ಯಾಧಿಕಾರಿಯಾಗಿತ್ತಾರೆ. ಶ್ರೀರಂಗಪಟ್ಟಣದ ವಲಯಾಧಿಕಾರಿ ಪಾಂಡವಪುರ ತಾಲೂಕಿನ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಾರೆ. ಅಬಕಾರಿ ಉಪನಿರೀಕ್ಷಕರು ತಾಲೂಕಿನ ಅಧಿಕಾರಿಗೆ ಸಹಾಯಕರಾಗಿ ಕೆಲಸ ಮಾಡುತ್ತಾರೆ. ಅಕ್ರಮಗಳನ್ನು ತಡೆಗಟ್ಟಲು ಒಂದು ಉಪವಿಭಾಗ ಕಚೇರಿ ಇದ್ದು, ಇದಕ್ಕೆ ಅಬಕಾರಿ ಉಪನಿರೀಕ್ಷಕರು ಮುಖ್ಯಸ್ಥರಾಗಿರುತ್ತಾರೆ. ಮದ್ಯಸಾರ ಉತ್ಪಾದನೆ, ಬಾಟಲ್ಡ್ ಮದ್ಯ ತಯಾರಿಕೆ, ಸಾರಾಯಿ ತಯಾರಿಕಾ ಘಟಕಗಳು ಸಂಬಂಧಪಟ್ಟ ಡಿಸ್ಟಿಲರಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವುಗಳನ್ನು ನಿರ್ವಹಿಸಲು ಆಯಾಯ ಡಿಸ್ಟಿಲರಿಗಳಿಂದ ಸಂಬಳ, ಸಾರಿಗೆ ಭತ್ಯೆ, ಪಡೆಯುವ ಅಧಿಕಾರವರ್ಗವಿರುತ್ತದೆ.

ಅಬಕಾರಿ ಕಾಯಿದೆಯಡಿ ಅನೇಕ ನಿಯಮಗಳನ್ನು ರೂಪಿಸಲಾಗಿದ್ದು, ಇಲಾಖೆಯ ಮುಖ್ಯ ಅಧಿಕಾರಿಯಾದ ಅಬಕಾರಿ ಆಯುಕ್ತರು, ಬೆಂಗಳೂರು ಇವರು ನಿಯಮಗಳನ್ನು ರೂಪಿಸುವ, ಪರಿಷ್ಕರಣೆಗೊಳಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಈ ನಿಯಮಗಳನ್ನು ಪಾಲನೆ ಮಾಡಿ ಅಧೀನ ಕಚೇರಿಗಳು ಕಾರ್ಯ ನಿರ್ವಹಿಸುತ್ತವೆ. ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನಿಯಮಗಳನ್ನು ರೂಪಿಸುವ ಅಥವಾ ಪರಿಷ್ಕರಣೆಗೊಳಿಸುವ ಅಧಿಕಾರವಿರುವುದಿಲ್ಲ.

**ಮೋಟಾರು ವಾಹನ ತೆರಿಗೆ**

ಸರಕಾರದ ಬೊಕ್ಕಸಕ್ಕೆ ಮೋಟಾರು ವಾಹನ ತೆರಿಗೆಯು ಗಣನೀಯವಾಗಿ ಕಾಣಿಕೆ ಸಲ್ಲಿಸುತ್ತದೆ. ರಸ್ತೆಗಳಲ್ಲಿ ಸಂಚರಿಸುವ ಎಲ್ಲಾ ವಾಹನಗಳ ಮೇಲೆ ಅಂದರೆ, ಮೋಟಾರ್ ಸೈಕಲ್, ಕಾರು, ಟ್ರಕ್ಕು, ಗುತ್ತಿಗೆ ಬಸ್, ಸ್ಟೇಜ್ ಕ್ಯಾರೇಜ್, ಖಾಸಗಿ ಬಸ್ಸು, ಸರಕು ಸಾಗಣೆ ವಾಹನ ಮತ್ತು ಅಗ್ನಿಶಾಮಕದಂತಹ ವಿಶಿಷ್ಟ ಬಗೆಯ ವಾಹನಗಳ ಮೇಲೆ ಈ ತೆರಿಗೆಯನ್ನು ವಿಧಿಸಲಾಗುತ್ತದೆ. ಸಾಮಾನ್ಯವಾಗಿ ವಾಹನಗಳ ತೂಕ, ಸಾಮರ್ಥ್ಯ ಹಾಗೂ ಅವುಗಳ ಅಶ್ವಶಕ್ತಿಯನ್ನವಲಂಬಿಸಿ ತೆರಿಗೆ ದರ ನಿಗದಿಯಾಗುತ್ತದೆ.

ಈ ಹಿಂದೆ 'ಮೋಟಾರು ವಾಹನ ಇಲಾಖೆ' ಎಂಬ ಪದನಾಮದಡಿ ಕರೆಯಲ್ಪಡುತ್ತಿದ್ದ ಇಲಾಖೆಯನ್ನು ಪ್ರಸ್ತುತ 'ಸಾರಿಗೆ ಇಲಾಖೆ' ಎಂದು ಕರೆಯಲಾಗುತ್ತಿದೆ. ಪ್ರತೀ ಜಿಲ್ಲೆಯಲ್ಲಿ ಸಾರಿಗೆ ಕಚೇರಿಗಳು ಕಾರ್ಯ ನಿರ್ವಹಿಸುತ್ತಿರುವಂತೆ ಮಂಡ್ಯದಲ್ಲಿಯೂ ಪ್ರಾದೇಶಿಕ ಸಾರಿಗೆ ಕಚೇರಿ, ಪ್ರಾದೇಶಿಕ ಸಾರಿಗೆ ಅಧಿಕಾರಿಯ ನೇತೃತ್ವದಲ್ಲಿ ಜಿಲ್ಲೆಯ ಮೇಲೆ ತನ್ನ ಕಾರ್ಯವ್ಯಾಪ್ತಿಯನ್ನು ಹೊಂದಿರುತ್ತದೆ. ಹಿಂದಿನ ಮೋಟಾರು ವಾಹನ ಇಲಾಖೆಗೆ ಸಂಬಂಧಿಸಿದಂತೆ ಕೇಂದ್ರ ಮೋಟಾರು ವಾಹನ ಕಾಯ್ದೆ ೧೯೩೯, ಕರ್ನಾಟಕ ಮೋಟಾರು ವಾಹನ ನಿಯಮಾವಳಿ ೧೯೫೭ ಹಾಗೂ ಕರ್ನಾಟಕ ಮೋಟಾರು ವಾಹನ ಕಾಯ್ದೆ ೧೯೫೭– ನಿಯಮಾವಳಿಗಳಂತೆ ಈ ಮೊದಲು ಕಾರ್ಯ ನಿರ್ವಹಿಸುತ್ತಿದ್ದು, ನಂತರ ಕೇಂದ್ರ ಮೋಟಾರು ವಾಹನ ಕಾಯ್ದೆಗೆ ಸಂಪೂರ್ಣ ತಿದ್ದುಪಡಿಯೊಂದಿಗೆ ಹೊಸ ಕಾಯ್ದೆ ಜಾರಿಗೆ ತರಲಾಗಿ ಪ್ರಸ್ತುತ ಕರ್ನಾಟಕ ಸರ್ಕಾರ ಸಾರಿಗೆ ಇಲಾಖೆಯು ಈ ಮುಂದೆ ಕಾಣಿಸಿರುವ ಕಾಯ್ದೆ ಹಾಗೂ ನಿಯಮಾವಳಿಗಳಿಗನುಸಾರ ಪ್ರಾದೇಶಿಕ ಕಚೇರಿಯ ಮೂಲಕ ಕಾರ್ಯ ನಿರ್ವಹಿಸುತ್ತಿದೆ.

## ಕೋಷ್ಟಕ ೯.೧೬ ಜಿಲ್ಲೆಯಲ್ಲಿ ೧೯೮೭–೮೮ ರಿಂದ ೨೦೦೧–೦೨ರವರೆಗೆ ವಿವಿಧ ಹಣೆಪಟ್ಟಿಗಳಡಿ ವಸೂಲಾದ ತೆರಿಗೆ ವಿವರ

| | ೧೯೮೭ –೮೮ | ೧೯೮೯ –೯೦ | ೧೯೯೦ –೯೧ | ೧೯೯೧ –೯೨ | ೧೯೯೨ –೯೩ | ೧೯೯೩ –೯೪ | ೧೯೯೪ –೯೫ | ೧೯೯೫ –೯೬ | ೧೯೯೬ –೯೭ | ೧೯೯೭ –೯೮ | ೧೯೯೮ –೯೯ | ೧೯೯೯ –೨೦೦೦ | ೨೦೦೦ –೦೧ | ೨೦೦೧ –೦೨ |
|---|---|---|---|---|---|---|---|---|---|---|---|---|---|---|
| ಸಾರಾಯಿ ಮೇಲೆ ಸುಂಕ | ೦.೬೪ | ೧.೦೯ | ೧.೬೫ | ೧.೫೫ | ೧.೫೩ | ೨.೫೨ | ೨.೮೮ | ೪.೮೦ | ೪.೬೭ | ೪.೨೯ | ೪.೬೬ | ೫.೨೧ | ೬.೪೦ | ೬.೦೦ |
| ಸಾರಾಯಿ ಅಂಗಡಿಗಳ ಬಾಡಿಗೆ | ೩.೩೩ | ೫.೧೩ | ೧೦.೪೪ | ೧೬.೨೦ | ೧೪.೮೫ | ೧೯.೬೮ | ೨೧.೬೦ | ೨೧.೦೪ | ೨೨.೪೨ | ೨೩.೫೧ | ೨೪.೭೪ | ೩೪.೦೩ | ೪೨.೨೭ | ೪೦.೪೫ |
| ಸಾರಾಯಿ ಡಿಪೋಗಳಿಗೆ ಪರವಾನಿಗಿ (ಲೈಸೆನ್ಸ್) | ೦.೦೪ | ೦.೦೨ | ೦.೦೪ | ೦.೦೨ | ೦.೦೨ | ೦.೦೧ | – | – | – | – | – | – | – | – |
| ಸೇಂದಿ ಅಂಗಡಿ ಬಾಡಿಗೆ | ೩.೨೮ | ೬.೦೪ | ೧.೩೬ | ೦.೩೧ | ೦.೩೦ | ೦.೦೧ | – | – | – | – | ೦.೧೭ | – | – | – |
| ಬೀರ್ ಮೇಲೆ ಸುಂಕ | ೦.೦೬ | ೦.೦೭ | ೦.೦೬ | ೦.೦೮ | ೦.೦೯ | ೦.೦೨ | ೦.೦೨ | ೦.೦೨ | ೦.೦೧ | – | ೦.೦೧ | – | – | – |
| ಮದ್ಯಸಾರ ತಯಾರಿಕೆಯ ಪರವಾನಿಗಿ ಶುಲ್ಕ | ೦.೦೪ | ೦.೦೪ | ೦.೦೪ | ೦.೦೬ | ೦.೧೪ | ೦.೦೮ | ೦.೦೯ | ೦.೨೨ | ೦.೧೨ | ೦.೪೫ | ೦.೩೫ | ೦.೫೯ | ೦.೭೧ | ೦.೬೦ |
| ವಿದೇಶಿ ಮದ್ಯಗಳ ಲೈಸೆನ್ಸ್ | ೦.೩೫ | ೦.೩೪ | ೦.೩೮ | ೦.೬೧ | ೦.೭೩ | ೦.೬೫ | ೦.೭೩ | ೧.೧೫ | ೦.೯೪ | ೧.೨೫ | ೧.೮೭ | ೨.೫೯ | ೩.೦೧ | ೩.೯೬ |
| ಸ್ವದೇಶಿ ಮದ್ಯದ ಶುಲ್ಕ(ಐಎಂಎಲ್) | ೦.೨೪ | ೦.೫೭ | ೦.೫೦ | ೦.೩೬ | ೦.೪೧ | ೦.೩೩ | ೦.೧೦ | ೦.೦೪ | ೦.೨೦ | ೦.೪೨ | ೦.೮೩ | ೧.೫೫ | ೨.೫೭ | ೦.೮೫ |
| ರೆಕ್ಟಿಫೈಡ್ ಸ್ಪಿರಿಟ್ ಶುಲ್ಕ | ೦.೦೩ | ೦.೦೩ | ೦.೦೨ | ೦.೦೧ | ೦.೦೯ | ೦.೨೫ | ೧.೫೪ | ೧೦.೯೦ | ೧೨.೭೭ | ೨.೦೦ | ೩.೬೨ | ೨.೦೮ | ೪.೨೭ | ೮.೩೫ |
| ಡಿನೇಚರ್ಡ್ ಸ್ಪಿರೀಟ್ ಶುಲ್ಕ | ೦.೦೧ | ೦.೦೩ | ೦.೦೧ | – | – | ೦.೦೨ | ೦.೦೩ | ೦.೦೪ | ೦.೦೪ | ೦.೦೪ | ೦.೦೫ | ೦.೦೬ | ೦.೧೪ | ೦.೧೪ |
| ದಂಡ ಮತ್ತು ಜಪ್ತಿಗಳಿಂದ | ೦.೦೧ | ೦.೦೪ | ೦.೦೪ | ೦.೦೩ | ೦.೦೩ | ೦.೧೦ | ೦.೧೩ | ೦.೮೮ | ೦.೮೬ | ೧.೧೪ | ೧.೦೪ | ೩.೦೧ | ೨.೫೪ | ೨.೭೧ |
| ಸೇವೆ ಮತ್ತು ಸೇವಾ ಶುಲ್ಕ | ೦.೦೮ | ೦.೧೪ | ೦.೦೯ | ೦.೧೨ | ೦.೦೨ | ೦.೦೭ | ೦.೨೩ | ೦.೧೦ | ೦.೦೮ | ೦.೦೯ | ೦.೨೧ | ೦.೨೦ | ೦.೨೧ | ೦.೨೭ |
| ತೆರಿಗೆ ಬಾಕಿ ಮೇಲೆ ಬಡ್ಡಿ | ೦.೧೩ | ೦.೨೨ | ೦.೨೧ | ೦.೩೩ | ೦.೨೭ | ೦.೧೯ | ೦.೪೫ | ೦.೪೮ | ೦.೪೧ | ೦.೨೮ | ೦.೨೩ | ೦.೫೫ | ೦.೭೦ | ೦.೯೨ |
| ಪರ್ಮಿಟ್ ಶುಲ್ಕ | – | ೦.೦೨ | ೦.೦೨ | ೦.೦೩ | ೦.೦೪ | ೦.೦೪ | ೦.೦೩ | ೦.೦೩ | ೦.೦೫ | ೦.೧೨ | ೦.೧೦ | ೦.೧೧ | ೦.೧೪ | ೦.೧೧ |
| ಇತರೆ | – | ೦.೦೮ | ೦.೧೪ | ೦.೦೮ | ೦.೦೭ | – | – | – | – | – | – | ೦.೬೮ | ೧.೬೬ | ೪.೩೧ |

ಅ) ಮೋಟಾರು ವಾಹನ ಕಾಯ್ದೆ ೧೯೮೮

ಆ) ಮೋಟಾರು ವಾಹನ ನಿಯಮಾವಳಿ (ಕೇಂದ್ರ) ೧೯೮೯

ಇ) ಕರ್ನಾಟಕ ಮೋಟಾರು ವಾಹನ ನಿಯಮಾವಳಿಗಳು ೧೯೮೯

ಈ) ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ ಹಾಗೂ ನಿಯಮಾವಳಿಗಳು ೧೯೫೭

**ಕೋಷ್ಟಕ ೯.೧೭ ಮಂಡ್ಯ ಜಿಲ್ಲೆಯಲ್ಲಿ ಮೇಲ್ಕಂಡ ಕಾಯ್ದೆ ಹಾಗೂ ನಿಯಮಾವಳಿಗಳನ್ವಯ ೧೯೯೨-೯೩ ರಿಂದ ೨೦೦೧-೨೦೦೨ರವರೆಗೆ ವಸೂಲಾಗಿರುವ ರಾಜಸ್ವ ವಿವರ**

| ವರ್ಷಗಳು | ತೆರಿಗೆ | ಶುಲ್ಕ | ಒಟ್ಟು ರೆವಿನ್ಯೂ ಸಂಗ್ರಹ |
|---|---|---|---|
| ೧೯೯೨-೯೩ | ೨,೪೧,೩೯,೫೭೮ | ೫೫,೩೫,೪೬೫ | ೨,೯೬,೭೫,೦೪೩ |
| ೧೯೯೩-೯೪ | ೨,೮೩,೩೭,೬೧೬ | ೫೯,೬೨,೩೫೩ | ೩,೪೨,೯೯,೯೭೧ |
| ೧೯೯೪-೯೫ | ೩,೨೭,೭೦,೬೩೨ | ೬೨,೭೧,೧೨೮ | ೩,೯೦,೪೧,೭೬೦ |
| ೧೯೯೫-೯೬ | ೪,೨೩,೫೦,೩೭೯ | ೬೮,೩೧,೬೨೨ | ೪,೯೧,೮೨,೦೦೧ |
| ೧೯೯೬-೯೭ | ೪,೧೧,೪೮,೩೮೦ | ೭೬,೪೪,೨೬೫ | ೪,೮೭,೯೨,೬೪೫ |
| ೧೯೯೭-೯೮ | ೫,೦೭,೪೮,೫೨೭ | ೮೧,೬೫,೫೪೨ | ೫,೮೯,೧೪,೦೬೯ |
| ೧೯೯೮-೯೯ | ೫,೪೫,೯೪,೯೬೭ | ೮೮,೧೮,೮೭೧ | ೬,೩೪,೧೩,೮೩೮ |
| ೧೯೯೯-೨೦೦೦ | ೬,೧೮,೮೪,೩೧೮ | ೧೨,೪೦,೮೨೭೬ | ೭,೪೨,೯೨,೫೮೪ |
| ೨೦೦೦-೦೧ | ೬,೨೨,೭೭,೫೯೯ | ೧,೨೪,೯೪,೦೦೨ | ೭,೪೭,೭೧,೬೦೧ |
| ೨೦೦೧-೦೨ | ೭,೧೬,೬೦,೧೩೬ | ೧,೫೮,೪೧,೮೫೬ | ೮,೭೫,೦೧,೯೯ |

**ಕೋಷ್ಟಕ ೯. ೧೮ ಮೋಟಾರು ವಾಹನ ಕಾಯ್ದೆ ೧೯೮೮ರ ಅಡಿಯಲ್ಲಿ ವಸೂಲಿ ಮಾಡಿದ ದಂಡದ ವಿವರ**

| ವರ್ಷ | ಸೆಕ್ಷನ್ ೬೮ರ ಅಡಿ ದಂಡ ವಸೂಲಿ | ಸೆಕ್ಷನ್ ೨೦೦ರ ಅಡಿ ದಂಡ ವಸೂಲಿ | ಸೆಕ್ಷನ್ ೧೯೨ರ ಅಡಿ ನ್ಯಾಯಾಲಯದಲ್ಲಿ ದಂಡ ವಸೂಲಿ | ಒಟ್ಟು ದಂಡ ವಸೂಲಾತಿ |
|---|---|---|---|---|
| ೧ | ೨ | ೩ | ೪ | ೫ |
| ೧೯೮೭-೮೮ | ೧,೩೫,೪೬೦ | – | – | ೧,೩೫,೪೬೦ |
| ೧೯೮೮-೮೯ | ೪,೯೨,೮೧೫ | – | – | ೪,೯೨,೮೧೫ |
| ೧೯೮೯-೯೦ | ೨,೧೮,೫೩೯ | – | – | ೨,೧೮,೫೩೦ |
| ೧೯೯೦-೯೧ | ೩,೦೭,೮೬೧ | – | – | ೩,೦೭,೮೬೧ |
| ೧೯೯೧-೯೨ | ೨,೪೯,೨೩೫ | ೬೩,೩೦೫ | ೩,೨೭೦ | ೩,೧೫,೮೧೦ |
| ೧೯೯೨-೯೩ | ೩,೬೩,೫೪೪ | ೧,೮೬,೧೨೦ | ೨೪,೩೮೫ | ೫,೭೪,೦೪೯ |
| ೧೯೯೩-೯೪ | ೨,೯೨,೨೭೦ | ೨,೪೬,೨೧೦ | ೧೯,೬೦೦ | ೫,೫೮,೦೮೦ |

| ೧ | ೨ | ೩ | ೪ | ೫ |
|---|---|---|---|---|
| ೧೯೯೪–೯೫ | ೩,೯೯,೨೧೫ | ೩,೭೧,೧೬೫ | ೨೧,೭೮೦ | ೭,೯೨,೧೬೦ |
| ೧೯೯೫–೯೬ | ೨,೧೨,೦೦೫ | ೨,೧೫,೫೯೫ | ೧,೨೯,೪೦೫ | ೫,೫೭,೦೦೫ |
| ೧೯೯೬–೯೭ | ೧,೩೯,೩೭೫ | ೩,೦೪,೧೫೦ | ೧,೨೭,೮೮೫ | ೫,೭೧,೪೧೦ |
| ೧೯೯೭–೯೮ | ೪೭,೩೭೦ | ೫,೨೯,೮೫೦ | ೧,೭೨,೯೬೦ | ೭,೫೦,೧೮ |
| ೧೯೯೮–೯೯ | ೧೧,೫೦೦ | ೬,೬೩,೦೫೦ | ೧,೩೯,೦೨೫ | ೮,೧೩,೫೭೫ |
| ೧೯೯೯–೨೦೦೦ | – | ೧,೪೭,೭೦೫ | ೪,೩೫,೫೧೦ | ೧೮,೫೩,೨೧೫ |
| ೨೦೦೦–೦೧ | ೧೮,೫೦೦ | ೧೩,೧೬,೬೪೭ | ೨,೮೬,೧೮೫ | ೧೬,೨೧,೩೩೨ |
| ೨೦೦೧–೦೨ | ೩೮,೦೦೦ | ೨೨,೮೨,೧೬೦ | ೪,೫೫,೮೪೦ | ೨೭,೭೬,೦೦೦ |

# ವಿದ್ಯುತ್ ತೆರಿಗೆ

## ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಆಗಸ್ಟ್ ಒಂದು, ೧೯೯೯ರ ತನಕ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಎಂದೇ ಜನಪ್ರಿಯವಾಗಿದ್ದ ಈ ಸಂಸ್ಥೆ ಮೇಲ್ಕಂಡ ದಿನಾಂಕದಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಎಂದು ಪುನರ್ನಾಮಕರಣಗೊಂಡಿತು. ಮಂಡ್ಯ ವಿಭಾಗದ ಈ ಕಚೇರಿಯು ೧೯೬೦ರಲ್ಲಿ ಪ್ರಾರಂಭವಾಯಿತು. ಕಾರ್ಯ ನಿರ್ವಾಹಕ ಅಭಿಯಂತರರು ಇದರ ಅಧಿಕಾರಿಯಾಗಿರುತ್ತಾರೆ. ೧೯೯೩ರಲ್ಲಿ ಜಿಲ್ಲೆಯ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯನ್ನು ಮಂಡ್ಯ ಹಾಗೂ ಪಾಂಡವಪುರಗಳೆಂದು ಎರಡು ವಿಭಾಗಗಳನ್ನಾಗಿ ವಿಭಜಿಸಲಾಯಿತು. ಪಾಂಡವಪುರ ವಿಭಾಗಕ್ಕೆ ಪಾಂಡವಪುರವು ಸ್ಥಾನೀಯ ಕಚೇರಿಯಾಗಿದ್ದು, ಪಾಂಡವಪುರ, ಶ್ರೀರಂಗಪಟ್ಟಣ, ಕೆ.ಆರ್.ಪೇಟೆ, ಹಾಗೂ ನಾಗಮಂಗಲ ತಾಲೂಕುಗಳನ್ನು ಒಳಗೊಂಡಿರುತ್ತದೆ. ಮಂಡ್ಯ ವಿಭಾಗದ ಸ್ಥಾನೀಯ ಕಚೇರಿ ಮಂಡ್ಯದಲ್ಲಿದ್ದು, ಮಂಡ್ಯ, ಮಳವಳ್ಳಿ ಹಾಗೂ ಮದ್ದೂರು ತಾಲೂಕುಗಳನ್ನು ಒಳಗೊಂಡಿರುತ್ತದೆ.

ಮಂಡ್ಯ ವಿಭಾಗಕ್ಕೆ ತೊರೆಕಾಡನಹಳ್ಳಿಯ ೨೨೦ ಕೆ.ವಿ. (ಕಿಲೋ ವೋಲ್ಟ್) ವಿದ್ಯುತ್ ಸ್ವೀಕರಣಾ ಕೇಂದ್ರ ಹಾಗೂ ೨೨೦ ಕೆ.ವಿ.ಎಸ್.ಅರ್.ಎಸ್.ಹೂಟಗಹಳ್ಳಿ ಮೈಸೂರು ಸ್ವೀಕರಣಾ ಕೇಂದ್ರಗಳಿಂದ ವಿದ್ಯುತ್ ಸರಬರಾಜಾಗುತ್ತಿದ್ದು, ಮಂಡ್ಯ ವಿಭಾಗದಲ್ಲಿ ೬೬:೧೧ ಕೆ.ವಿ.ವಿದ್ಯುತ್ ವಿತರಣಾ ಕೇಂದ್ರಗಳು, ಮಂಡ್ಯ ಇಂಡಸ್ಟ್ರಿಯಲ್ ಎಂ.ಯು.ಎಸ್.ಎಸ್. ಮಂಡ್ಯ, ಮದ್ದೂರು, ಕೊಪ್ಪ, ದುಂಡನಹಳ್ಳಿ, ಕೆ.ಎಂ.ದೊಡ್ಡಿ, ಮಳವಳ್ಳಿ ಹಾಗೂ ಕಿರುಗಾವಲುಗಳಲ್ಲಿರುವ ವಿದ್ಯುತ್ ವಿತರಣಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.

ಮಂಡ್ಯ ವಿಭಾಗದ ವ್ಯಾಪ್ತಿಗೆ ಒಳಪಡುವ ಸ್ಥಾವರಗಳ ವಿವರಗಳು ಜೂನ್ ೨೦೦೦ರಲ್ಲಿದ್ದಂತೆ ಈ ಕೆಳಕಂಡಂತೆ ಇದೆ.

೧. ಎಲ್.ಟಿ.೧(ಗೃಹಬಳಕೆ) – ೧,೦೧,೫೬೧

೨. ಎಲ್.ಟಿ.೨ (ಸರ್ವ ವಿದ್ಯುತ್) ೧೨೧೭೯

೩. ವಾಣಿಜ್ಯ ಎಲ್.ಟಿ.೩ – ೧೬,೪೩೨

೪. ಎಲ್.ಟಿ.೪– ಕುಡಿಯುವ ನೀರು ೧,೧೩೭

೫. ಎಲ್.ಟಿ.೪ಳ– ನೀರಾವರಿ ಪಂಪ್ ಸೆಟ್ – ೧೭,೧೬೬

೬. ಎಲ್.ಟಿ.೫– ಕೈಗಾರಿಕೆ– ೬೫೨೦

೭. ದಾರಿದೀಪ ೬,೫೫೫

೮. ಎಲ್.ಟಿ.(ಏತ ನೀರಾವರಿ) –೯

೯. ಎಚ್.ಟಿ.ವಿ. ಬೃಹತ್ ಕೈಗಾರಿಕೆ ೧೯

೧೦. ಭಾಗ್ಯಜ್ಯೋತಿ ೩೨,೩೧೦

**ಯೋಜನೆಗಳ ವಿವರ :** ಮಂಡ್ಯ ವಿಭಾಗದ ಎಲ್ಲಾ ಮುಖ್ಯಗ್ರಾಮಗಳು (ಆರ್.ಇ.ಸಿ.) ವಿದ್ಯುದೀಕರಣಗೊಂಡಿವೆ. ಹಿಂದುಳಿದ ವರ್ಗಗಳ ಗಂಗಾ ಕಲ್ಯಾಣ ಯೋಜನೆ, ನೂರು ಬಾವಿ ಯೋಜನೆ ಹಾಗೂ ವಿಶೇಷ ಘಟಕ ಯೋಜನೆಗಳನ್ವಯ ನೀರಾವರಿ ಪಂಪುಸೆಟ್ಟುಗಳನ್ನು ವಿದ್ಯುದೀಕರಿಸಲಾಗಿದೆ. ಅಲ್ಲದೆ, ಭಾಗ್ಯಜ್ಯೋತಿ, ಕುಟೀರಜ್ಯೋತಿ, ಯೋಜನೆಗಳನ್ವಯ ಬಡ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ.

**ಕೋಷ್ಟಕ ೯.೧೯ ವಿಭಾಗದ ಕಂದಾಯ ವಸೂಲಿ (ಲಕ್ಷಗಳಲ್ಲಿ)**

| ೧೯೯೪–೯೫ | ೧೯೯೫–೯೬ | ೧೯೯೬–೯೭ | ೧೯೯೭–೯೮ | ೧೯೯೮–೯೯ | ೧೯೯೯–೨೦೦೦ | ೨೦೦೦–೦೧ | ೨೦೦೧–೦೨ |
|---|---|---|---|---|---|---|---|
| ೩೧೨೦.೨೬ | ೩೨೮೬.೧೮ | ೩೨೩೧.೧೩ | ೪೩೨೪.೩೮ | ೬೮೬೭.೪೫ | ೪೧೫೩.೬೮ | ೪೬೭೨.೧೯ | ೪೮೩೩.೯೦ |

**ಕೋಷ್ಟಕ ೯.೨೦ ೧೯೬೦–೬೧ ರಿಂದ ೧೯೯೯–೨೦೦೦ದವರೆಗೆ ಜಿಲ್ಲೆಯ ವಿದ್ಯುತ್ ಬಳಕೆಯ ವಿವರ**

**(ಯೂನಿಟ್‌ಗಳಲ್ಲಿ)**

| ವರ್ಷಗಳು | ಗೃಹಬಳಕೆ | ವಾಣಿಜ್ಯ | ಕೈಗಾರಿಕೆ ಶಕ್ತಿ | ದಾರಿದೀಪ | ನೀರಾವರಿ | ಒಟ್ಟು |
|---|---|---|---|---|---|---|
| ೧೯೬೦–೬೧ | ೭೮೯೨೮೮೮ | ೨೯೫೮೧೧೫ | ೧೨೬೫೮೪೧೯ | ೬೯,೩೬೫ | ೨೨,೧೦,೩೬೫ | ೨,೫೭,೮೯,೧೫೨ |
| ೧೯೭೦–೭೧ | ೧೦೮೬೧೯೯೮ | ೩೧೦೪೧೧೨ | ೧೮೮೧೨೩೧೩ | ೧,೧೦,೧೫೨ | ೨೩,೧೮,೩೫೪ | ೩,೫೨,೦೬,೯೨೯ |
| ೧೯೮೦–೮೧ | ೧೫೮೪೧೧೦೬ | ೩೨೯೬೧೯ | ೨೦೦೧೫೪೧೫ | ೨,೫೪,೨೪೩ | ೩೯,೬೫,೪೦೧ | ೪,೩೩,೭೨,೨೭೪ |
| ೧೯೯೦–೯೧ | ೧೯೮೦೨೪೦೨ | ೩೩೦೧೬೦೦ | ೨೪೨೨೨೧೦೬ | ೩,೦೧,೩೧೪ | ೪೨,೭೩,೪೦೪ | ೫,೧೯,೦೦,೮೨೬ |
| ೧೯೯೫–೯೬ | ೨೭೩೭೮೯೦೩ | ೩೪೦೮೮೮೧ | ೨೮೯೫೨೪೨೬ | ೩,೫೦,೩೭೮ | ೫೩,೬೩,೮೦೬ | ೬,೫೪,೪೬,೩೯೪ |
| ೧೯೯೬–೯೭ | ೨೯೩೯೧೧೧೭ | ೩೪೩೨೧೮೮ | ೨೬೬೬೨೯೭೮ | ೩,೯೯,೯೬೨ | ೮೨,೭೨,೩೬೫ | ೬,೮೧,೫೮,೬೧೦ |
| ೧೯೯೭–೯೮ | ೩೧೫೦೭೭೮೯ | ೩೬೧೧೭೦೩ | ೨೩೨೫೧೫೯೭ | ೪,೫೦,೩೭೮ | ೮೮,೩೬,೪೫೨ | ೬,೭೬,೫೭,೯೧೯ |
| ೧೯೯೮–೯೯ | ೩೨೦೩೪೧೧೪ | ೩೭೫೮೩೧೬ | ೨೩೧೩೧೪೭೦ | ೬,೩೯,೬೭೬ | ೮೯,೩೯,೩೬೯ | ೬,೮೪,೯೨,೯೪೫ |
| ೧೯೯೯–೨೦೦೦ | ೩೪೪೨೨೦೧೨ | ೩೯೦೧೫೦೨ | ೨೪೦೧೧೨೬೬ | ೭,೮೨,೩೬೫ | ೧,೩೧,೧೨,೧೩೫ | ೭,೬೨,೨೯,೨೮೦ |
| ೨೦೦೦–೨೦೦೧ | ೩೫೪೨೨೧೬೦ | ೪೦೦೭೫೦೦ | ೨೮೦೧೨೩೮೨ | ೮೦೨೫೪೯ | ೧೪೭೧೬೨೭೬ | ೮೭೨೩೦೨೪೨ |
| ೨೦೦೧–೨೦೦೨ | ೩೮೫೧೨೦೯೦ | ೪೧೨೮೯೨೩ | ೨೮೪೫೨೧೬೭ | ೮೧೩೬೭೮ | ೧೪೯೧೮೨೦೦ | ೮೮೧೩೨೫೨೬ |

**ಅರಣ್ಯ ಅಭಿವೃದ್ಧಿ ತೆರಿಗೆ :** ಮಹತ್ವದ ರಾಷ್ಟ್ರೀಯ ಆಸ್ತಿಯಾದ ಅರಣ್ಯಗಳು ಸರಕಾರಕ್ಕೆ ತೆರಿಗೆ ತರುವ ಮುಖ್ಯ ಮೂಲಗಳಾಗಿವೆ. ಮಂಡ್ಯ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯು ೧೯೭೪ರಲ್ಲಿ ಪ್ರಾರಂಭವಾಯಿತು. ಈ ಇಲಾಖೆಯ ವ್ಯಾಪ್ತಿಗೆ ಇಡೀ ಜಿಲ್ಲೆ ಒಳಪಡುತ್ತದೆ. ವಿಭಾಗವನ್ನು ಮಂಡ್ಯ ಹಾಗೂ ನಾಗಮಂಗಲಗಳೆಂದು ಎರಡು ಉಪವಿಭಾಗಗಳಾಗಿ ವಿಂಗಡಿಸಲಾಗಿದೆ. ಮಂಡ್ಯ ಉಪವಿಭಾಗದ ವ್ಯಾಪ್ತಿಗೆ ಮಂಡ್ಯ, ಮದ್ದೂರು, ಮಳವಳ್ಳಿ, ಹಾಗೂ ಶ್ರೀರಂಗಪಟ್ಟಣ ತಾಲೂಕುಗಳೂ ನಾಗಮಂಗಲ ಉಪವಿಭಾಗದ ವ್ಯಾಪ್ತಿಗೆ ನಾಗಮಂಗಲ, ಪಾಂಡವಪುರ ಮತ್ತು ಕೃಷ್ಣರಾಜ ಪೇಟೆ ತಾಲೂಕುಗಳೂ ಸೇರಿವೆ.

ಜಿಲ್ಲಾ ಅರಣ್ಯ ಕಚೇರಿಯು ಉಪ ಅರಣ್ಯ ಸಂರಕ್ಷಣಾಧಿಕಾರಿಯ ಆಡಳಿತಕ್ಕೊಳಪಟ್ಟಿದ್ದು ಅವರ ಸಹಾಯಕ್ಕಾಗಿ ಒಬ್ಬ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಇರುತ್ತಾರೆ. ತಾಲೂಕು ಮಟ್ಟದಲ್ಲಿ ವಲಯ ಅರಣ್ಯಾಧಿಕಾರಿ ಕಾರ್ಯ ನಿರ್ವಹಿಸುತ್ತಾರೆ. ಇಲಾಖೆಯು ಕರ್ನಾಟಕ ಅರಣ್ಯ ಕಾಯ್ದೆ ಹಾಗೂ ಕರ್ನಾಟಕ ಅರಣ್ಯ ಕಾನೂನು ೧೯೬೩: ಕರ್ನಾಟಕ ವನ್ಯಪ್ರಾಣಿ ಸಂರಕ್ಷಣಾ ಕಾಯ್ದೆ ೧೯೭೨: ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ ೧೯೭೬ ಹಾಗೂ ಅರಣ್ಯ ಸಂರಕ್ಷಣಾ ಕಾಯ್ದೆ ೧೯೮೦ ಗಳಡಿ ಚಾಲ್ತಿಯಲ್ಲಿರುವ ಹಾಗೂ ಕಾಲಕಾಲಕ್ಕೆ ಪರಿಷ್ಕೃತಗೊಳ್ಳುವ ನಿಯಮಾವಳಿಗಳಡಿ ಕಾರ್ಯನಿರ್ವಹಿಸುತ್ತದೆ.

## ಕೇಂದ್ರ ತೆರಿಗೆಗಳು

### ಕೇಂದ್ರ ಅಬಕಾರಿ ಶುಲ್ಕ

ಕೇಂದ್ರ ಅಬಕಾರಿ ಶುಲ್ಕವನ್ನು ೧೯೪೪ರ ಕೇಂದ್ರ ಅಬಕಾರಿ ಮತ್ತು ಉಪ್ಪು ಶಾಸನ ನಿಯಮಗಳ ಪ್ರಕಾರ ಸಂಗ್ರಹಿಸಲಾಗುತ್ತದೆ. ಜಿಲ್ಲೆಯ ಕೇಂದ್ರ ಅಬಕಾರಿ ಕಚೇರಿಯು ವಲಯ ಕಚೇರಿಯಾಗಿದ್ದು, ಮಂಡ್ಯ ವಲಯಕ್ಕೆ ಕೇಂದ್ರ ಅಬಕಾರಿ ಸೂಪರಿಂಟೆಂಡೆಂಟರು ಮುಖ್ಯಸ್ಥರಾಗಿರುತ್ತಾರೆ. ಜಿಲ್ಲೆಯಲ್ಲಿ ಈ ವಲಯವು ೨೧-೧೨-೧೯೭೩ರಂದು ಅಸ್ತಿತ್ವಕ್ಕೆ ಬಂದಿರುತ್ತದೆ. ಶ್ರೀರಂಗಪಟ್ಟಣದ ಬೆಳಗೊಳ ಹೋಬಳಿಯನ್ನು ಹೊರತುಪಡಿಸಿದಂತೆ ಇಡೀ ಜಿಲ್ಲೆ ಈ ವಲಯದ ವ್ಯಾಪ್ತಿಗೊಳಪಡುತ್ತದೆ. ಈ ವಲಯದ, ವ್ಯಾಪ್ತಿ ೧೪,೮೯೦ ಚದರ ಮೈಲಿಗಳಾಗಿದೆ.

ಕೇಂದ್ರ ಅಬಕಾರಿ ಶುಲ್ಕ ವಿಧಿಸಲ್ಪಡುವ ಪದಾರ್ಥಗಳೆಂದರೆ ಸಕ್ಕರೆ, ಕಾಕಂಬಿ, ರಾಸಾಯನಿಕ ಪದಾರ್ಥ, ಆಯುರ್ವೇದ ಔಷದಿ, ಟಿ.ವಿ., ವಿದ್ಯುತ್ ಪ್ರವಾಹಕ (ಕೇಬಲ್ಸ್), ಪ್ಲಾಸ್ಟಿಕ್, ಬೆಂಕಿಪೊಟ್ಟಣ, ಉಕ್ಕು ಹಾಗೂ ಸ್ಟೀಲ್ ಪದಾರ್ಥ, ಸಿಮೆಂಟ್ ಪದಾರ್ಥ, ಇಂಗಾಲಾಮ್ಲ, ಈಥೈಲ್ ಆಲ್ಕೋಹಾಲ್, ಮುದ್ರಿತ ಸರ್ಕ್ಯೂಟ್ ಬೋರ್ಡ್ ಹಾಗೂ ಆಸಿಡ್ ಎಣ್ಣೆಗಳಾಗಿದ್ದು, ಅವುಗಳಲ್ಲಿ ಸಕ್ಕರೆ, ಕಾಕಂಬಿ, ಟಿ.ವಿ., ಆಯುರ್ವೇದ ಔಷಧಿ ಹಾಗೂ ರಾಸಾಯನಿಕ ಪದಾರ್ಥಗಳು ಇಲಾಖೆಗೆ ಸಿಂಹಪಾಲಿನ ತೆರಿಗೆ ಆದಾಯ ನೀಡುತ್ತವೆ.

ಈ ಎಲ್ಲಾ ಪದಾರ್ಥಗಳಿಂದ ೧೯೯೪-೯೫ ರಿಂದ ೧೯೯೬-೯೭ರವರೆಗೆ ವಾರ್ಷಿಕ ಸರಾಸರಿ ಸುಮಾರು ೨೧ ಕೋಟಿ ರೂ.ತೆರಿಗೆ ವಸೂಲಾಗುತ್ತಿದ್ದು, ಅದು ೧೯೯೭-೯೮ರಲ್ಲಿ ೧೩.೨೫ ಕೋಟಿಗೆ ಹಾಗೂ ೧೯೯೮-೯೯ರ ಜನವರಿವರೆಗೆ ೧೧.೨೫ ಕೋಟಿಗೆ ಇಳಿಮುಖವಾಯಿತು. ವಲಯದ ಹಲವು ಘಟಕಗಳು ಮುಚ್ಚಲ್ಪಟ್ಟು ಆರ್ಥಿಕ ಮುಗ್ಗಟ್ಟು ಎದುರಾದ್ದರಿಂದ ವಾರ್ಷಿಕ ತೆರಿಗೆ ವಸೂಲಾತಿಯ ಇಳಿಮುಖಕ್ಕೆ ಕಾರಣವಾಗಿದೆ.

### ಕೇಂದ್ರ ವರಮಾನ ತೆರಿಗೆ

ಜಿಲ್ಲೆಯಲ್ಲಿ ವರಮಾನ ತೆರಿಗೆ ಇಲಾಖೆಯು ೧-೫-೧೯೭೦ರಲ್ಲಿ ಕಾರ್ಯಾರಂಭಗೊಂಡಿತು. ಮೊದಲಿಗೆ ಮೈಸೂರಿನ ವರಮಾನ ತೆರಿಗೆ ಇಲಾಖೆಯ ಆಡಳಿತಕ್ಕೊಳಪಟ್ಟಿದ್ದ ಈ ಇಲಾಖೆಯಲ್ಲಿ ಪ್ರಸ್ತುತ ೧೪ ಮಂದಿ ನೌಕರರು, ಇಬ್ಬರು ಅಧಿಕಾರಿಗಳ ಉಸ್ತುವಾರಿಯಲ್ಲಿ ಜಿಲ್ಲೆಯ ವರಮಾನ ಹಾಗೂ ಆಸ್ತಿ ತೆರಿಗೆ ಆಡಳಿತವನ್ನು ನಡೆಸುತ್ತಿದ್ದಾರೆ. ಜನವರಿ ಒಂದು, ೧೯೯೯ರಲ್ಲಿ ಇದ್ದಂತೆ ಜಿಲ್ಲೆಯಲ್ಲಿ ೧೩,೫೯೫ ಜನ ವರಮಾನ ತೆರಿಗೆ ಪಾವತಿ ಮಾಡುವವರಿದ್ದು, ೧೯೯೭-೯೮ನೇ ಸಾಲಿಗೆ ಒಟ್ಟು ೩೪೮.೮೦ ಲಕ್ಷ ರೂ.ಗಳು ವಸೂಲಾಗಿದ್ದಿತು.

## ಕೋಷ್ಟಕ ೯.೨೧ ಮಂಡ್ಯ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯ ವತಿಯಿಂದ ಬೇರೆ ಬೇರೆ ಬಾಬ್ತುಗಳಿಂದ ಸರ್ಕಾರಕ್ಕೆ ಸಂಗ್ರಹವಾದ ಆದಾಯದ ವಿವರ

| ತಾಲೂಕು | ವರ್ಷ | ೦೯-ಅರಣ್ಯ ಉತ್ಪನ್ನಗಳಿಂದ ಸಂದಾಯವಾದ | ನೀಲಗಿರಿ ನೆಡು ತೋಪುಗಳು | ೦೨-ಉರುವಲು ಮತ್ತು ಇದ್ದಿಲು | ೦೫-ಇತರೆ ಕಿರು ಅರಣ್ಯ ಉತ್ಪನ್ನಗಳು | ೦೨-ದಂಡ ಮತ್ತು ಮುಟ್ಟುಗೋಲು | ೦೫-ಅವಧಿ ಮೀರಿ ಬಾಕಿ ಉಳಿದ ರಾಜಸ್ವ | ಇತರೆ ಜಮೆಗಳು |
|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ |
| ಮಂಡ್ಯ | ೯೪-೯೫ | – | ೨೫೧೫೨೫-೧೫ | ೫೨೦೬೫-೦೦ | ೧೧೦೦-೦೦ | ೪೦೦೮೩-೦೦ | ೩೬೮-೦೦ | ೪೭೫೮೮-೦೦ |
| | ೯೫-೯೬ | – | ೩೯೭೮೦೩-೦೦ | ೭೯೦೫-೦೦ | ೧೪೫೦-೦೦ | ೧೦೯೨೩-೦೦ | ೭೦೫೬-೦೦ | ೭೯೫೭೨-೦೦ |
| | ೯೬-೯೭ | – | ೨೦೨೪೪೫-೦೦ | ೨೨೨೪-೦೦ | – | ೪೨೧೪೦-೦೦ | ೬೨೮-೦೦ | ೬೪೨೨೫-೦೦ |
| | ೯೭-೯೮ | ೨೧೫೦ | ೩೮೩೨೫-೦೦ | ೧೫೯೮೫-೦೦ | ೧೪೭೫-೦೦ | ೫೦೫೮೫-೦೦ | – | ೩೫೩೧೩-೦೦ |
| ಮದ್ದೂರು | ೯೪-೯೫ | – | – | ೫೧೯೪೦-೦೦ | ೩೪೫೦-೦೦ | ೩೨೯೦-೦೦ | – | ೨೫೭೧-೦೦ |
| | ೯೫-೯೬ | – | ೯೧೬-೦೦ | ೩೯೨೯೦-೦೦ | ೮೦೦೦-೦೦ | ೬೭೦೦-೦೦ | ೨೪೪-೦೦ | ೨೬೬೬೦-೦೦ |
| | ೯೬-೯೭ | ೩೬೮೫-೦೦ | – | ೪೨೭೫-೦೦ | ೫೦೨೫-೦೦ | ೨೧೫೦೦-೦೦ | – | ೧೫೬೯೧-೦೦ |
| | ೯೭-೯೮ | – | – | ೪೪೩೦-೦೦ | ೫೯೫೫-೦೦ | ೩೧೨೦೦-೦೦ | – | ೨೯೦೩-೦೦ |
| ಮಳವಳ್ಳಿ | ೯೪-೯೫ | – | – | ೧೫೨೫೧-೦೦ | ೨೭೨೦-೦೦ | ೩೯೭೭೨-೦೦ | – | ೨೨೦೮೯-೨೦ |
| | ೯೫-೯೬ | – | – | ೮೧೮೭೦-೦೦ | ೨೭೦೦-೦೦ | ೨೪೨೫೦-೦೦ | – | ೩೧೬೯೨೯-೦೦ |
| | ೯೬-೯೭ | – | ೨೮೪೨೫-೦೦ | ೩೨೯೬೦-೦೦ | ೧೧೨೫-೦೦ | ೨೭೦೫೦-೦೦ | – | ೨೨೯೧೦೫-೦೦ |
| | ೯೭-೯೮ | – | – | ೧೧೩೦೦-೦೦ | ೪೪೨೫-೦೦ | ೪೦೫೦೦-೦೦ | – | ೧೬೮೯೧೯-೦೦ |
| ನಾಗಮಂಗಲ | ೯೪-೯೫ | – | ೩೨೦೨-೫೦ | ೧೦೮೨೯-೦೦ | – | ೩೮೧೯೨-೭೫ | – | ೨೬೨೮-೦೦ |
| | ೯೫-೯೬ | – | ೬೦೫-೦೦ | ೧೯೭೦-೦೦ | ೯೦೦-೦೦ | ೮೧೨೨-೭೫ | – | ೩೦೫೪೬-೦೦ |

| ೧ | ೨ | ೩ | ೪ | ೫ | ೬ | ೭ | ೮ | ೯ |
|---|---|---|---|---|---|---|---|---|
| | ೯೬–೯೭ | – | ೨೫೧೪೦೫–೦೦ | – | ೧೩೦೦–೦೦ | ೨೧೬೧೬–೦೦ | – | ೨೫೪೬೩–೦೦ |
| | ೯೭–೯೮ | – | ೧೧೯೫೫೯–೦೦ | ೩೧೩೦–೦೦ | ೨೦೫೦–೦೦ | ೧೯೫೩೦–೦೦ | – | ೧೩೫೬–೦೦ |
| ಪಾಂಡವಪುರ | ೯೪–೯೫ | – | ೩೦೯೮೪–೦೦ | ೧೯೫೭೩–೦೦ | ೫೦೫–೦೦ | ೧೧೦೯೪–೦೦ | – | ೧೦೯೦–೦೦ |
| | ೯೫–೯೬ | – | – | ೨೨೬೧೫–೦೦ | ೪೬೦–೦೦ | ೫೫೫೦–೦ | – | ೬೦೭೮–೦೦ |
| | ೯೬–೯೭ | ೩೧೫೦–೦೦ | ೧೬೩೭೯೦–೦೦ | ೪೪೭೨೦–೦೦ | – | ೩೩೫೭೦–೦೦ | – | ೬೫೧೫–೦೦ |
| | ೯೭–೯೮ | – | ೩೩೧೬೦–೦೦ | ೨೫೩೦–೦೦ | ೧೩೫೦–೦೦ | ೧೯೪೫೦–೦೦ | ೩೦–೦೦ | ೨೬೮೬–೦೦ |
| ಶ್ರೀರಂಗಪಟ್ಟಣ | ೯೪–೯೫ | – | ೫೦೪೪೮–೦೦ | ೧೬೭೯೫–೦೦ | ೩೩೦೦–೦೦ | ೮೬೫೦–೦೦ | – | ೫೧೦–೦೦ |
| | ೯೫–೯೬ | – | ೮೬೭೩೦–೦೦ | ೮೫೩೨೦–೦೦ | ೨೩೦೦–೦೦ | ೨೦೦೦–೦೦ | ೧೧೨೬–೦೦ | ೧೩೯೯೦–೦೦ |
| | ೯೬–೯೭ | – | ೩೨೬೦೧–೦೦ | ೧೦೬೨೮೦–೦೦ | ೩೯೦೦–೦೦ | ೨೬೦೦–೦೦ | – | ೧೨೩೫೩–೦೦ |
| | ೯೭–೯೮ | ೮೦೦–೦೦ | – | – | ೩೬೦೦–೦೦ | ೨೨೫೦೦–೦೦ | – | ೫೭೦೫–೦೦ |
| ಕೃಷ್ಣರಾಜಪೇಟೆ | ೯೪–೯೫ | – | ೨೪೬೦–೦೦ | ೧೧೩೨೮–೦೦ | ೮೨೫–೦೦ | ೧೦೦೮೨–೦೦ | – | ೫೧೧೧–೦೦ |
| | ೯೫–೯೬ | – | ೧೧೯೮–೦೦ | ೩೭೭೦–೦೦ | ೮೦೦–೦೦ | ೩೧೫೩–೦೦ | – | ೧೦೮೨೨–೦೦ |
| | ೯೬–೯೭ | – | ೪೬೩೦–೦೦ | ೧೮೩೨೦–೦೦ | ೧೬೫೦–೦೦ | ೧೨೧೩೮–೦೦ | – | ೮೯೬೯–೦೦ |
| | ೯೭–೯೮ | ೬೮೭೧–೦೦ | ೨೨೦೦–೦೦ | ೨೦೫೪೧–೦೦ | ೧೨೦೦–೦೦ | ೧೦೮೫೬–೦೦ | – | ೧೪೪೩–೦೦ |

ತೆರಿಗೆ ಆಡಳಿತ ಸುಗಮಗೊಳ್ಳಲು ಜಿಲ್ಲೆಯನ್ನು ವಾರ್ಡ್-೧ ಮತ್ತು ವಾರ್ಡ್-೨ ಎಂದು ವಿಭಜಿಸಲಾಗಿದ್ದು, ಎರಡೂ ಕಚೇರಿಗಳು ಮಂಡ್ಯ ನಗರದಲ್ಲಿಯೇ ಕಾರ್ಯ ನಿರ್ವಹಿಸುತ್ತಿವೆ. ಅಲ್ಲದೆ ಈ ಇಲಾಖೆಯು ಆಸ್ತಿ ತೆರಿಗೆ ಮತ್ತು ಕಾಣಿಕೆ ತೆರಿಗೆಯ ಉಸ್ತುವಾರಿಯನ್ನೂ ವಹಿಸಿಕೊಂಡಿದೆ. ಈ ಮುಂದಿನ ಕೋಷ್ಟಕದಲ್ಲಿ ೧೯೮೭-೮೮ ರಿಂದ ೨೦೦೧-೨೦೦೨ರವರೆಗೆ ಜಿಲ್ಲೆಯಲ್ಲಿ ವಸೂಲಾಗಿರುವ ವರಮಾನ ತೆರಿಗೆ, ಆಸ್ತಿ ತೆರಿಗೆ, ಹಾಗೂ ಕಾಣಿಕೆ ತೆರಿಗೆಗಳ ವಿವರಗಳನ್ನು ನೀಡಲಾಗಿದೆ.

**ಕೋಷ್ಟಕ ೯.೨೨ ಜಿಲ್ಲೆಯಲ್ಲಿ ವಸೂಲಾಗಿರುವ ವಿವಿಧ ತೆರಿಗೆಗಳ ವಿವರ** (ಲಕ್ಷ ರೂ.ಗಳಲ್ಲಿ)

| ಆರ್ಥಿಕ ವರ್ಷ | ಆದಾಯ ತೆರಿಗೆ | ಸಂಪತ್ತು ತೆರಿಗೆ | ಕಾಣಿಕೆ ತೆರಿಗೆ |
|---|---|---|---|
| ೧೯೮೭-೮೮ | ೪೧.೮೪ | ೦.೧೮ | ೦.೦೮೪ |
| ೧೯೮೮-೮೯ | ೭೭.೧೯ | ೦.೨೦ | ೦.೦೯೧ |
| ೧೯೮೯-೯೦ | ೯೯.೫೯ | ೦.೨೧ | ೦.೦೯೮ |
| ೧೯೯೦-೯೧ | ೧೨೬.೫೩ | ೦.೨೫ | ೦.೦೧೧ |
| ೧೯೯೧-೯೨ | ೧೨೬.೧೦ | ೦.೨೯ | ೦.೦೧೩ |
| ೧೯೯೨-೯೩ | ೧೬೦.೨೦ | ೦.೨೦ | ೦.೦೧೬ |
| ೧೯೯೩-೯೪ | ೧೧೩.೫೭ | ೦.೨೪ | ೦.೦೧೨ |
| ೧೯೯೪-೯೫ | ೧೭೭.೮೯ | ೦.೧೮ | ೦.೦೧೪ |
| ೧೯೯೫-೯೬ | ೩೧೫.೫೩ | ೦.೩೮ | ೦.೦೧೯ |
| ೧೯೯೬-೯೭ | ೩೬೮.೪೯ | ೦.೧೧ | ೦.೦೨೦ |
| ೧೯೯೭-೯೮ | ೩೪೮.೪೦ | ೦.೩೮ | ೦.೦೨೫ |
| ೧೯೯೮-೯೯ | ೩೦೦.೦೦ | – | – |
| ೧೯೯೯-೨೦೦೦ | ೪೦೯.೦೦ | – | – |
| ೨೦೦೦-೦೧ | ೮೦೦ | – | – |
| ೨೦೦೧-೦೨ | ೯೦೦ | – | |

ಜಿಲ್ಲೆಯ ತೆರಿಗೆದಾರರು ಮಂಡ್ಯ ಕಚೇರಿಯಲ್ಲಿಯೇ ತೆರಿಗೆ ಪಾವತಿ ಮಾಡಬೇಕೆಂಬ ನಿಯಮವಿಲ್ಲದಿರುವುದರಿಂದ ತಾಲೂಕುವಾರು ಅಂಕಿ-ಅಂಶಗಳನ್ನು ನೀಡಲಾಗಿಲ್ಲ.

## ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿರುವ ಅಧಿಕಾರಿಗಳ ಪಟ್ಟಿ

| ಕ್ರ.ಸಂ. | ಜಿಲ್ಲಾಧಿಕಾರಿಗಳ ಹೆಸರು | ಅವಧಿ | |
|---|---|---|---|
| | ಶ್ರೀಯುತರಾದ | ಯಿಂದ | ವರೆಗೆ |
| ೧ | ೨ | ೩ | ೪ |
| ೧ | ಬಿ.ಎಸ್.ರಾಘವೇಂದ್ರರಾವ್ | ೧.೭.೧೯೩೯ | ೨೩.೧೦.೧೯೪೦ |
| ೨ | ಸಿ.ಎಂ.ರಣ್‌ಜೋದ್ ಸಿಂಗ್ | ೨೪.೧೦.೧೯೪೦ | ೧೬.೮.೧೯೪೨ |

| ೧ | ೨ | ೩ | ೪ |
|---|---|---|---|
| ೩ | ಮೀರ್ ಸಫ್ದಾರ್ ಅಹಮದ್ | ೧೭.೮.೧೯೪೨ | ೨೬.೯.೧೯೪೫ |
| ೪ | ಕೆ.ತಿಪ್ಪರುದ್ರಯ್ಯ | ೨೭.೯.೧೯೪೫ | ೯.೯.೧೯೪೬ |
| ೫ | ಕೆ.ಮಹಮ್ಮದ್ ಅಹಮದ್ | ೧೦.೯.೧೯೪೬ | ೯.೧.೧೯೪೯ |
| ೬ | ಕೆ.ಪಿ.ರಾಮನಾಥಯ್ಯ | ೧೦.೧.೧೯೪೯ | ೧೧.೧.೧೯೫೧ |
| ೭ | ಸಿ.ನರಸಿಂಹಮೂರ್ತಿ | ೧೨.೧.೧೯೫೧ | ೭.೩.೧೯೫೨ |
| ೮ | ಜಿ.ವಿ.ಕೆ.ರಾವ್ | ೮.೩.೧೯೫೨ | ೧೫.೫.೧೯೫೨ |
| ೯ | ಬಿ.ಬೀರಪ್ಪ | ೧೬.೫.೧೯೫೨ | ೨.೬.೧೯೫೪ |
| ೧೦ | ಡಿ.ಜೆ.ಬಾಲರಾಜ್ | ೭.೬.೧೯೫೪ | ೮.೮.೧೯೫೬ |
| ೧೧ | ಮಹಮ್ಮದ್ ರಹಮತ್ ಉಲ್ಲಾ | ೧೬.೮.೧೯೫೬ | ೪.೧೧.೧೯೫೭ |
| ೧೨ | ಬಿ.ಎಸ್.ಶ್ರೀಕಂಠಯ್ಯ | ೬.೧೧.೧೯೫೭ | ೧೩.೫.೧೯೫೯ |
| ೧೩ | ವಿ.ಹನುಮಂತಪ್ಪ | ೨೧.೫.೧೯೫೯ | ೨೯.೬.೧೯೬೧ |
| ೧೪ | ಮಣಿನಾರಾಯಣ ಸ್ವಾಮಿ | ೨೯.೬.೧೯೬೧ | ೨೩.೬.೧೯೬೨ |
| ೧೫ | ಕೆ.ಲಕ್ಷ್ಮಣರಾವ್ | ೬.೭.೧೯೬೨ | ೧೬.೮.೧೯೬೫ |
| ೧೬ | ಎಸ್.ನಂಜುಂಡಯ್ಯ | ೧೬.೮.೧೯೬೫ | ೧.೫.೧೯೬೮ |
| ೧೭ | ಟಿ.ಆರ್.ಸತೀಶ್ ಚಂದ್ರನ್ | ೨೯.೭.೧೯೬೮ | ೧೩.೧.೧೯೬೯ |
| ೧೮ | ವಿ.ಎಸ್.ಭಟ್ | ೨೬.೨.೧೯೬೯ | ೭.೧೨.೧೯೭೦ |
| ೧೯ | ಕೆ.ಲಕ್ಷ್ಮಣರಾವ್ | ೨೦.೧.೧೯೭೧ | ೧೮.೩.೧೯೭೧ |
| ೨೦ | ಜೆ.ಸಿ.ಲಿನ್ | ೨೫.೩.೧೯೭೧ | ೫.೪.೧೯೭೧ |
| ೨೧ | ಪಿ.ಪಿ.ಪ್ರಭು | ೧೫.೬.೧೯೭೨ | ೨೭.೮.೧೯೭೩ |
| ೨೨ | ಕೆ.ಕೆ.ಮಿಶ್ರಾ | ೬.೧೦.೧೯೭೩ | ೩.೩.೧೯೭೪ |
| ೨೩ | ಎಸ್.ಆರ್.ವಿಜಯ್ | ೪.೩.೧೯೭೪ | ೧೩.೯.೧೯೭೭ |
| ೨೪ | ಚಿರಂಜೀವಿ ಸಿಂಗ್ | ೧೦.೧೦.೧೯೭೭ | ೯.೪.೧೯೭೮ |
| ೨೫ | ಹೆಚ್.ಬಸವಯ್ಯ | ೧೦.೪.೧೯೭೮ | ೨೧.೪.೧೯೮೦ |
| ೨೬ | ಸಿ.ಕೆ.ನೀಲಕಂಠರಾಜ್ | ೨೧.೪.೧೯೮೦ | ೨೪.೧೧.೧೯೮೧ |
| ೨೭ | ನರಸಿಂಗರಾವ್ ಮದರ್ಕಲ್ | ೩೦.೧೧.೧೯೮೧ | ೫.೧೦.೧೯೮೨ |
| ೨೮ | ಎಸ್.ಎಂ.ಆಚಾರ್ಯ | ೬.೧೦.೧೯೮೨ | ೪.೭.೧೯೮೩ |
| ೨೯ | ಅ.ರಾ.ಚಂದ್ರಹಾಸಗುಪ್ತ | ೪.೭.೧೯೮೩ | ೧೫.೫.೧೯೮೫ |

| ೧ | ೨ | ೩ | ೪ |
|---|---|---|---|
| ೩೦. | ಐ.ದೇವೇಂದ್ರನ್ | ೨೩.೫.೧೯೮೫ | ೨೮.೫.೧೯೮೬ |
| ೩೧ | ಜೆ.ರಾಜು ಪ್ರೇಂಕುಮಾರ್ | ೨೯.೫.೧೯೮೬ | ೨೭.೯.೧೯೮೬ |
| ೩೨ | ಗು.ಕ.ಸಂಗಮೇಶ್ವರ | ೧೫.೧೦.೧೯೮೬ | ೧೫.೭.೧೯೮೭ |
| ೩೩ | ಪಿ.ವಿಜಯನ್ | ೨೦.೭.೧೯೮೭ | ೨೩.೩.೧೯೮೮ |
| ೩೪ | ಎಸ್.ಎಂ. ಜಾಮ್‌ದಾರ್ | ೨೪.೩.೧೯೮೮ | ೨೦.೭.೧೯೮೯ |
| ೩೫ | ಎಂ.ಎನ್.ವಿದ್ಯಾಶಂಕರ್ | ೨೦.೭.೧೯೮೯ | ೧೪.೫.೧೯೯೦ |
| ೩೬ | ಜೆ.ಡಿ.ಶೀಲಂ | ೧೭.೫.೧೯೯೦ | ೫.೬.೧೯೯೨ |
| ೩೭ | ಎ.ವೈ.ನಯಾಜ್ ಅಹಮದ್ | ೫.೬.೧೯೯೨ | ೨೮.೪.೧೯೯೩ |
| ೩೮ | ವೀರಭದ್ರಾಚಾರಿ | ೨೯.೪.೧೯೯೩ | ೩೦.೫.೧೯೯೫ |
| ೩೯ | ಕೆ.ಹೆಚ್.ಗೋಪಾಲಕೃಷ್ಣೇಗೌಡ | ೧.೬.೧೯೯೫ | ೧.೭.೧೯೯೮ |
| ೪೦ | ಸಂಜೀವ್ ಕುಮಾರ್ | ೧೬.೭.೧೯೯೮ | ೧೧.೩.೨೦೦೦ |
| ೪೧ | ಎಲ್.ಕೆ.ಅತೀಕ್ | ೧೧.೩.೨೦೦೦ | ೨೨.೬.೨೦೦೨ |
| ೪೨ | ಬಿ.ಪಿ.ಕಣಿರಾಮ್ | ೨೪.೬.೨೦೦೨ | – ಇಂದಿನವರೆಗೆ |